ಶನಿವಾರ, ಫೆಬ್ರುವರಿ 10, 2024 | ₹ 7.00
www.prajavani.net
prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಟ್ರೇಲರ್ ಬಿಡುಗಡೆ**
ಮುಂಬೈನಲ್ಲಿ ನಡೆದ ಸಿನಿಮಾದ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ನಟಿ ನೋರಾ ಫತೇಹಿ ಪಾಲ್ಗೊಂಡಿದ್ದರು



ಲೋಕೋಪಯೋಗಿ ಇಲಾಖೆಯಲ್ಲಿ ಹೊಸ ಆದ್ಯತಾ ಸೂತ್ರ ಜಾರಿ • 3 ವರ್ಷಗಳಿಂದ ಬಾಕಿ ಇದ್ದ ಮೊತ್ತ ಪಾವತಿ

# ಸಣ್ಣ ಗುತ್ತಿಗೆದಾರರ ಬಿಲ್‌ಗಳಿಗೆ ಮುಕ್ತಿ

• ವಿ.ಎಸ್. ಸುಬ್ರಹ್ಮಣ್ಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸಣ್ಣ ಗುತ್ತಿಗೆದಾರರ ಬಿಲ್‌ಗಳನ್ನು ಆದ್ಯತೆ ಮೇಲೆ ಪಾವತಿಸುವ ಹೊಸ ಸೂತ್ರವೊಂದನ್ನು ಲೋಕೋಪಯೋಗಿ ಇಲಾಖೆ ಅಳವಡಿಸಿಕೊಂಡಿದೆ. ಅಪೆಂಡಿಕ್ಸ್–ಇ ಅಡಿಯಲ್ಲಿನ ಕಾಮಗಾರಿಗಳ ಬಾಬ್ತು 1,054 ಸಣ್ಣ ಗುತ್ತಿಗೆದಾರರ ಬಿಲ್‌ಗಳನ್ನು ಕಳೆದ ವಾರ ಏಕಕಾಲದಲ್ಲಿ ಪಾವತಿಸಲಾಗಿದೆ.

ಅಪೆಂಡಿಕ್ಸ್–ಇ ಅಡಿಯಲ್ಲಿ ಜಿಲ್ಲಾ ಮುಖ್ಯ ರಸ್ತೆಗಳು ಮತ್ತು ರಾಜ್ಯ ಹೆದ್ದಾರಿಗಳ ನಿರ್ವಹಣೆ ಹಾಗೂ ಸುಧಾರಣೆ ಕಾಮಗಾರಿ ಕೈಗೊಂಡಿದ್ದ 1,945 ಗುತ್ತಿಗೆದಾರರಿಗೆ ಮೂರು ವರ್ಷಗಳಿಂದ ಬಿಲ್‌ಗಳ ಪಾವತಿ ಬಾಕಿ ಇತ್ತು. ಸಣ್ಣ ಗುತ್ತಿಗೆದಾರರು ತೀವ್ರವಾಗಿ ಸಂಕಷ್ಟಕ್ಕೆ ಸಿಲುಕಿದ್ದರು.

'ಸಣ್ಣ ಗುತ್ತಿಗೆದಾರರ ಬಾಕಿ ಬಿಲ್‌ಗಳನ್ನು ಆದ್ಯತೆಯ ಮೇಲೆ ಪಾವತಿಸಲು ಸೂತ್ರವೊಂದನ್ನು ರೂಪಿಸುವಂತೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದರು. ಸಚಿವರ ನಿರ್ದೇಶನದಂತೆ ಸಣ್ಣ ಗುತ್ತಿಗೆದಾರರಿಗೆ ಸುಮಾರು ₹ 500 ಕೋಟಿಯಷ್ಟು ಮೊತ್ತದ ಬಿಲ್‌ಗಳನ್ನು ಏಕಕಾಲಕ್ಕೆ ಪಾವತಿಸಲಾಗಿದೆ' ಎಂದು ಲೋಕೋಪಯೋಗಿ ಇಲಾಖೆ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಅಪೆಂಡಿಕ್ಸ್–ಇ ಅಡಿಯಲ್ಲಿ ಜಿಲ್ಲಾ ಮುಖ್ಯರಸ್ತೆ ಕಾಮಗಾರಿಗಳನ್ನು ಕೈಗೊಂಡಿದ್ದ 1,585 ಗುತ್ತಿಗೆದಾರರ ಪೈಕಿ 882 ಮತ್ತು ರಾಜ್ಯ ಹೆದ್ದಾರಿಗಳ ಕಾಮಗಾರಿಗಳನ್ನು ಕೈಗೊಂಡಿದ್ದ 360 ಗುತ್ತಿಗೆದಾರರ ಪೈಕಿ 172 ಮಂದಿಯ ಪೂರ್ಣ ಬಿಲ್‌ಗಳನ್ನು ಪಾವತಿಸಲಾಗಿದೆ. 2021, 2022 ಮತ್ತು 2023ರಲ್ಲಿ ಕೈಗೊಂಡಿದ್ದ ಕಾಮಗಾರಿಗಳ ಬಾಬ್ತು ಈ ಎಲ್ಲರಿಗೂ ₹ 1 ಕೋಟಿಗಿಂತ ಕಡಿಮೆ ಮೊತ್ತದ ಬಿಲ್‌ಗಳು ಬಾಕಿ ಇದ್ದವು.

ಲೋಕೋಪಯೋಗಿ ಇಲಾಖೆಯಲ್ಲಿ ಅಪೆಂಡಿಕ್ಸ್–ಇ ಅಡಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿದ್ದ ಸಣ್ಣ ಗುತ್ತಿಗೆದಾರರಿಗೆ ಬಿಲ್ ಪಾವತಿಯಲ್ಲಿ ಸಮಸ್ಯೆಯಾಗಿತ್ತು. ಆರ್ಥಿಕ ಒತ್ತಡಕ್ಕೆ ಸಿಲುಕಿದ್ದ ಹಲವರು ಸಚಿವರನ್ನು ಭೇಟಿಮಾಡಿ, ಬಿಲ್ ಪಾವತಿಯಲ್ಲಿ ಸಣ್ಣ ಗುತ್ತಿಗೆದಾರರಿಗೆ ಆದ್ಯತೆ ನೀಡುವಂತೆ ಮನವಿ ಮಾಡಿದ್ದರು. ಈ ಕಾರಣದಿಂದ ಹೊಸ ಸೂತ್ರ ಜಾರಿಗೊಳಿಸಲಾಗಿದೆ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

**ಮತ್ತಷ್ಟು ಸುಧಾರಣೆಗೆ ಸೂಚನೆ:** ಅಪೆಂಡಿಕ್ಸ್–ಇ ಕಾಮಗಾರಿಗಳ ಬಿಲ್ ಪಾವತಿಯಲ್ಲಿನ ಬದಲಾವಣೆ ಬೆನ್ನಲ್ಲೇ, ಉಳಿದ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲೂ ಬಾಕಿ ಬಿಲ್ ಪಾವತಿಯಲ್ಲಿ ಸುಧಾರಣೆ ತರುವಂತೆ ಸಚಿವರು ಸೂಚಿಸಿದ್ದಾರೆ. ಎಲ್ಲ ವಿಭಾಗಗಳಲ್ಲೂ ಸಣ್ಣ ಗುತ್ತಿಗೆದಾರರ ಬಾಕಿ ಬಿಲ್‌ಗಳನ್ನು ಒಂದು ಬಾರಿಗೆ ಆದ್ಯತೆಯ ಮೇಲೆ ಪೂರ್ಣವಾಗಿ ಪಾವತಿಸುವ ಪ್ರಸ್ತಾವವಿದೆ ಎಂದು ಮೂಲಗಳು ತಿಳಿಸಿವೆ.

ದೀರ್ಘ ಕಾಲದಿಂದ ಬಾಕಿ ಉಳಿದಿದ್ದ ಕಾಮಗಾರಿಗಳ ಟೆಂಡರ್ ಪ್ರಕಟಣೆ ಜಾಹೀರಾತು ಶುಲ್ಕ, ಅರಣ್ಯ ಇಲಾಖೆಗೆ ಪಾವತಿಸಬೇಕಿದ್ದ ಸೆಸ್, ಭೂಸ್ವಾಧೀನ ವೆಚ್ಚವನ್ನೂ ಒಂದು ಬಾರಿಗೆ ಸಂಪೂರ್ಣ ಪಾವತಿಸಲಾಗಿದೆ. ಇದರಿಂದಾಗಿ ಇಲಾಖೆಯಲ್ಲಿ ಬಾಕಿ ಬಿಲ್‌ಗಳ ಸಂಖ್ಯೆ ಗಣನೀಯವಾಗಿ ತಗ್ಗಿದೆ.

### 'ಸಂಕಷ್ಟ ಪರಿಹಾರಕ್ಕೆ ಕ್ರಮ'


ಸತೀಶ ಜಾರಕಿಹೊಳಿ

'ಮೂರು ವರ್ಷಗಳಿಂದ ಬಿಲ್ ಪಾವತಿ ಆಗದೇ ಇರುವುದರಿಂದ ಸಣ್ಣ ಗುತ್ತಿಗೆದಾರರು ಸಂಕಷ್ಟದಲ್ಲಿದ್ದರು. ಅವರು ಆರ್ಥಿಕವಾಗಿ ಮತ್ತಷ್ಟು ಬಿಕ್ಕಟ್ಟಿಗೆ ಸಿಲುಕದಂತೆ ರಕ್ಷಿಸುವ ಉದ್ದೇಶದಿಂದ ಸಾವಿರಕ್ಕೂ ಹೆಚ್ಚು ಸಣ್ಣ ಗುತ್ತಿಗೆದಾರರ ಬಿಲ್‌ಗಳನ್ನು ಆದ್ಯತೆ ಮೇಲೆ ಪಾವತಿಸಿದ್ದೇವೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ದೊಡ್ಡ ಗುತ್ತಿಗೆದಾರರಿಗೆ ಆರ್ಥಿಕ ಒತ್ತಡ ತಡೆದುಕೊಳ್ಳಲು ಶಕ್ತಿ ಇರುತ್ತದೆ. ಸಣ್ಣ ಗುತ್ತಿಗೆದಾರರು ಅಂತಹ ಒತ್ತಡ ಎದುರಿಸುವ ಸ್ಥಿತಿಯಲ್ಲಿ ಇರುವುದಿಲ್ಲ. ಈ ಕಾರಣದಿಂದ ಆದ್ಯತೆ ನೀಡುವ ಸೂತ್ರ ಜಾರಿಗೊಳಿಸಲಾಗಿದೆ' ಎಂದರು.

### ಇನ್ನೂ ₹4,000 ಕೋಟಿ ಬಾಕಿ

ಲೋಕೋಪಯೋಗಿ ಇಲಾಖೆಯಲ್ಲಿ ಗುತ್ತಿಗೆದಾರರಿಗೆ ₹ 4,000 ಕೋಟಿಯಷ್ಟು ಮೊತ್ತದ ಬಿಲ್‌ಗಳು ಇನ್ನೂ ಬಾಕಿ ಇವೆ. ಬಾಕಿ ಪಾವತಿಗೆ ಅನುದಾನ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ದೊಡ್ಡ ಮೊತ್ತದ ಕಾಮಗಾರಿಗಳನ್ನು ಕೈಗೊಂಡಿರುವ ಗುತ್ತಿಗೆದಾರರ ಬಾಕಿ ಬಿಲ್‌ಗಳಲ್ಲಿ ಶೇಕಡ 25ರಿಂದ 30ರಷ್ಟನ್ನು ಹದಿನೈದು ದಿನಗಳೊಳಗೆ ಪಾವತಿಸುವ ಗುರಿ ಇದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

## ಸುದ್ದಿ 2 ನಿಮಿಷ

### 'ಬರ ನಿರ್ವಹಣೆಗೆ ₹600 ಕೋಟಿ ಲಭ್ಯ'

ಕಲಬುರಗಿ: ರಾಜ್ಯದಲ್ಲಿ ತೀವ್ರ ಬರಗಾಲ ಎದುರಾಗಿರುವುದರಿಂದ ಬರ ಪರಿಹಾರ ಕಾರ್ಯಗಳಿಗೆ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ₹600 ಕೋಟಿ ಲಭ್ಯವಿದೆ. ಕುಡಿಯುವ ನೀರಿಗಾಗಿ ತಲಾ ₹ 25 ಲಕ್ಷ ನೀಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆದ್ಯತೆಯ ಮೇರೆಗೆ ಬರ ಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

'ಗ್ರಾಮ ಪಂಚಾಯಿತಿಯಲ್ಲಿ ಬಾಕಿ ಇರುವ ತೆರಿಗೆಯನ್ನು ಕಟ್ಟುನಿಟ್ಟಾಗಿ ವಸೂಲಿ ಮಾಡುವಂತೆ ಪಂಚಾಯಿತಿಗಳಿಗೆ ಸೂಚಿಸಲಾಗಿದೆ. ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಖಾಸಗಿ ವಿಶ್ವವಿದ್ಯಾಲಯಗಳು, ಕೈಗಾರಿಕೆಗಳು ಆರಂಭವಾಗಿರುತ್ತವೆ. ಅವುಗಳಿಗೆ ನಿಗದಿತ ಪ್ರಮಾಣದ ತೆರಿಗೆ ನಿಗದಿಯಾಗಿರುವುದಿಲ್ಲ. ಅವುಗಳನ್ನು ನಿಗದಿ ಮಾಡಿ ನಿಯಮಿತವಾಗಿ ತೆರಿಗೆ ವಸೂಲಾದರೆ ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಬಹುದಾಗಿದೆ' ಎಂದರು.

'ತೆರಿಗೆ ಸಂಗ್ರಹವನ್ನು ಸರಳಗೊಳಿಸಲು ಬಿಲ್ ಕಲೆಕ್ಟರ್‌ಗಳಿಗೆ ಪಿಒಎಸ್ ಮಷಿನ್‌ಗಳನ್ನು ಒದಗಿಸಲಾಗಿದೆ. ಇವುಗಳನ್ನು ನೀಡಿದ ಬಳಿಕ ತೆರಿಗೆ ಸಂಗ್ರಹದಲ್ಲಿ ಏರಿಕೆಯಾಗಿದೆ. ಇಲ್ಲಿಯವರೆಗೆ ರಾಜ್ಯದ ವಿವಿಧ ಪಂಚಾಯಿತಿಗಳಲ್ಲಿ ₹ 600 ಕೋಟಿ ತೆರಿಗೆ ಸಂಗ್ರಹವಾಗಿದೆ. ಬರುವ ಆರ್ಥಿಕ ವರ್ಷದಲ್ಲಿ ಈ ಪ್ರಮಾಣ ಹೆಚ್ಚಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.



### ಮಂಡ್ಯ ಬಂದ್ ವಿಫಲ

ಮಂಡ್ಯ: ತಾಲ್ಲೂಕಿನ ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ತೆರವು ಖಂಡಿಸಿ ಸಂಘ ಪರಿವಾರ ಶುಕ್ರವಾರ ಕರೆ ನೀಡಿದ್ದ ಕೆರಗೋಡು ಗ್ರಾಮ ಹಾಗೂ ಮಂಡ್ಯ ನಗರ ಬಂದ್ ಸಂಪೂರ್ಣವಾಗಿ ವಿಫಲಗೊಂಡಿತು. ಬಂದ್ ಆಚರಣೆಯು ಬೈಕ್ ರ‍್ಯಾಲಿ, ಮೆರವಣಿಗೆಗಷ್ಟೇ ಸೀಮಿತವಾಯಿತು.

ಆರ್‌ಎಸ್‌ಎಸ್, ವಿಎಚ್‌ಪಿ, ಬಜರಂಗದಳ, ಬಜರಂಗ ಸೇನೆ, ಶ್ರೀರಾಮ ಭಜನಾಮಂಡಳಿಯ ನೂರಾರು ಕಾರ್ಯಕರ್ತರು ಬೆಳಿಗ್ಗೆ ಗ್ರಾಮದ ವೀರಾಂಜನೇಯ ದೇವಾಲಯದಲ್ಲಿ ಪೂಜೆ ಸಲ್ಲಿಸಿ ನಗರದವರೆಗೂ ಬೈಕ್ ರ‍್ಯಾಲಿ ನಡೆಸಿದರು. ಗ್ರಾಮದಲ್ಲಿ ಬೆಳಿಗ್ಗೆ ಮುಚ್ಚಿದ್ದ ಅಂಗಡಿಗಳು ಬೈಕ್‌ರ‍್ಯಾಲಿ ಹೊರಟ ನಂತರ ಬಾಗಿಲು ತೆರೆದವು.

ಬೆಳಿಗ್ಗೆ 11 ಗಂಟೆಗೆ ರ‍್ಯಾಲಿಯು ನಗರದ ಆಂಜನೇಯ ದೇವಾಲಯ ತಲುಪಿತು. ಕಾರ್ಯಕರ್ತರು ದೇವಾಲಯದಿಂದ ಜಿಲ್ಲಾಧಿಕಾರಿ ಕಚೇರಿವರೆಗೂ ಮೆರವಣಿಗೆ ನಡೆಸಿದರು. ಬಂದ್ ಕರೆಯು ನಗರದಲ್ಲಿ ಯಾವುದೇ ಪರಿಣಾಮ ಬೀರಲಿಲ್ಲ. ಅಂಗಡಿಗಳು ತೆರೆದಿದ್ದವು. ಆಟೊ, ಬಸ್ ಸಂಚಾರ ಎಂದಿನಂತಿತ್ತು. ಅಂಗಡಿ ಮುಚ್ಚುವಂತೆ ಕಾರ್ಯಕರ್ತರು ಬಲವಂತ ಮಾಡಲಿಲ್ಲ.

ಮೆರವಣಿಗೆಯುದ್ದಕ್ಕೂ ಶಾಸಕ ಗಣಿಗ ರವಿಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪ್ರತಿಭಟನಾಕಾರರು ಘೋಷಣೆ ಕೂಗಿದರು.

## 8 ಐಎಫ್‌ಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನ ಮುಖ್ಯ ಅರಣ್ಯ ಸಂರಕ್ಷಕ ವಿಜಯ್ ಶರ್ಮಾ ಅವರನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕಾನೂನು ವಿಭಾಗಕ್ಕೆ ವರ್ಗಾವಣೆ ಮಾಡಿದ್ದು, ಇವರೂ ಸೇರಿ ಒಟ್ಟು ಎಂಟು ಐಎಫ್‌ಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ.

ಬ್ರಿಜೇಶ್‌ಕುಮಾರ್– ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಪಿಸಿಸಿಎಫ್) ಅರಣ್ಯ ವಿಭಾಗ, ಬೆಂಗಳೂರು. ಪ್ರಭಾಶ್ ಚಂದ್ರ ರೇ– ಅರಣ್ಯ ಇಲಾಖೆ ಕಾರ್ಯದರ್ಶಿ. ಡಾ.ಸಂಜಯ್ ಬಿಜ್ಜೂರ್– ಎಪಿಸಿಸಿಎಫ್, ಕ್ಯಾಂಪಾ, ಬೆಂಗಳೂರು. ಅಶ್ವಿನಿ ಕುಮಾರ್ ಸಿಂಗ್– ಎಪಿಸಿಸಿಎಫ್ (ಸಂಶೋಧನೆ), ಬೆಂಗಳೂರು.

ಲಿಂಗರಾಜ ಎಸ್‌ಎಸ್–ಎಪಿಸಿಸಿಎಫ್, ಆಡಳಿತ ಮತ್ತು ಸಮನ್ವಯ, ಬೆಂಗಳೂರು. ಇವರಿಗೆ ಮೈಸೂರು ಹುಲಿ ಸಂರಕ್ಷಣೆ ಯೋಜನೆಯ ಎಪಿಸಿಸಿಎಫ್ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಸುನಿಲ್ ಪನ್ವಾರ್– ಎಪಿಸಿಸಿಎಫ್, ಮೈಸೂರು ಮೃಗಾಲಯ ಇಲ್ಲಿ ವರ್ಗಾವಣೆ ಮಾಡಲಾಗಿದೆ.

# 'ಎಸ್‌ಟಿಗೆ ಪರಿವಾರ, ತಳವಾರ ಸೇರ್ಪಡೆ'

ಹರಿಹರ: ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಜನಜಾಗೃತಿ ಜಾತ್ರಾ ಮಹೋತ್ಸವದಲ್ಲಿ ಸಿ.ಎಂ ಹೇಳಿಕೆ

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ): 'ರಾಜ್ಯದಲ್ಲಿರುವ ಪರಿವಾರ, ತಳವಾರ ಸಮುದಾಯದವರನ್ನೂ ಪರಿಶಿಷ್ಟ ಪಂಗಡಕ್ಕೆ (ಎಸ್ಟಿ) ಸೇರಿಸಲು ತೀರ್ಮಾನಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಜನಜಾಗೃತಿ ಜಾತ್ರಾ ಮಹೋತ್ಸವದಲ್ಲಿ ಮಾತನಾಡಿದರು.

'ಕೇಂದ್ರ ಸರ್ಕಾರವು ಪರಿವಾರ, ತಳವಾರ ಜಾತಿಗಳನ್ನು ಈಗಾಗಲೇ ಪರಿಶಿಷ್ಟ ಪಂಗಡಕ್ಕೆ ಸೇರಿಸಿದೆ. ರಾಜ್ಯದ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು, ಹಾಸನ ಜಿಲ್ಲೆಗಳಲ್ಲಿ ರುವ ಈ ಸಮುದಾಯದವರನ್ನು ಎಸ್‌ಟಿಗೆ ಸೇರಿಸುವ ಸಂಬಂಧ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ಸಮುದಾಯದವರ ಮೇಲೆ ದಾಖಲಾಗಿರುವ ಎಲ್ಲಾ ಪ್ರಕರಣಗಳನ್ನು ವಾಪಸ್ ಪಡೆಯಲು ಸೂಚಿಸುತ್ತೇನೆ' ಎಂದು ಹೇಳಿದರು.

'ರಾಜ್ಯದ ಯಾವುದಾದರೂ ಒಂದು ವಿಶ್ವವಿದ್ಯಾಲಯಕ್ಕೆ ವಾಲ್ಮೀಕಿ ಹೆಸರು ನಾಮಕರಣ ಮಾಡುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ. ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿಯನ್ವಯ ಪರಿಶಿಷ್ಟ ಜಾತಿಗೆ ಶೇ 17 ಮತ್ತು ಪ.ಪಂಗಡಕ್ಕೆ ಶೇ 7 ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಇದರಿಂದ ಲಭ್ಯವಾಗುವ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

'ಹಿಂದೆ ಜನಸಂಖ್ಯೆಗೆ ಅನುಗುಣವಾಗಿ ಈ ಸಮುದಾಯಗಳಿಗೆ ಹಣ ಮೀಸಲಿಡುವಂತೆ ಕಾನೂನು ಮಾಡಿದ್ದೆ. ಕೇಂದ್ರವೂ ಈ ಕಾನೂನು ಜಾರಿಗೆ ತರಬೇಕು' ಎಂದು ಒತ್ತಾಯಿಸಿದರು.


ಹೊಸದುರ್ಗ ತಾಲ್ಲೂಕಿನ ಬ್ರಹ್ಮವಿದ್ಯಾನಗರದ ಭಗೀರಥ ಮಹಾಸಂಸ್ಥಾನ ಮಠದ ಆವರಣದಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಪುರುಷೋತ್ತಮಾನಂದಪುರಿ ಸ್ವಾಮೀಜಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 'ಭಗೀರಥ ಶ್ರೀ' ಪ್ರಶಸ್ತಿ ಪ್ರದಾನ ಮಾಡಿದರು. ಎಂಎಸ್‌ಐಎಲ್ ಅಧ್ಯಕ್ಷ ಸಿ.ಪುಟ್ಟರಂಗಶೆಟ್ಟಿ, ಶಾಸಕ ಬಿ.ಜಿ.ಗೋವಿಂದಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಆಹಾರ ಸಚಿವ ಕೆ.ಎಚ್‌.ಮುನಿಯಪ್ಪ ಪಾಲ್ಗೊಂಡಿದ್ದರು

### 'ಸುಳ್ಳು ಹೇಳಿದ್ದರೆ ರಾಜಕೀಯದಿಂದ ನಿವೃತ್ತಿ'

ಹರಿಹರ (ದಾವಣಗೆರೆ): 'ತೆರಿಗೆ ವಿಚಾರದಲ್ಲಿ ಸುಳ್ಳು ಹೇಳಿದ್ದರೆ ರಾಜಕೀಯ ಬಿಟ್ಟುಬಿಡುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ಕೇಂದ್ರದಿಂದ ರಾಜ್ಯಕ್ಕೆ ಅನ್ಯಾಯವಾಗಿರುವುದನ್ನು ಪ್ರಶ್ನಿಸುವುದು ತಪ್ಪೇ' ಎಂದು ಸುದ್ದಿಗಾರರನ್ನು ಪ್ರಶ್ನಿಸಿದರು.

'ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಕೇಂದ್ರದ ವಿರುದ್ಧ ಧ್ವನಿ ಎತ್ತಲಿಲ್ಲ. ಬಿಜೆಪಿ ನಾಯಕರು ರಾಜ್ಯ ಸರ್ಕಾರವನ್ನು ಟೀಕಿಸುವ ಬದಲು ತೆರಿಗೆ ವಿಚಾರವಾಗಿ ಅಮಿತ್ ಶಾ ಜೊತೆ ಮಾತನಾಡಲಿ' ಎಂದು ಸವಾಲು ಹಾಕಿದರು.

### '₹650 ಕೋಟಿ ತಾತ್ಕಾಲಿಕ ಬರ ಪರಿಹಾರ'

'ಬರದ ಹಿನ್ನೆಲೆಯಲ್ಲಿ ರಾಜ್ಯದ ಜನರಿಗೆ ಕುಡಿಯುವ ನೀರು, ಮೇವು, ಉದ್ಯೋಗ ಒದಗಿಸಲಾಗುತ್ತಿದೆ. ರಾಜ್ಯದಿಂದ ₹860 ಕೋಟಿ ಪರಿಹಾರ ಮೊತ್ತ ಬಿಡುಗಡೆ ಮಾಡಲಾಗಿದ್ದು, ಇದನ್ನು ಎಲ್ಲಾ ಜಿಲ್ಲಾಧಿಕಾರಿಗಳ ಖಾತೆಗೂ ಜಮೆ ಮಾಡಲಾಗಿದೆ. ಜನರು ಗುಳೇ ಹೋಗದಂತೆ ತಡೆಯಲು ಹಾಗೂ ಕುಡಿಯುವ ನೀರಿಗೆ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಈ ಬಗ್ಗೆ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ' ಎಂದು ಸಿದ್ದರಾಮಯ್ಯ ಅವರು ಹೇಳಿದರು.

'₹2000ದಂತೆ ಅಂದಾಜು 34 ಲಕ್ಷ ರೈತರಿಗೆ ₹650 ಕೋಟಿ ತಾತ್ಕಾಲಿಕ ಪರಿಹಾರ ನೀಡಲಾಗಿದೆ. 5 ತಿಂಗಳು ಕಳೆದರೂ ಕೇಂದ್ರ ಸರ್ಕಾರ ಬರ ಪರಿಹಾರ ನೀಡಿಲ್ಲ. ರಾಜ್ಯದ ಬಿಜೆಪಿ ನಾಯಕರು ಕೇವಲ ಭಾಷಣ ಮಾಡುತ್ತಾರೆಯೇ ಹೊರತು, ಕೇಂದ್ರದೊಂದಿಗೆ ಚರ್ಚಿಸಿ ಪರಿಹಾರ ದೊರಕಿಸಿ ಕೊಡುತ್ತಿಲ್ಲ' ಎಂದರು.


### 'ಜನರೇ ದೇಗುಲ ಕಟ್ಟಿ ಪೂಜಾರಿಗಳಾಗಲಿ'

ಹೊಸದುರ್ಗ (ಚಿತ್ರದುರ್ಗ): 'ಕನಕ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ ಪ್ರವೇಶಿಸಿದ ದೇಗುಲವನ್ನು ತೊಳೆದ ವಿಚಾರ ಬೇಸರ ಮೂಡಿಸಿದೆ. ಸಂವಿಧಾನ ಅನುಷ್ಠಾನಕ್ಕೆ ಬಂದು ಇಷ್ಟು ವರ್ಷ ಕಳೆದರೂ ರಾಜ್ಯದಲ್ಲಿ ಇಂತಹ ಸ್ಥಿತಿ ಇರುವುದು ವಿಪರ್ಯಾಸ. ಪ್ರವೇಶ ಇಲ್ಲದೇ ಇರುವ ದೇಗುಲಕ್ಕೆ ಹೋಗದಂತೆ ನಾರಾಯಣ ಗುರು ಹೇಳಿದ್ದಾರೆ. ಆದ್ದರಿಂದ ಜನರೇ ದೇಗುಲ ಕಟ್ಟಿಕೊಂಡು ಪೂಜಾರಿಗಳಾಗಬೇಕು. ದೇವರ ಪೂಜೆ ಮಾಡಲು ಮೇಲಿಂದ ಯಾರೂ ಬರಬೇಕಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಾಲ್ಲೂಕಿನ ಬ್ರಹ್ಮವಿದ್ಯಾನಗರದ ಭಗೀರಥ ಗುರುಪೀಠದಲ್ಲಿ ಶುಕ್ರವಾರ ಏರ್ಪಡಿಸಿದ್ದ ಪುರುಷೋತ್ತಮಾನಂದಪುರಿ ಸ್ವಾಮೀಜಿ ಅವರ ಪಟ್ಟಾಭಿಷೇಕದ ರಜತ ಮಹೋತ್ಸವ ಸಮಾರಂಭದಲ್ಲಿ 'ಭಗೀರಥಶ್ರೀ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

## ಅಬ್ದುಲ್ ಖದೀರ್‌ಗೆ 'ಸಿಲ್ವರ್ ಎಲಿಫೆಂಟ್' ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಅಬ್ದುಲ್ ಖದೀರ್

ಬೀದರ್: ನಗರದ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷ ಅಬ್ದುಲ್ ಖದೀರ್ ಅವರು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ 'ಸಿಲ್ವರ್ ಎಲಿಫೆಂಟ್' ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಗೆ ನೀಡಿದ ಅನುಪಮ ಕೊಡುಗೆಗಾಗಿ ಅಬ್ದುಲ್ ಖದೀರ್ ಅವರನ್ನು 2023–24ನೇ ಸಾಲಿನ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅತ್ಯುನ್ನತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ರಾಷ್ಟ್ರಪತಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಗೈಡ್ಸ್‌ನ ರಾಷ್ಟ್ರೀಯ ಹೆಚ್ಚುವರಿ ಮುಖ್ಯ ಆಯುಕ್ತ ಎಂ.ಎ. ಖಾಲೀದ್ ಶುಕ್ರವಾರ ತಿಳಿಸಿದ್ದಾರೆ.

# ಬೆಳಗಾವಿಗೆ ಹೊಸ ಮುಖ ಚಿಕ್ಕೋಡಿಗೆ ಹಳೆ ಮುಖ

• ಸಂತೋಷ ಈ. ಚಿನಗುಡಿ


ಡಾ.ಗಿರೀಶ ಸೋನವಾಲ್ಕರ


ಮೃಣಾಲ್ ಹೆಬ್ಬಾಳಕರ

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ಬೆಳಗಾವಿ: ಈ ಬಾರಿ ಬೆಳಗಾವಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಹೊಸ ಮುಖಕ್ಕೆ ನೀಡುವ ಸಾಧ್ಯತೆ ಹೆಚ್ಚಿದೆ. ಇಬ್ಬರ ಹೆಸರನ್ನು ಹೈಕಮಾಂಡ್ ಕಳುಹಿಸಿದ್ದರೂ ಜಿಲ್ಲೆಯ ನಾಯಕರು ಒಬ್ಬರ ಪರ ಲಾಬಿ ನಡೆಸಿದ್ದಾರೆ.

ಸಚಿವ ಸತೀಶ ಜಾರಕಿಹೊಳಿ ಅವರ ಅತ್ಯಾಪ್ತ ಡಾ.ಗಿರೀಶ ಸೋನವಾಲ್ಕರ ಮತ್ತು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಪುತ್ರ ಮೃಣಾಲ್ ಹೆಸರು ಹೈಕಮಾಂಡ್ ಕೈ ಸೇರಿವೆ. ಡಾ.ಗಿರೀಶ ಅವರಿಗೆ ಟಿಕೆಟ್ ಕೊಡುವ ಬಗ್ಗೆ ಸಚಿವೆ ಹೆಬ್ಬಾಳಕರ ತಕರಾರು ಇಲ್ಲ. ತಮ್ಮ ಪುತ್ರನಿಗೆ ಟಿಕೆಟ್ ಕೊಡಬೇಕು ಎಂಬ ಹಟವೂ ಇಲ್ಲ. 'ಭವಿಷ್ಯದಲ್ಲಿ ಅವರೂ ಒಬ್ಬ ಆಕಾಂಕ್ಷಿ ಎಂಬುದನ್ನು ವ್ಯಕ್ತಪಡಿಸಲು ಟಿಕೆಟ್ ಕೇಳಿದ್ದಾರೆ' ಎನ್ನುತ್ತವೆ ಮೂಲಗಳು.

**ಯಾರು ಈ ಗಿರೀಶ?:** ಅವಿಭಜಿತ ಗೋಕಾಕ ತಾಲ್ಲೂಕಿನ ಮೂಡಲಗಿಯವರು (ಸದ್ಯ ಹೊಸ ತಾಲ್ಲೂಕು) ಡಾ.ಗಿರೀಶ. ಕೃಷಿ, ಸಹಕಾರ ಕ್ಷೇತ್ರದಲ್ಲಿ ಅವರ ಕುಟುಂಬಕ್ಕೆ ದೊಡ್ಡ ಹೆಸರಿದೆ. ಗಿರೀಶ ಅವರ ತಂದೆ ಕೃಷ್ಣಪ್ಪ ಸೋನವಾಲ್ಕರ 1994ರಲ್ಲಿ ರೈತಸಂಘದಿಂದ ಅರಬಾವಿ ವಿಧಾನಸಭಾ ಕ್ಷೇತ್ರಕ್ಕೆ ಸ್ಪರ್ಧಿಸಿ, ಸೋತಿದ್ದರು. ಆಗಿನಿಂದ ಸೋನವಾಲ್ಕರ ಕುಟುಂಬ ಜಾರಕಿಹೊಳಿ ಕುಟುಂಬಗಳಿಗೆ ಆಪ್ತ. ಗಿರೀಶ ಅವರು ಬೆಳಗಾವಿ 'ಲೇಕ್‌ವೀವ್' ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ನಿರ್ದೇಶಕ ಕೂಡ.

'ಸಚಿವ ಸತೀಶ ಜಾರಕಿಹೊಳಿ ತಮ್ಮ ಪುತ್ರಿಗೆ ಟಿಕೆಟ್ ಕೇಳುತ್ತಾರೆ ಅಥವಾ ಹೈಕಮಾಂಡ್ ಒತ್ತಡಕ್ಕೆ ಮಣಿದು ತಾವೇ ಕಣಕ್ಕೆ ಇಳಿಯುತ್ತಾರೆ' ಎಂಬ ಸುದ್ದಿ ಈಗ ಹಳತಾಗಿದೆ. 'ಸೋನವಾಲ್ಕರಗೆ ಟಿಕೆಟ್ ಕೊಡಬೇಕು' ಎಂದು ಪಟ್ಟು ಹಿಡಿಯುವ ಮೂಲಕ ಸತೀಶ ಅಚ್ಚರಿ ಹೆಜ್ಜೆ ಇಟ್ಟಿದ್ದಾರೆ.


'ಸತೀಶ ಜಾರಕಿಹೊಳಿ ಅವರೇ ಈ ಬಾರಿ ಸ್ಪರ್ಧಿಸಬೇಕು ಎಂಬ ಒತ್ತಡ ಹೈಕಮಾಂಡ್‌ನಿಂದ ಇದೆ. ಈ ವಿಚಾರದಲ್ಲಿ ಸಚಿವರನ್ನು ಒಪ್ಪಿಸುವಂತೆ ಜಿಲ್ಲೆಯ ನಾಯಕರಿಗೂ ಒತ್ತಡ ಹೇರಲಾಗಿದೆ. ನಾವು ಇನ್ನೂ ಕಾದು ನೋಡುತ್ತಿದ್ದೇವೆ' ಎಂಬುದು ಪಕ್ಷದ ಹಿರಿಯರು ನೀಡುವ ಮಾಹಿತಿ.

'ಸೋನವಾಲ್ಕರ ಕಾಂಗ್ರೆಸ್ ಸೇರಿಲ್ಲ. ಅವರಿಗೆ ಮಣೆ ಹಾಕಬಾರದು' ಎಂದು ಪಕ್ಷದ ಕೆಲ ಮುಖಂಡರು ಸಚಿವರನ್ನು ಒತ್ತಾಯಿಸಿದ್ದಾರೆ. 'ಟಿಕೆಟ್‌ಗೆ ಅರ್ಜಿ ಹಾಕಿದರೆ ಪಕ್ಷ ಸೇರಿದಂತೆ ಅರ್ಥ' ಎಂದು ಕಡ್ಡಿ ಮುರಿದಂತೆ ಹೇಳಿದ ಸಚಿವ ಸತೀಶ, ತಮ್ಮ ನಿಲುವು ಯಾವುದೇ ಕಾರಣಕ್ಕೂ ಬದಲಾಗುವುದಿಲ್ಲ ಎಂಬ ಸಂದೇಶ ನೀಡಿದ್ದಾರೆ.

'ನನ್ನ ಪುತ್ರ ಕೂಡ ಟಿಕೆಟ್ ಆಕಾಂಕ್ಷಿ. ಆದರೆ, ಪಕ್ಷದ ನಿರ್ಧಾರವೇ ಅಂತಿಮ' ಎಂದು ಹೇಳಿ ಲಕ್ಷ್ಮಿ ಹೆಬ್ಬಾಳಕರ ಕೂಡ ಸೋನವಾಲ್ಕರ ಹೆಸರಿಗೆ ಸಹಮತ ವ್ಯಕ್ತಪಡಿಸಿದ್ದಾರೆ.

**ಲೆಕ್ಕಾಚಾರ ಏನು?:** ಡಾ.ಗಿರೀಶ ಲಿಂಗಾಯತ ರೆಡ್ಡಿ ಸಮುದಾಯದವರು. ಜಿಲ್ಲೆಯಲ್ಲಿ ಲಿಂಗಾಯತ, ಕುರುಬ ಮತ್ತು ಅಹಿಂದ ಸಮುದಾಯದ ಮತದಾರರ ಸಂಖ್ಯೆ ಹೆಚ್ಚಿದೆ. ಗಿರೀಶ ಅವರಿಗೆ ಟಿಕೆಟ್ ಕೊಡುವ ಮೂಲಕ ಈ ಎಲ್ಲ ಸಮುದಾಯಗಳ ಮತ ಒಗ್ಗೂಡಿಸಿ ಮುಸ್ಲಿಂ ಮತಗಳನ್ನೂ ಸೇರಿಸಿದರೆ ಗೆಲುವು ಸುಲಭ ಎನ್ನುವುದು ಸತೀಶ ಜಾರಕಿಹೊಳಿ ಅವರ ತಂತ್ರ ಎನ್ನುತ್ತವೆ ಮೂಲಗಳು.

### ಪ್ರಕಾಶ ಹುಕ್ಕೇರಿ ಗುಡುಗಿದ್ದು ಏಕೆ?


ಪ್ರಕಾಶ ಹುಕ್ಕೇರಿ


ಲಕ್ಷ್ಮಣರಾವ್ ಚಿಂಗಳೆ

'ಚಿಕ್ಕೋಡಿ ಲೋಕಸಭಾ ಕ್ಷೇತ್ರಕ್ಕೆ ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಮತ್ತು ಕಾಂಗ್ರೆಸ್ ಚಿಕ್ಕೋಡಿ ಜಿಲ್ಲಾ ಘಟಕದ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ ಅವರ ಹೆಸರನ್ನು ಸೂಚಿಸಲಾಗಿದೆ' ಎಂದು ಮೂಲಗಳು ಖಚಿತಪಡಿಸಿವೆ.

2014ರಲ್ಲಿ ಪ್ರಕಾಶ ಹುಕ್ಕೇರಿ ಸಂಪುಟ ದರ್ಜೆ ಸಚಿವರಾಗಿದ್ದರು. ರಾಜೀನಾಮೆ ಕೊಡಿಸಿ ಲೋಕಸಭಾ ಕ್ಷೇತ್ರಕ್ಕೆ ನಿಲ್ಲಿಸಲಾಯಿತು. ಆಗ ಗೆದ್ದ ಅವರು 2019ರಲ್ಲಿ ಅಣ್ಣಾಸಾಹೇಬ ಜೊಲ್ಲೆ ವಿರುದ್ಧ ಸೋತರು. ಐದು ವರ್ಷ 'ರಾಜಕೀಯ ವನವಾಸ' ಅನುಭವಿಸಿದ ಬಳಿಕ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದಾರೆ. ಮತ್ತೆ ಲೋಕಸಭೆಗೆ ನಿಲ್ಲಿಸಬೇಕು ಎಂದು ಒತ್ತಡ ಹೇರಲಾಗುತ್ತಿದೆ. 2014ರಲ್ಲಿ ಪ್ರಕಾಶ ಅವರ ವಿರುದ್ಧ ಸತೀಶ ಜಾರಕಿಹೊಳಿ ಈ ರಾಜಕೀಯ ದಾಳ ಬೀಸಿದ್ದರು, ಈಗಲೂ ಅದೇ ದಾಳ ಬೀಸಿದ್ದಾರೆ ಎಂಬುದು ಪಕ್ಷದ ಕೆಲ ಮುಖಂಡರ ಅನಿಸಿಕೆ.

ಈ ಬೆಳವಣಿಗೆಗಳಿಂದ ಕುದ್ದುಹೋಗಿರುವ ಪ್ರಕಾಶ ಅವರು, 'ಪದೇಪದೇ ಒದಿಸಿಕೊಳ್ಳಲು ನಾನೇನು ಫುಟ್‌ಬಾಲ್ ಅಲ್ಲ' ಎಂದು ತಿರುಗುಬಾಣ ಬಿಟ್ಟಿದ್ದಾರೆ.

'ಸಾಮಾಜಿಕ ನ್ಯಾಯತಂತ್ರ' ಅಡಿ ಕುರುಬ ಸಮಾಜಕ್ಕೆ ಟಿಕೆಟ್ ನೀಡುವುದಾಗಿ ಹೇಳಿದ್ದ ಸತೀಶ ಅವರು, ಲಕ್ಷ್ಮಣರಾವ್ ಚಿಂಗಳೆ ಹೆಸರನ್ನೂ ಸೂಚಿಸಿದ್ದಾರೆ. ಆದರೆ, ಯಾರಿಗೆ ಟಿಕೆಟ್ ಎಂಬುದು ಮಾತ್ರ ಇನ್ನೂ ನಿಗೂಢವಾಗಿದೆ.

# ಮಂಡ್ಯ ಕ್ಷೇತ್ರಕ್ಕಾಗಿ ಸುಮಲತಾ ಸುತ್ತಾಟ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ– ಜೆಡಿಎಸ್ ಮೈತ್ರಿಯ ಬೆನ್ನಲ್ಲೇ ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರು ಮಂಡ್ಯದಿಂದಲೇ ಸ್ಪರ್ಧಿಸುವ ಸಂಬಂಧ ಬಿಜೆಪಿ ಹಿರಿಯ ನಾಯಕರನ್ನು ಭೇಟಿ ಮಾಡಿ ಮಂಡ್ಯ ಟಿಕೆಟ್‌ಗಾಗಿ ಬೇಡಿಕೆ ಸಲ್ಲಿಸಿದ್ದಾರೆ. ಆದರೆ, ಮಂಡ್ಯ ಲೋಕಸಭಾ ಕ್ಷೇತ್ರ ಅವರಿಗೆ ದಕ್ಕುವುದೇ ಅಥವಾ ಬೇರೆ ಕ್ಷೇತ್ರದಿಂದ ಕಣಕ್ಕೆ ಇಳಿಸಬಹುದೇ ಎಂಬ ಚರ್ಚೆ ಬಿಜೆಪಿಯಲ್ಲಿ ಆರಂಭವಾಗಿದೆ.

ಉಭಯ ಪಕ್ಷಗಳ ಸೀಟು ಹಂಚಿಕೆಯಲ್ಲಿ ಜೆಡಿಎಸ್‌ಗೆ ಸಿಗಬಹುದಾದ ಕ್ಷೇತ್ರಗಳಲ್ಲಿ ಮಂಡ್ಯವೂ ಒಂದಾಗಿರುವುದರಿಂದ ಸುಮಲತಾ ಅವರಿಗೆ ಆ ಕ್ಷೇತ್ರದಿಂದ ಟಿಕೆಟ್ ನೀಡುವ ಸಾಧ್ಯತೆ ಇಲ್ಲ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಈ ಮಧ್ಯೆ, ಸುಮಲತಾ ಅವರು ಶುಕ್ರವಾರ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರನ್ನು ಭೇಟಿ ಮಾಡಿ ಬಿಜೆಪಿಯಿಂದಲೇ ಸ್ಪರ್ಧಿಸುವ ತಮ್ಮ ಅಭಿಲಾಶೆಯನ್ನು ಹೇಳಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಸಿಗದ ಕಾರಣ ಪಕ್ಷೇತರರಾಗಿ ಸ್ಪರ್ಧಿಸಿದ್ದರು. ಆಗ ಕಾಂಗ್ರೆಸ್– ಜೆಡಿಎಸ್ ಮೈತ್ರಿಯಿಂದ ಆ ಸ್ಥಾನವನ್ನು ಜೆಡಿಎಸ್‌ಗೆ ಕಾಂಗ್ರೆಸ್ ಬಿಟ್ಟುಕೊಟ್ಟಿತ್ತು. ಬಿಜೆಪಿ ತನ್ನ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದೇ ಸುಮಲತಾ ಅವರನ್ನು ಬೆಂಬಲಿಸಿತ್ತು. ಆದರೆ, ಈಗ ಕ್ಷೇತ್ರದಲ್ಲಿ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಜೆಡಿಎಸ್ ಆ ಕ್ಷೇತ್ರವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಎಲ್ಲ ರೀತಿಯಿಂದಲೂ ವೇದಿಕೆ ಸಜ್ಜು ಮಾಡಿಕೊಂಡಿದೆ.

ಒಂದು ವೇಳೆ ಸುಮಲತಾ ಅವರನ್ನು ಬಿಜೆಪಿಯಿಂದ ಕಣಕ್ಕೆ ಇಳಿಸುವುದಾದರೆ ಬೆಂಗಳೂರು ಉತ್ತರ ಕ್ಷೇತ್ರದಿಂದ ಕಣಕ್ಕಿಳಿಸಬಹುದು. ಇಲ್ಲವೇ ರಾಜ್ಯಸಭೆಗೆ ಆಯ್ಕೆ ಮಾಡುವುದಾಗಿ ಭರವಸೆ ನೀಡಬಹುದು. ಮಂಡ್ಯ ಲೋಕಸಭಾ ಕ್ಷೇತ್ರ ಬಿಟ್ಟು ಕೊಡುವ ಸಾಧ್ಯತೆ ಇಲ್ಲ. ಅಂತಿಮವಾಗಿ ವರಿಷ್ಠರೇ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

### ಪ್ರಧಾನಿ ಜತೆ ಸಮಾಲೋಚನೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಶುಕ್ರವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಈ ಬಗ್ಗೆ ಸಾಮಾಜಿಕ ಜಾಲತಾಣ 'ಎಕ್ಸ್‌ನಲ್ಲಿ ಬರೆದುಕೊಂಡಿರುವ ಸುಮಲತಾ, 'ಮಂಡ್ಯ ಕ್ಷೇತ್ರ ಹಾಗೂ ನನ್ನ ಜನರಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಚರ್ಚಿಸಲು ಸಮಯ ಮೀಸಲಿಟ್ಟಿದ್ದಕ್ಕೆ ಮೋದಿ ಅವರಿಗೆ ಧನ್ಯವಾದಗಳು. ಮುಂದಿನ ದಿನಗಳಲ್ಲಿ ಒಟ್ಟಾಗಿ ಕೆಲಸ ಮಾಡುವುದನ್ನು ಮುಂದುವರಿಸೋಣ ಎಂಬ ನಿಮ್ಮ ಮಾತುಗಳು ಸ್ಫೂರ್ತಿದಾಯಕ. ಮಂಡ್ಯ ಕ್ಷೇತ್ರದ ಅಭಿವೃದ್ಧಿಗೆ ನಿರಂತರವಾಗಿ ಆಸಕ್ತಿ ವಹಿಸಿ, ಉತ್ತಮ ಯೋಜನೆಗಳನ್ನು ಕಾರ್ಯಗತಗೊಳಿಸಲು ಅನುದಾನ ಒದಗಿಸಿದ್ದಕ್ಕೆ ಧನ್ಯವಾದಗಳು. ಮುಂದಿನ ಅವಧಿಯಲ್ಲಿಯೂ, ನಮ್ಮ ರಾಜ್ಯ ಮತ್ತು ರಾಷ್ಟ್ರದ ಸೇವೆಯಲ್ಲಿ ನಿಮ್ಮ ಸರ್ಕಾರದ ಜೊತೆಯಲ್ಲಿ ಕೆಲಸ ಮಾಡಲು ಎದುರು ನೋಡುತ್ತಿದ್ದೇನೆ' ಎಂದಿದ್ದಾರೆ.

ರಾಜ್ಯಸಭಾ ಚುನಾವಣೆ: ನಡ್ಡಾ ಭೇಟಿಯಾದ ವಿಜಯೇಂದ್ರ

# ರಾಜೀವ್, ಸೋಮಣ್ಣ ಹೆಸರು ಶಿಫಾರಸು?

ಪ್ರಜಾವಾಣಿ ವಾರ್ತೆ


ಜೆ.ಪಿ.ನಡ್ಡಾ ಅವರನ್ನು ಬಿ.ವೈ. ವಿಜಯೇಂದ್ರ ಶುಕ್ರವಾರ ಭೇಟಿ ಮಾಡಿದರು

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಶುಕ್ರವಾರ ಭೇಟಿ ಮಾಡಿ ರಾಜ್ಯಸಭಾ ಹಾಗೂ ವಿಧಾನ ಪರಿಷತ್ ಚುನಾವಣೆಗಳ ಅಭ್ಯರ್ಥಿಗಳ ಆಯ್ಕೆ ಹಾಗೂ ಲೋಕಸಭಾ ಚುನಾವಣೆಯ ಸಿದ್ಧತೆ ಕುರಿತು ಚರ್ಚಿಸಿದರು.

ರಾಜ್ಯಸಭಾ ಚುನಾವಣೆಗೆ ಅಭ್ಯರ್ಥಿಗಳ ಹೆಸರನ್ನು ಹೈಕಮಾಂಡ್‌ಗೆ ಶಿಫಾರಸು ಮಾಡುವ ಸಂಬಂಧ ಬಿಜೆಪಿಯ ರಾಜ್ಯ ಘಟಕದ ಪ್ರಮುಖರ ಸಭೆಯು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದಿತ್ತು. ವರಿಷ್ಠರಿಗೆ ನಾಲ್ಕು ಹೆಸರುಗಳನ್ನು ಶಿಫಾರಸು ಮಾಡಲು ತೀರ್ಮಾನಿಸಲಾಗಿತ್ತು. ಕೇಂದ್ರ ಐಟಿ ಸಚಿವ ರಾಜೀವ್ ಚಂದ್ರಶೇಖರ್, ಮಾಜಿ ಸಚಿವ ವಿ.ಸೋಮಣ್ಣ ಸೇರಿದಂತೆ ನಾಲ್ವರ ಹೆಸರುಗಳನ್ನು ಶಿಫಾರಸು ಮಾಡಲಾಗಿದೆ. ಈ ಬಗ್ಗೆ ವರಿಷ್ಠರು ವಿಜಯೇಂದ್ರ ಅವರಿಂದ ಮಾಹಿತಿ ಪಡೆದರು ಎಂದು ಮೂಲಗಳು ಹೇಳಿವೆ. ಅಭ್ಯರ್ಥಿಯ ಹೆಸರು ಒಂದೆರಡು ದಿನಗಳಲ್ಲಿ ಪ್ರಕಟವಾಗುವ ಸಾಧ್ಯತೆ ಇದೆ. ವಿಧಾನ ಪರಿಷತ್‌ನ ನಾಲ್ಕು ಕ್ಷೇತ್ರಗಳ ಅಭ್ಯರ್ಥಿಗಳನ್ನು ಒಂದು ವಾರದಲ್ಲಿ ವರಿಷ್ಠರು ಅಂತಿಮಗೊಳಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

2006ರಿಂದ ರಾಜ್ಯಸಭೆಗೆ ಆಯ್ಕೆಯಾಗುತ್ತಿರುವ ರಾಜೀವ್ ಚಂದ್ರಶೇಖರ್ ಅವರ ಅವಧಿ ಏಪ್ರಿಲ್ 2ಕ್ಕೆ ಮುಗಿಯಲಿದೆ. ಲೋಕಸಭಾ ಚುನಾವಣೆಗೆ ರಾಜೀವ್ ಅವರನ್ನು ಕಣಕ್ಕೆ ಇಳಿಸಲು ಪಕ್ಷದ ವರಿಷ್ಠರು ತೀರ್ಮಾನಿಸಿದರೆ ರಾಜ್ಯಸಭಾ ಚುನಾವಣೆಯಲ್ಲಿ ಬೇರೆಯವರಿಗೆ ಅವಕಾಶ ಸಿಗಲಿದೆ.

ರಾಜ್ಯಸಭಾ ಚುನಾವಣೆ ಇದೇ 27ರಂದು ನಡೆಯಲಿದ್ದು, ನಾಮಪತ್ರ ಸಲ್ಲಿಕೆಗೆ ಇದೇ 15ರಂದು ಕೊನೆಯ ದಿನ.

ನಡ್ಡಾ ಭೇಟಿಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ವಿಜಯೇಂದ್ರ, 'ಪಕ್ಷದ ಹಿರಿಯ ಮುಖಂಡ ವಿ.ಸೋಮಣ್ಣ ಅವರು ರಾಜ್ಯಸಭಾ ಚುನಾವಣೆಗೆ ಸ್ಪರ್ಧಿಸುವ ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. ಎಲ್ಲ ವಿಚಾರಗಳು ಚರ್ಚೆ ಆಗಿವೆ. ಅಭ್ಯರ್ಥಿಗಳ ಆಯ್ಕೆ ಕುರಿತು ವರಿಷ್ಠರು ಅಂತಿಮ ತೀರ್ಮಾನ ಮಾಡಲಿದ್ದಾರೆ' ಎಂದರು.

ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಹೊಸ ದಾಖಲೆ ಬರೆಯಲಿದ್ದು, 28 ಸ್ಥಾನಗಳನ್ನು ಗೆಲ್ಲಲಿದೆ ಎಂದು ನಡ್ಡಾ ಅವರಿಗೆ ಭರವಸೆ ನೀಡಿದ್ದೇನೆ ಎಂದೂ ಅವರು ಹೇಳಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಡಾ.ಕೆ. ಸುಧಾಕರ್ ರಿಸ್ಕ್ ತೆಗೆದುಕೊಂಡು ಬಿಜೆಪಿಗೆ ಬಂದರು. ಚಿಕ್ಕಬಳ್ಳಾಪುರದಲ್ಲಿ ಬಿಜೆಪಿಗೆ ಹೆಚ್ಚಿನ ಅಸ್ತಿತ್ವವೇ ಇರಲಿಲ್ಲ. ಅವರು ಬಿಜೆಪಿಗೆ ಬಂದಿದ್ದು ಹುಡುಗಾಟಿಕೆಯ ಮಾತಲ್ಲ. ಈ ಹಿಂದೆ ಚುನಾವಣೆಯಲ್ಲಿ ಗೆದ್ದಿದ್ದರು. 2023ರ ಚುನಾವಣೆಯಲ್ಲಿ ಅವರಿಗೆ ಸೋಲಾಗಿದೆ. ಅವರು ಲೋಕಸಭಾ ಟಿಕೆಟ್‌ಗೆ ಅಪೇಕ್ಷೆ ಪಡುವುದು ತಪ್ಪಲ್ಲ. ಅವರಿಗೆ ಟಿಕೆಟ್ ಕೊಡಬೇಕು ಅಥವಾ ಕೊಡಬಾರದು ಎಂದು ನಾನು ಹೇಳಿಲ್ಲ. ಕಾರ್ಯಕರ್ತರ ಅಭಿಪ್ರಾಯ ಪಡೆದು ವರಿಷ್ಠರು ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಅವರು ಹೇಳಿದರು.

ಪ್ರಧಾನಿ ಅವರನ್ನು ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಭೇಟಿಯಾದ ಕುರಿತು ಪ್ರತಿಕ್ರಿಯಿಸಿದ ಅವರು, 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನಾಡಿದ್ದು ಮೈಸೂರಿಗೆ ಬರಲಿದ್ದು, ಆ ಸಂದರ್ಭದಲ್ಲಿ ಈ ವಿಷಯದ ಕುರಿತು ಚರ್ಚೆಯಾಗಲಿದೆ' ಎಂದರು.

### ಮುನಿಸು ಮರೆತ ಬಸನಗೌಡ ಪಾಟೀಲ ಯತ್ನಾಳ–ವಿಜಯೇಂದ್ರ

ಕೇಂದ್ರ ಸಂಸದೀಯ ವ್ಯವಹಾರ ಸಚಿವ ಪ್ರಲ್ಹಾದ ಜೋಶಿ ಗೃಹ ಕಚೇರಿಯಲ್ಲಿ ಲೋಕಸಭಾ ಚುನಾವಣೆ ಸಿದ್ಧತೆ ಕುರಿತು ಬಿಜೆಪಿ ನಾಯಕರು ಶುಕ್ರವಾರ ಸಮಾಲೋಚನೆ ನಡೆಸಿದರು. ಈ ಸಭೆಯಲ್ಲಿ ಬಿಜೆಪಿ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಹಾಗೂ ರಮೇಶ ಜಾರಕಿಹೊಳಿ ಸಹ ಭಾಗಿಯಾದರು.

ಕೆಲವು ಸಮಯದಿಂದ ವಿಜಯೇಂದ್ರ ವಿರುದ್ಧ ಯತ್ನಾಳ ಅವರು ನಿರಂತರ ವಾಗ್ದಾಳಿ ನಡೆಸಿದ್ದರು. ವಿಜಯೇಂದ್ರ ಅಧ್ಯಕ್ಷರಾದ ಬಳಿಕ ರಮೇಶ ಜಾರಕಿಹೊಳಿ ಅಂತರ ಕಾಯ್ದುಕೊಂಡಿದ್ದರು.

'ಜೋಶಿ ಅವರನ್ನು ಭೇಟಿ ಮಾಡುವ ವೇಳೆ ಅನಿರೀಕ್ಷಿತವಾಗಿ ಯತ್ನಾಳ ಮತ್ತು ಜಾರಕಿಹೊಳಿ ಸಿಕ್ಕಿದ್ದರು. ಯತ್ನಾಳ ಅವರೊಂದಿಗೆ ನಾನೇ ಮಾತನಾಡಿದೆ. ಅವರ ಜೊತೆ ಕುಳಿತು ಚರ್ಚಿಸಿದ್ದೇನೆ. ಅದಕ್ಕೆ ಬಹಳ ವಿಶೇಷತೆ ನೀಡುವ ಅಥವಾ ಬೇರೆ ಅರ್ಥ ಕೊಡುವ ಅಗತ್ಯವಿಲ್ಲ' ಎಂದು ವಿಜಯೇಂದ್ರ ಹೇಳಿದರು.

ಶನಿವಾರ, ಫೆಬ್ರುವರಿ 10, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 41 | ಪುಟ 22

www.prajavani.net

prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ







| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 71,595 ▲ | 21,782 ▲ | ₹64,540 (ಬೆಂಗಳೂರು) ▲ | ₹72,400 (ಬೆಂಗಳೂರು) ▲ | 83.07 ▼ |

ನರಸಿಂಹರಾವ್, ಚರಣ್ ಸಿಂಗ್, ಸ್ವಾಮಿನಾಥನ್‌ಗೆ ದೇಶದ ಅತ್ಯುನ್ನತ ಗೌರವ

# ಮತ್ತೆ ಮೂವರು 'ಭಾರತ ರತ್ನ'

ಪ್ರಜಾವಾಣಿ ವಾರ್ತೆ/ ಪಿಟಿಐ


**ನವದೆಹಲಿ:** ಮಾಜಿ ಪ್ರಧಾನಿಗಳಾದ ಪಿ.ವಿ.ನರಸಿಂಹರಾವ್, ಚರಣ್ ಸಿಂಗ್ ಹಾಗೂ 'ಹಸಿರು ಕ್ರಾಂತಿ'ಯ ಹರಿಕಾರ ಎಂ.ಎಸ್.ಸ್ವಾಮಿನಾಥನ್ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಭಾರತರತ್ನ'ವನ್ನು ಮರಣೋತ್ತರವಾಗಿ ಘೋಷಿಸಲಾಗಿದೆ. ಲೋಕಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟಣೆಗೆ ಕೆಲವೇ ದಿನಗಳಿರುವಾಗ ಈ ಘೋಷಣೆ ಮಾಡಿರುವುದು ರಾಜಕೀಯವಾಗಿ ಮಹತ್ವ ಪಡೆದುಕೊಂಡಿದೆ.

'ಈ ಮೂವರು ಮಹನೀಯರು ದೇಶಕ್ಕಾಗಿ ನೀಡಿದ ಸೇವೆಯನ್ನು ಪರಿಗಣಿಸಿ ಅತ್ಯುನ್ನತ ನಾಗರಿಕ ಗೌರವಕ್ಕೆ ಆಯ್ಕೆ ಮಾಡಲಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ 'ಎಕ್ಸ್' ಖಾತೆಯಲ್ಲಿ ಪ್ರಕಟಿಸಿದ್ದಾರೆ. ಇದರೊಂದಿಗೆ ಈ ವರ್ಷ ಒಟ್ಟು ಐವರು ಗಣ್ಯರು 'ಭಾರತ ರತ್ನ'ಕ್ಕೆ ಪಾತ್ರರಾದಂತಾಗಿದೆ. ಬಿಜೆಪಿಯ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ಮತ್ತು ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರಿಗೆ 'ಭಾರತ ರತ್ನ' ನೀಡುವುದಾಗಿ ಈಚೆಗೆ ಘೋಷಣೆ ಮಾಡಲಾಗಿತ್ತು.

ಇದುವರೆಗೆ ಒಟ್ಟು 53 ಸಾಧಕರಿಗೆ ಈ ಗೌರವ ಸಂದಿದೆ. 2014ರಲ್ಲಿ ಬಿಜೆಪಿ ಅಧಿಕಾರಕ್ಕೇರಿದ ಬಳಿಕ 10 ಗಣ್ಯರನ್ನು 'ಭಾರತ ರತ್ನ'ಕ್ಕೆ ಆಯ್ಕೆ ಮಾಡಲಾಗಿದೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ಸಮಾಜ ಸುಧಾರಕ ಮದನ್ ಮೋಹನ್ ಮಾಳವೀಯ, ಆರ್‌ಎಸ್‌ಎಸ್ ಮುಖಂಡ ನಾನಾಜಿ ದೇಶಮುಖ್, ಮಾಜಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಮತ್ತು ಸಂಗೀತ ಮಾಂತ್ರಿಕ ಭೂಪೇನ್ ಹಜಾರಿಕಾ ಅವರು ಈ ಗೌರವಕ್ಕೆ ಪಾತ್ರರಾದ ಇತರರು.



ಪಿ.ವಿ.ನರಸಿಂಹರಾವ್



ಚರಣ್ ಸಿಂಗ್



ಎಂ.ಎಸ್.ಸ್ವಾಮಿನಾಥನ್

> **ನರಸಿಂಹರಾವ್ ಅವರಿಗೆ ಭಾರತ ರತ್ನ ಘೋಷಿಸಿರುವುದು ನಮ್ಮ ದೇಶದ ಇತಿಹಾಸವನ್ನು ರೂಪಿಸಿದ ಅಪ್ರತಿಮ ರಾಜನೀತಿಜ್ಞನಿಗೆ ಸಂದಂತಹ ಗೌರವವಾಗಿದೆ**
> **ಅಮಿತ್ ಶಾ,** ಗೃಹ ಸಚಿವ

> **ಈ ಮೂವರು ಗಣ್ಯರನ್ನು ಅತ್ಯುನ್ನತ ಗೌರವಕ್ಕೆ ಆಯ್ಕೆ ಮಾಡಿರುವುದನ್ನು ಸ್ವಾಗತಿಸುತ್ತೇನೆ. ಇವರ ದೂರದೃಷ್ಟಿ, ಕಠಿಣ ಪರಿಶ್ರಮವನ್ನು ಪಕ್ಷವು ಶ್ಲಾಘಿಸುತ್ತದೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

### ಐವರಿಗೆ ನೀಡಿದ್ದು ಇದೇ ಮೊದಲು

'ಭಾರತ ರತ್ನ' ಗೌರವವನ್ನು ಒಂದೇ ವರ್ಷ ಐವರಿಗೆ ನೀಡಿದ್ದು ಇದೇ ಮೊದಲು. ಒಂದೇ ವರ್ಷ ನಾಲ್ಕು ಮಂದಿಗೆ (1999ರಲ್ಲಿ) ನೀಡಿದ್ದು ಇದುವರೆಗಿನ ದಾಖಲೆಯಾಗಿತ್ತು. 2019, 1997, 1992, 1991, 1955 ಹಾಗೂ 1954 ರಲ್ಲಿ ತಲಾ ಮೂವರು ಸಾಧಕರನ್ನು ಆಯ್ಕೆ ಮಾಡಲಾಗಿತ್ತು.

ಲೋಕಸಭಾ ಚುನಾವಣೆಗೆ ಕೆಲವೇ ದಿನಗಳಿರುವಾಗ ಮತ್ತೆ ಮೂವರನ್ನು ಅತ್ಯುನ್ನತ ಪುರಸ್ಕಾರಕ್ಕೆ ಆಯ್ಕೆ ಮಾಡಿರುವುದರ ಹಿಂದೆ ರಾಜಕೀಯ ಲೆಕ್ಕಾಚಾರಗಳೂ ಇವೆ ಎಂದು ವಿಶ್ಲೇಷಿಸಲಾಗಿದೆ.

10ನೇ | ಪುಟ ನೋಡಿ

ಶೇ 40 ಕಮಿಷನ್ ಆರೋಪಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು

# ನಾಗಮೋಹನ್ ದಾಸ್ ಆಯೋಗಕ್ಕೆ ದಾಖಲೆ ಕೊಡಿ

ಪ್ರಜಾವಾಣಿ ವಾರ್ತೆ

**ಹೊಸದುರ್ಗ (ಚಿತ್ರದುರ್ಗ):** 'ಶೇ 40ರಷ್ಟು ಕಮಿಷನ್ ಕೇಳುವುದು ಮುಂದುವರಿದಿರುವುದಕ್ಕೆ ಸಂಬಂಧಿಸಿದ ದಾಖಲೆಗಳಿದ್ದರೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗಕ್ಕೆ ಒದಗಿಸಲಿ. ಕಮಿಷನ್ ಕೇಳಿದ ಅಧಿಕಾರಿಗಳ ಮೇಲೆ ದೂರು ನೀಡಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದರು.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಮಾಡಿದ ಆರೋಪಕ್ಕೆ ಶುಕ್ರವಾರ ಇಲ್ಲಿ ಪ್ರತಿಕ್ರಿಯಿಸಿದರು. 'ಶೇ 40ರಷ್ಟು ಕಮಿಷನ್ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ಮಾಡಲು ಸರ್ಕಾರ ಆಯೋಗ ರಚಿಸಿದೆ. ನಮ್ಮ ಸರ್ಕಾರದ ವಿರುದ್ಧವೂ ಇಂತಹ ಆರೋಪಗಳು ಇದ್ದರೆ ಸೂಕ್ತ ದಾಖಲೆಗಳನ್ನು ಆಯೋಗಕ್ಕೆ ನೀಡಲಿ' ಎಂದರು.

'ಅನುದಾನ ಹಂಚಿಕೆ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾಗಿರುವುದು ನಿಜ. ಈ ಕುರಿತು ಸುಪ್ರೀಂ ಕೋರ್ಟ್ ಮೆಟ್ಟಿಲೇರುವ ಬಗ್ಗೆ ಆಲೋಚನೆ ಮಾಡಿಲ್ಲ' ಎಂದು ಹೇಳಿದರು.

ಇನ್ನೊಂದು ಸುದ್ದಿ | 7

### ಸಿಬಿಐ ತನಿಖೆಗೆ ಆಗ್ರಹಿಸಿ ಹೋರಾಟ

**ದಾವಣಗೆರೆ:** 'ಕಾಂಗ್ರೆಸ್ ಸರ್ಕಾರದಲ್ಲೂ ಶೇ 40ರಷ್ಟು ಕಮಿಷನ್ ಮುಂದುವರಿದಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಆರೋಪಿಸಿದ್ದಾರೆ. ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಆಗ್ರಹಿಸಿ ವಿಧಾನಸೌಧದ ಒಳಗೆ ಹಾಗೂ ಹೊರಗೆ ಹೋರಾಟ ಮಾಡುತ್ತೇವೆ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

'ಬಿಜೆಪಿ ಸರ್ಕಾರವಿದ್ದಾಗ ಕಾಂಗ್ರೆಸ್‌ನವರು ಇದೇ ವಿಷಯವನ್ನು ಮುಂದಿಟ್ಟುಕೊಂಡು ಚಳವಳಿ ಮಾಡಿದ್ದರು. ಸಚಿವರು ಹಾಗೂ ಶಾಸಕರ ಹೆಸರಿನಲ್ಲಿ ಅಧಿಕಾರಿಗಳು ಹಣ ವಸೂಲಿ ಮಾಡುತ್ತಿದ್ದಾರೆ. ಕೆಂಪಣ್ಣ ಹೇಳಿರುವುದು ನೂರಕ್ಕೆ ನೂರು ಸತ್ಯ. ಈ ಸರ್ಕಾರ ಬಂದ ದಿನದಿಂದ ಲೂಟಿ ಮಾಡುತ್ತಿದೆ' ಎಂದು ಶುಕ್ರವಾರ ಆರೋಪಿಸಿದರು.



## ರಾಜ್ಯಕ್ಕಿಲ್ಲ ಏಮ್ಸ್

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕರ್ನಾಟಕದ ಹುಬ್ಬಳ್ಳಿ-ಧಾರವಾಡದಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯನ್ನು (ಏಮ್ಸ್) ಸ್ಥಾಪಿಸುವ ಪ್ರಸ್ತಾವನೆ ಬಂದಿದ್ದು, ಅದಕ್ಕೆ ಅನುಮೋದನೆ ನೀಡಿಲ್ಲ ಎಂದು ಕೇಂದ್ರ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಖಾತೆಯ ರಾಜ್ಯ ಸಚಿವೆ ಡಾ.ಭಾರತಿ ಪ್ರವೀಣ್ ಪವಾರ್ ತಿಳಿಸಿದರು.

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೋಕಸಭೆಯಲ್ಲಿ ಶುಕ್ರವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, ಬೇರೆ ಯಾವುದೇ ಪ್ರಸ್ತಾವನೆ ಬಂದಿಲ್ಲ ಎಂದು ಸ್ಪಷ್ಟಪಡಿಸಿದರು.


ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ ಅಡಿಯಲ್ಲಿ ದೇಶದ 22 ಕಡೆಗಳಲ್ಲಿ ಏಮ್ಸ್ ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ರಾಜ್ಯದ ರಾಯಚೂರಿನಲ್ಲಿ ಏಮ್ಸ್ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಸಚಿವರು ಹಾಗೂ ಸಂಸದರ ನಿಯೋಗವು ಆರೋಗ್ಯ ಸಚಿವರಿಗೆ ಎರಡು ಸಲ ಮನವಿ ಸಲ್ಲಿಸಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಎರಡು ಬಾರಿ ಪತ್ರ ಬರೆದಿದ್ದರು.



**ರಥೋತ್ಸವ** ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ವಾಲ್ಮೀಕಿ ಜಾತ್ರೆ ಅಂಗವಾಗಿ ಶುಕ್ರವಾರ ನಡೆದ ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು
-ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

### ಒಳ ಪುಟಗಳು





# ಮೂಡಿಗೆರೆ: ಬಿಜೆಪಿ ಕಾರ್ಯಕರ್ತರ ಮಾರಾಮಾರಿ

ಪ್ರಜಾವಾಣಿ ವಾರ್ತೆ

**ಚಿಕ್ಕಮಗಳೂರು:** ತಾಲ್ಲೂಕು ಘಟಕಗಳ ಅಧ್ಯಕ್ಷರ ಹೆಸರು ಘೋಷಣೆಯಾದ ಕೆಲವೇ ಕ್ಷಣದಲ್ಲಿ ಮೂಡಿಗೆರೆಯಲ್ಲಿ ಬಿಜೆಪಿ ಕಾರ್ಯಕರ್ತರ ನಡುವೆ ಶುಕ್ರವಾರ ಸಂಜೆ ಮಾರಾಮಾರಿ ನಡೆದಿದೆ.

ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ರತನ್ ಮತ್ತು ತಾಲ್ಲೂಕು ಪಂಚಾಯಿತಿ ಹಾಲಿ ಸದಸ್ಯ ಪುಟ್ಟಣ್ಣ (ಅನುಕುಮಾರ್) ನಡುವೆ ರಸ್ತೆಯಲ್ಲೇ ಹೊಡೆದಾಟ ನಡೆದಿದೆ. ರತನ್ ಅವರ ಶರ್ಟ್ ಮತ್ತು ಬನಿಯನ್ ಹರಿದು ಹೋಗಿದ್ದು, ಅವರನ್ನು ರಸ್ತೆಯಲ್ಲಿ ಉರುಳಾಡಿಸಲಾಗಿದೆ. ಹೊಡೆದಾಟದ ವಿಡಿಯೊ ಈಗ ಹರಿದಾಡುತ್ತಿದೆ.

ಮೂಡಿಗೆರೆ ಮಂಡಲದ ಅಧ್ಯಕ್ಷರಾಗಿ ಟಿ.ಎಂ. ಗಜೇಂದ್ರ ಅವರನ್ನು ಆಯ್ಕೆ ಮಾಡಿ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ದೇವರಾಜಶೆಟ್ಟಿ ಘೋಷಣೆ ಮಾಡಿದರು. ಇದಾದ ಬಳಿಕ ಬಿಜೆಪಿ ಕಾರ್ಯಕರ್ತರು ಪಕ್ಷದ ಕಚೇರಿಯಲ್ಲಿ ಸೇರಿದ್ದರು.

ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದ ಪುಟ್ಟಣ್ಣ ಅವರು ತಮಗೆ ಸ್ಥಾನ ತಪ್ಪಲು ರತನ್ ಕಾರಣ ಎಂದು ಅವರೊಂದಿಗೆ ಜಗಳಕ್ಕಿಳಿದರು. ಈ ಸಂದರ್ಭದಲ್ಲಿ ಮಾತಿಗೆ ಮಾತು ಬೆಳೆದು ರಸ್ತೆಯಲ್ಲೇ ಮಾರಾಮಾರಿ ನಡೆಯಿತು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ರತನ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಾರ್ಕಳ ಬಳಿ ಜೀವಂತ ಕಪ್ಪೆ ಮೇಲೆ ಬೆಳೆದ ಪುಟ್ಟ ಅಣಬೆ

# ಪಶ್ಚಿಮ ಘಟ್ಟದ ಕೊಳದಲ್ಲಿ 'ಅಣಬೆ ಕಪ್ಪೆ'

• ನಟರಾಜ ನಾಗಸಂದ್ರ

**ದೊಡ್ಡಬಳ್ಳಾಪುರ:** ಪಶ್ಚಿಮ ಘಟ್ಟದ ಕೊಳವೊಂದರಲ್ಲಿ ಈಚೆಗೆ ಅಪರೂಪದ 'ಅಣಬೆ ಕಪ್ಪೆ'ಯೊಂದು ಅಧ್ಯಯನ ತಂಡವೊಂದರ ಕಣ್ಣಿಗೆ ಬಿದ್ದಿದೆ.

ಕುದುರೆಮುಖ ಪರ್ವತ ಶ್ರೇಣಿಯ ತಪ್ಪಲಿನ ಕಾರ್ಕಳ ತಾಲ್ಲೂಕಿನ ಮಾಳ ಗ್ರಾಮದ ಕೊಳವೊಂದರಲ್ಲಿ ಕಂಡು ಬಂದ 'ಗೋಲ್ಡನ್ ಬ್ಯಾಕ್ಡ್' ಕಪ್ಪೆಯ ಪಕ್ಕೆಯ ಮೇಲೆ ಪುಟ್ಟದಾದ ಅಣಬೆ ಮೊಳಕೆಯೊಡೆದಿದೆ.

ಕೊಳೆತ ವಸ್ತು, ಮಣ್ಣು, ಮರದ ಮೇಲೆ ಮಾತ್ರ ಬೆಳೆಯುವ ಅಣಬೆಯು ಜೀವಂತ ಪ್ರಾಣಿಯ ಮೇಲೆ ಬೆಳೆದಿರುವುದು ಇದೇ ಮೊದಲು ಎಂದು ಹೇಳಲಾಗಿದೆ. ಶಿಲೀಂಧ್ರ (ಫಂಗೈ) ವರ್ಗಕ್ಕೆ ಸೇರಿದ ಅಣಬೆಯನ್ನು 'ಮೈಸಿನ್' ಅಥವಾ 'ಬಾನೆಟ್ ಮಶ್ರೂಮ್' ಎಂದು ಕರೆಯುತ್ತಾರೆ.

ಜೀವ ಜಗತ್ತಿನ ಅಚ್ಚರಿಯ ವಿದ್ಯಮಾನ ಮತ್ತು ಹೊಸ ಸಂಶೋಧನೆಗಳನ್ನು ಪ್ರಕಟಿಸುವ ಅಂತರ ರಾಷ್ಟ್ರೀಯ ನಿಯತಕಾಲಿಕ 'ರೆಪ್ಟೈಲ್ಸ್ ಆ್ಯಂಡ್ ಆ್ಯಂಫಿಬಿಯನ್ಸ್'ನ ಜನವರಿ ಸಂಚಿಕೆಯಲ್ಲಿ 'ಅಣಬೆ ಕಪ್ಪೆ' ಕುರಿತಾದ ಸಂಶೋಧನಾ ಲೇಖನ ಪ್ರಕಟವಾಗಿದೆ.



ಕಪ್ಪೆಯ ಮೇಲೆ ಬೆಳೆದಿರುವ ಅಣಬೆ

ಬೆಂಗಳೂರು ಮತ್ತು ದೊಡ್ಡಬಳ್ಳಾಪುರದಲ್ಲಿ ಕಚೇರಿ ಹೊಂದಿರುವ ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ (ಡಬ್ಲ್ಯುಡಬ್ಲ್ಯುಎಫ್) ಸಂಸ್ಥೆಯ ಯುವ ಸಂಶೋಧಕರ ತಂಡ 'ಕಪ್ಪೆ ಮತ್ತು ಹಾವುಗಳ ಚಲನವಲನ' ಅಧ್ಯಯನಕ್ಕೆ ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಮಾಳ ಗ್ರಾಮಕ್ಕೆ ತೆರಳಿತ್ತು. ಆಗ ಆಕಸ್ಮಿಕವಾಗಿ ಕಣ್ಣಿಗೆ ಬಿದ್ದ ಅಪರೂಪದ 'ಅಣಬೆ ಕಪ್ಪೆ'ಯನ್ನು ತಂಡ ಕ್ಯಾಮೆರಾದಲ್ಲಿ ಸೆರೆಹಿಡಿದಿದೆ.



ವೈ.ಟಿ.ಲೋಹಿತ್

ಮಾಳ ಗ್ರಾಮದ ಕೊಳದಲ್ಲಿ 40ಕ್ಕೂ ಹೆಚ್ಚು 'ಗೋಲ್ಡನ್ ಬ್ಯಾಕ್ಡ್' ಕಪ್ಪೆಗಳಿವೆ. ಅದರಲ್ಲಿ ಒಂದು ಕಪ್ಪೆಯ ಮೇಲೆ ಮಾತ್ರ ಅಣಬೆ ಬೆಳೆದಿದೆ ಎಂದು ಹಿರಿಯ ಯೋಜನಾಧಿಕಾರಿ ಹಾಗೂ ಕೀಟ, ಜೇಡಗಳ ಸಂಶೋಧಕ ದೊಡ್ಡಬಳ್ಳಾಪುರದ ವೈ.ಟಿ.ಲೋಹಿತ್ 'ಪ್ರಜಾವಾಣಿ'ಗೆ ತಿಳಿಸಿದರು.

ಈ ತಂಡದಲ್ಲಿದ್ದ ಚಿನ್ಮಯ್ ಸಿ.ಮಳಿಯೆ, ನವೀನ್ ಅಯ್ಯರ್, ಬಿ.ಜಿ. ನಿಶಾ ಹಾಗೂ ಎಸ್.ಆಶಾ ಸೇರಿದಂತೆ ಅನೇಕರು ಸಂಶೋಧನಾ ಪ್ರಬಂಧ ಸಿದ್ಧಪಡಿಸಿ ವಿಜ್ಞಾನ ನಿಯತಕಾಲಿಕಕ್ಕೆ ಕಳಿಸಿದ್ದರು. ಕಪ್ಪೆಯ ಚಿತ್ರ ಗಮನಿಸಿದ ವಿಜ್ಞಾನಿಗಳು, ತಂತ್ರಜ್ಞರು ಮತ್ತು ಪರಿಸರ ಆಸಕ್ತರು, ಇದೊಂದು ಕೃತಕ ಬುದ್ಧಿಮತ್ತೆ (ಆರ್ಟಿಫೀಸಿಯಲ್ ಇಂಟೆಲಿಜೆನ್ಸ್) ತಂತ್ರಜ್ಞಾನ ಬಳಸಿ ಸೃಷ್ಟಿಸಿದ ಚಿತ್ರ ಅಥವಾ ಫೋಟೊಶಾಪ್ ಚಿತ್ರ ಇರಬಹುದು ಎಂದು ಅನುಮಾನಿಸಿದ್ದರು.

'ಐ ನ್ಯಾಚುರಲಿಸ್ಟ್' ಮತ್ತು 'ಇಂಡಿಯಾ ಬಯೋಡೈವರ್ಸಿಟಿ' ಪೋರ್ಟಲ್ ಈ ಚಿತ್ರವನ್ನು ನೈಜವಾದ ಛಾಯಾಚಿತ್ರ ಎಂದು ದೃಢೀಕರಿಸಿತು. ಆ ಅನುಮಾನ ನಿವಾರಣೆಯಾದ ಬಳಿಕ ನಿಯತಕಾಲಿಕದಲ್ಲಿ ಲೇಖನ ಪ್ರಕಟವಾಯಿತು.

ಕಪ್ಪೆಯಂತಹ ಉಭಯವಾಸಿಗಳು ಶಿಲೀಂಧ್ರ (ಫಂಗೈ) ಸಂಬಂಧಿತ ಕಾಯಿಲೆಗಳಿಂದ ಸಾವನ್ನಪ್ಪುವುದು ಸಹಜ. ಈ ಸಮಸ್ಯೆಯನ್ನು ಕೀಟ ಮತ್ತು ಜೇಡಗಳಲ್ಲೂ ಕಾಣಬಹುದು. ಆದರೆ ಜೀವಂತ ಕಪ್ಪೆಯ ಮೇಲೆ ಅಣಬೆ ಬೆಳೆದಿರುವ ಬಗ್ಗೆ ವೈಜ್ಞಾನಿಕ ಅಧ್ಯಯನ, ಆಳವಾದ ಸಂಶೋಧನೆ ಅಗತ್ಯವಿದೆ ಎನ್ನುವುದು ಲೋಹಿತ್ ಅಭಿಪ್ರಾಯ.

### ಚಿನಕುರಳಿ

ಪ್ರಕಾಶ್ ಶೆಟ್ಟಿ



## ‘ಡ್ರಗ್ಸ್ ದಂಧೆಕೋರರ ಆಸ್ತಿ ಮುಟ್ಟುಗೋಲಿಗೆ ಕಾನೂನು’

ದಾಬಸ್‌ಪೇಟೆ: ಇಲ್ಲಿಯ ಕೈಗಾರಿಕಾ ಪ್ರದೇಶದಲ್ಲಿರುವ ಕರ್ನಾಟಕ ತ್ಯಾಜ್ಯ ನಿರ್ವಹಣೆ ಯೋಜನೆ ಘಟಕದಲ್ಲಿ ₹ 36.65 ಕೋಟಿ ಮೌಲ್ಯದ ಡ್ರಗ್ಸ್ ಪೊಟ್ಟಣಗಳನ್ನು ಶುಕ್ರವಾರ ನಾಶಪಡಿಸಲಾಯಿತು. ಬೆಂಗಳೂರು ನಗರ ಪೊಲೀಸರು ಜಪ್ತಿ ಮಾಡಿದ್ದ ಡ್ರಗ್ಸ್ ಇದಾಗಿತ್ತು.

‘ಡ್ರಗ್ಸ್ ಮುಕ್ತ ಕರ್ನಾಟಕ’ ಅಭಿಯಾನದ ಅಂಗವಾಗಿ ಡ್ರಗ್ಸ್ ನಾಶಪಡಿಸುವ ಪ್ರಕ್ರಿಯೆಗೆ ಚಾಲನೆ ನೀಡಿ ಮಾತನಾಡಿದ ಗೃಹ ಸಚಿವ ಜಿ. ಪರಮೇಶ್ವರ್, ‘ಡ್ರಗ್ಸ್ ದಂಧೆಯಲ್ಲಿ ತೊಡಗಿರುವವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಹೊಸ ಕಾನೂನು ಜಾರಿಗೆ ತರಲಾಗುವುದು’ ಎಂದರು. ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಐಜಿಪಿ ಬಿ.ಆರ್. ರವಿಕಾಂತೇಗೌಡ, ಬೆಂಗಳೂರು ಕಮಿಷನರ್ ಬಿ. ದಯಾನಂದ್, ಎಡಿಜಿಪಿ ಉಮೇಶ್‌ಕುಮಾರ್ ಹಾಜರಿದ್ದರು.

## ಜೋಡಿ ಕೊಲೆ: 11 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಂಬಾರಪೇಟೆ ಮುಖ್ಯರಸ್ತೆಯಲ್ಲಿ ನಡೆದಿದ್ದ ಬಿ.ಎಲ್. ಸುರೇಶ್ (55) ಹಾಗೂ ಮಹೇಂದ್ರ (68) ಜೋಡಿ ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ 11 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಕೊಲೆಯಾದ ಸುರೇಶ್ ಅವರ ಪುತ್ರಿ ದೂರು ನೀಡಿದ್ದಾರೆ. ಪ್ರಮುಖ ಆರೋಪಿ ಬದ್ರಿಪ್ರಸಾದ್ ಅಲಿಯಾಸ್ ಭದ್ರ ಹಾಗೂ ಇತರರಾದ ಮುನಿಸ್ವಾಮಿ, ರಾಜಪ್ಪ, ಮಹೇಶ್, ವೆಂಕಟೇಶ್, ಚಂದ್ರಶೇಖರ, ರವಿಶಂಕರ್, ಶಶಿಕಲಾ, ಶಿವಕುಮಾರ್, ರಾಮಪ್ಪ ಹಾಗೂ ಚೆನ್ನಕೃಷ್ಣಪ್ಪ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕುಂಬಾರಪೇಟೆ ಅನ್ನದಾನ ಸಮಿತಿ ಟ್ರಸ್ಟ್ ಹಾಗೂ ಕುಂಬಾರಪೇಟೆ ಆಂಜನೇಯ ಸ್ವಾಮಿ ದೇವಸ್ಥಾನ ಕಟ್ಟಡ ಸಮಿತಿ ಟ್ರಸ್ಟ್ ಒಡೆತನದ ಆಸ್ತಿ ಹಾಗೂ ಕೌಟುಂಬಿಕ ಕಾರಣಕ್ಕಾಗಿ ಕೊಲೆ ನಡೆದಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಬದ್ರಿಪ್ರಸಾದ್ ಒಬ್ಬನೇ ಸುರೇಶ್ ಹಾಗೂ ಮಹೇಂದ್ರ ಅವರಿಗೆ ಚಾಕುವಿನಿಂದ ಇರಿದಿದ್ದ. ಇತರರ ಪಾತ್ರವೇನು ಎಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದು ತಿಳಿಸಿವೆ.

## ‘ಸಿ.ಎಂ ಸುಳ್ಳು ಪ್ರಚಾರ ತಂತ್ರ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ನುಡಿದಂತೆ ನಡೆದಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸುಳ್ಳು ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಯಾರು ನುಡಿದಂತೆ ನಡೆದಿದ್ದಾರೆ ಎಂಬುದನ್ನು ಲೋಕಸಭೆ ಚುನಾವಣೆಯಲ್ಲಿ ದೇಶದ ಜನರು ತೀರ್ಮಾನಿಸುತ್ತಾರೆ’ ಎಂದು ಶಾಸಕ ಎಸ್.ಮುನಿರಾಜು ಹೇಳಿದರು.

ಮಂಜುನಾಥ ನಗರದಲ್ಲಿ ಡಾಂಬರು ರಸ್ತೆ, ಗಣಪತಿ ನಗರ, ಸೋಮಶೆಟ್ಟಿಹಳ್ಳಿಯಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ಕಾಂಗ್ರೆಸ್ಸಿನವರು ಅಖಂಡ ಭಾರತವನ್ನು ವಿಭಜನೆ ಮಾಡಿದವರು’ ಎಂದು ಆಪಾದಿಸಿದರು.

‘ಕೇಂದ್ರ ಸರ್ಕಾರ ಬಡವರ ಪರ ಸರ್ಕಾರ. ಇಡೀ ದೇಶದ 80 ಕೋಟಿ ಜನರಿಗೆ 5 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ನೀಡುತ್ತಿದೆ. ಭಾರತ್ ಬ್ರ್ಯಾಂಡ್ ಅಕ್ಕಿಯನ್ನು ಕನಿಷ್ಠ ₹29 ನೀಡಲಾಗುತ್ತಿದೆ. ಜನರು ಇದರ ಪ್ರಯೋಜನ ಪಡೆದುಕೊಳ್ಳಬೇಕು’ ಎಂದು ಹೇಳಿದರು.

ಬೆಂಗಳೂರು ನಗರ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ.ಮರಿಸ್ವಾಮಿ, ಬಾಗಲಗುಂಟೆ ವಾರ್ಡ್ ಬಿಜೆಪಿ ಅಧ್ಯಕ್ಷ ಮಧುಸೂದನ್, ಬಿಜೆಪಿ ಮುಖಂಡರಾದ ಭರತ್ ಸೌಂದರ್ಯ, ಲಕ್ಷ್ಮಿ ವೆಂಕಟೇಶ್, ಬಿ.ಎಂ.ಕೃಷ್ಣ, ಗಣಪತಿ ನಗರದ ಬಿ.ಎಂ.ಚಿಕ್ಕಣ್ಣ, ನವೀನ್, ಜಯರಾಮ್, ಸೋಮಶೆಟ್ಟಿಹಳ್ಳಿಯ ಜನಾರ್ದನ್, ಲಕ್ಷ್ಮಣ್, ಮುಖ್ಯಅಧಿಕಾರಿ ಎಚ್.ಎ. ಕುಮಾರ್, ಎಂಜಿನಿಯರ್ ಮೋಹನ್ ಮುಂತಾದವರಿದ್ದರು.



ಬಾಗಲಗುಂಟೆ ವಾರ್ಡ್ ಮಂಜುನಾಥ ನಗರದಲ್ಲಿ ಡಾಂಬರು ರಸ್ತೆ ಕಾಮಗಾರಿಗೆ ಶಾಸಕ ಎಸ್.ಮುನಿರಾಜು ಚಾಲನೆ ನೀಡಿ, ಜನರ ಸಮಸ್ಯೆ ಆಲಿಸಿದರು



## ನಿಧನ ವಾರ್ತೆ

### ನಾಗಮ್ಮ



ಪೀಣ್ಯ ದಾಸರಹಳ್ಳಿ: ಚೊಕ್ಕಸಂದ್ರ ನಿವಾಸಿ ಹಾಗೂ ಜಾಲಹಳ್ಳಿ ಕ್ರಾಸ್ ಬಳಿಯ ಎನ್.ಆರ್. ಕಾಂಪ್ಲೆಕ್ಸ್ ಮಾಲೀಕರಾದ ನಾಗಮ್ಮ (83) ಅವರು ಗುರುವಾರ ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಮೃತರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ.

ಅಂತ್ಯಕ್ರಿಯೆ ಗುರುವಾರ ಪೀಣ್ಯದ ಚಿತಾಗಾರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.





## ನಗರದಲ್ಲಿ ಇಂದು

**ಕ್ರಿಕೆಟ್ ಸ್ಟೇಡಿಯಂ ಪೆವಿಲಿಯನ್ ಬ್ಲಾಕ್ ಉದ್ಘಾಟನೆ:** ರಘುರಾಮ್ ಭಟ್, ಗೌರವ ಅತಿಥಿ: ಎ. ಶಶಾಂಕ್, ಕೆ.ಸಿ. ರಾಮಮೂರ್ತಿ, ಜಯದೀಪ ರೆಡ್ಡಿ, ತ್ರಿಸ್ಥ ರಾಮಮೂರ್ತಿ, ಅಧ್ಯಕ್ಷತೆ: ಸಬಿತಾ ರಾಮಮೂರ್ತಿ, ಆಯೋಜನೆ ಹಾಗೂ ಸ್ಥಳ: ಕ್ರಿಕೆಟ್ ಪೆವಿಲಿಯನ್, ಸಿಎಂಆರ್ ಯೂನಿವರ್ಸಿಟಿ ಬಾಗಲೂರು ಕ್ಯಾಂಪಸ್, ಬೆಳಿಗ್ಗೆ 9.30

**‘ಮಾನಿನಿ ಕಲಾ ಕೂಟ’ ಮಹಿಳಾ ಕಲಾವಿದರ ಸಮ್ಮೇಳನ:** ಉದ್ಘಾಟನೆ: ಧರಣೀದೇವಿ ಮಾಲಗತ್ತಿ, ಸಮ್ಮೇಳನಾಧ್ಯಕ್ಷತೆ: ಎಂ.ಕೆ. ಜಯಶ್ರೀ, ಅಧ್ಯಕ್ಷತೆ: ಹೇಮಾ ಪಟ್ಟಣಶೆಟ್ಟಿ, ಮುಖ್ಯ ಅತಿಥಿಗಳು: ಪ್ರಮೀಳಾ ಗರಡಿ, ಆಶಾ ಜಗದೀಶ್, ‘ಸಾಧಕ ಮಾನಿನಿ ಪುರಸ್ಕಾರ’: ವಿನಯಾ ಪ್ರಸಾದ್, ಚಂದ್ರಿಕಾ ಗುರುರಾಜ್, ಎಲ್.ಜಿ. ಮೀರಾ, ಆಯೋಜನೆ: ಸಂಗೀತಗಂಗಾ, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜಯನಗರ, ಬೆಳಿಗ್ಗೆ 10

**ಪುಸ್ತಕ ಸಂತೆ: ಉದ್ಘಾಟನೆ:** ಸಿದ್ದರಾಮಯ್ಯ, ಪುಸ್ತಕ ಬಿಡುಗಡೆ: ಶಿವರಾಜ್ ತಂಗಡಗಿ, ಅಧ್ಯಕ್ಷತೆ: ವಿ.ಎಸ್. ಉಗ್ರಪ್ಪ, ಪುಸ್ತಕ ಮಳಿಗೆ ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಮುಖ್ಯ ಅತಿಥಿಗಳು: ವಿಶ್ವೇಶ್ವರ ಭಟ್, ಧರಣೀದೇವಿ ಮಾಲಗತ್ತಿ, ಆಹಾರ ಮೇಳ ಉದ್ಘಾಟನೆ: ಮಮತಾ ರಾವತ್, ರಂಗೋಲಿ ಮೇಳ ಉದ್ಘಾಟನೆ: ಚೈತ್ರಾ ಕೊಟ್ಟೂರು, ಮಕ್ಕಳ ಸಂತೆ ಉದ್ಘಾಟನೆ: ಜ್ಞಾನ ಗುರುರಾಜ್, ರಚನ, ಆಶಯ ನುಡಿ: ವೀರಕಪುತ್ರ ಶ್ರೀನಿವಾಸ್, ಆಯೋಜನೆ: ವೀರಲೋಕ ಪುಸ್ತಕ, ಸ್ಥಳ: ಸ್ವಾಭಿಮಾನ ಉದ್ಯಾನವನ, ಎಚ್.ಎಸ್. ಆರ್. ಬಡಾವಣೆ, ಬೆಳಿಗ್ಗೆ 10


**ಎರಡನೇ ಭಾರತೀಯ ಗ್ರಂಥಾಲಯ ಅಧಿವೇಶನ:** ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಮುಖ್ಯ ಅತಿಥಿಗಳು: ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಜಮೀರ್ ಅಹಮದ್, ಶಾಲಿನಿ ರಜನೀಶ್, ರಿತೇಶ್ ಕುಮಾರ್ ಸಿಂಗ್, ಸತೀಶ್ ಕುಮಾರ್ ಹೊಸಮನಿ, ಆಯೋಜನೆ: ಸೆಕೆಂಡ್ ಇಂಡಿಯನ್ ಲೈಬ್ರರಿ ಕಾಂಗ್ರೆಸ್, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು, ಬೆಳಿಗ್ಗೆ 10.30

**ಕೇಶವಾನಂದ ಭಾರತಿ ಪ್ರಕರಣದ ಅವಲೋಕನ, ಸಂವಿಧಾನದ ಮೂಲ ಸ್ವರೂಪ ಉಳಿಸಿದ ಪ್ರಕರಣದ 50ನೇ ವಾರ್ಷಿಕೋತ್ಸವ:** ಉದ್ಘಾಟನೆ: ನ್ಯಾ. ಸಂತೋಷ್ ಹೆಗ್ಡೆ, ಗೌರವ ಅತಿಥಿ: ಸಚ್ಚಿದಾನಂದ ಭಾರತಿ ಸ್ವಾಮೀಜಿ, ಮುಖ್ಯ ಭಾಷಣ: ನ್ಯಾ. ನಾಗಮೋಹನದಾಸ್, ವಿಶೇಷ ಆಹ್ವಾನಿತರು: ಕೆ. ರವಿವರ್ಮ ಕುಮಾರ್, ವಿಶಾಲರಘು ಎಚ್.ಎಲ್., ಅಧ್ಯಕ್ಷತೆ: ಆರ್. ಉಪೇಂದ್ರ ಶೆಟ್ಟಿ, ಆಯೋಜನೆ: ಯುನಿವರ್ಸಲ್ ಸ್ಕೂಲ್ ಆಫ್ ಲಾ, ಸ್ಥಳ: ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10



ಸಂತೋಷ್ ಹೆಗ್ಡೆ

**ತೊ. ನಂಜುಂಡಸ್ವಾಮಿ ನೆನಪಿನ ಪ್ರಶಸ್ತಿ ಪ್ರದಾನ ಸಮಾರಂಭ:** ಅಧ್ಯಕ್ಷತೆ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಮುಖ್ಯ ಅತಿಥಿಗಳು: ಡಾ.ಸಿ. ಎನ್. ಮಂಜುನಾಥ್, ಶ್ರೀನಿವಾಸ ಜಿ. ಕಪ್ಪಣ್ಣ, ಬಿ. ಸುರೇಶ್, ಪ್ರಶಸ್ತಿ ಪುರಸ್ಕೃತರು: ಹೂಲಿ ಶೇಖರ್, ಆಯೋಜನೆ: ತೊ. ನಂಜುಂಡಸ್ವಾಮಿ ಗೆಳೆಯರ ಬಳಗ, ಸ್ಥಳ: ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ, ಮಲ್ಲತ್ತಹಳ್ಳಿ, ಸಂಜೆ 5.30



ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

**ಮಾಸಿಕ ಮಂಟಪ:** ‘ಕನ್ನಡದ ಕಟ್ಟಾಳುಗಳ ಅನನ್ಯ ನೆನಪುಗಳು’ ವಿಶೇಷ ಉಪನ್ಯಾಸ: ಜಾಣಗೆರೆ ವೆಂಕಟರಾಮಯ್ಯ, ಅಧ್ಯಕ್ಷತೆ: ಆರ್. ಎಸ್. ಶಾಂತಾರಾಮ್, ಆಯೋಜನೆ ಹಾಗೂ ಸ್ಥಳ: ದೀಪಾ ಅಂಧ ವಸತಿಯುತ ಪ್ರೌಢಶಾಲೆ, ಭಾರತ್‌ನಗರ 2ನೇ ಹಂತ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 10.30

**ಪ್ರೊ.ವಿ.ಬಿ.ಕುಟ್ಟಿನೊ ಸೆಮಿನಾರ್ ಹಾಲ್ ಉದ್ಘಾಟನೆ:** ನ್ಯಾ. ಪ್ರತಿಭಾ ಎಂ. ಸಿಂಗ್, ನ್ಯಾ. ಕೃಷ್ಣ ಎಸ್. ದೀಕ್ಷಿತ್, ನ್ಯಾ. ರಂಗಸ್ವಾಮಿ ನಟರಾಜ್, ಗೌರವ ಅತಿಥಿಗಳು: ಬಸವಪ್ರಭು ಎಸ್. ಪಾಟೀಲ, ಎ.ಎಸ್. ಪೊನ್ನಣ್ಣ, ಅಧ್ಯಕ್ಷತೆ: ಎಸ್.ಎಂ. ಜಯಕರ ಶೆಟ್ಟಿ, ಆಯೋಜನೆ ಹಾಗೂ ಸ್ಥಳ: ಪ್ರೊ.ವಿ.ಬಿ.ಕುಟ್ಟಿನೊ ಸೆಮಿನಾರ್ ಹಾಲ್, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10.30

**ನಾಟಕೋತ್ಸವ:** ಉದ್ಘಾಟನೆ: ಶ್ರೀನಿವಾಸ್, ನಾಟಕಗಳು: ಸಿಂಧು ಬೈರವಿ ಕಲಾ ತಂಡದಿಂದ ‘ನನ್ನವಳ ಕಾಗದ’, ಗಂಧರ್ವ ಸೇವಾ ಕಲಾ ತಂಡದಿಂದ ‘ಕನಸಿನ ರಾಣಿ’, ಆಯೋಜನೆ: ವಾಸವಿ ಸಾಂಸ್ಕೃತಿಕ ಕಲಾ ತಂಡ, ಸ್ಥಳ: ನಿರಾಶ್ರಿತರ ಪರಿಹಾರ ಕೇಂದ್ರ, ಮಾಗಡಿ ರಸ್ತೆ, ಮಧ್ಯಾಹ್ನ 2

**ಬಿ. ಶೃಂಗೇಶ್ವರ ಅವರ ‘ಅಭಿನವ ಲಿಮರಿಕ್ಸ್’ ಪುಸ್ತಕ ಬಿಡುಗಡೆ:** ಎಸ್. ಆರ್. ವಿಜಯಶಂಕರ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಪುಸ್ತಕದ ಬಗ್ಗೆ ಮಾತು: ಎಂ.ಜಿ. ಆರ್. ಅರಸು, ಮುಖ್ಯ ಅತಿಥಿಗಳು: ಎಂ. ತಿಮ್ಮಯ್ಯ, ಶಾಂತಿವಾಸು, ಆಯೋಜನೆ: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ಶೇಷಾದ್ರಿಪುರಂ ಕಾಲೇಜು ದತ್ತಿ ಸಭಾಂಗಣ, ಶೇಷಾದ್ರಿಪುರ, ಸಂಜೆ 4.30

**‘ಶ್ರೀ ಕಲಾಗೌರಿಂ ಉಪಾಸ ಮಹೆ’ ಭರತನಾಟ್ಯ ನೃತ್ಯ ಕಾರ್ಯಕ್ರಮ:** ಉದ್ಘಾಟನೆ: ಬೃಂದಾ.ಕೆ, ಮುಖ್ಯ ಅತಿಥಿಗಳು: ಆರ್. ಶ್ರೀಮತಿ, ಅನನ್ಯ ಎಂ., ಆಯೋಜನೆ: ಕಲಾಗೌರಿ ನೃತ್ಯಾಲಯ, ಸ್ಥಳ: ಘನಲಿಂಗ ಶಿವಯೋಗಿ ಸಭಾಭವನ (ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್ ಕ್ಯಾಂಪಸ್), ಬನಶಂಕರಿ 2ನೇ ಹಂತ, ಸಂಜೆ 4.30

**ಡಾ.ಎಂ.ಎ. ಜಯಚಂದ್ರ ದತ್ತಿ ಕಾರ್ಯಕ್ರಮ:** ‘ಅಜಿತನಾಥ ಪುರಾಣದಲ್ಲಿ ಅತ್ತಿಮಬ್ಬೆ’ ವಿಷಯದ ಬಗ್ಗೆ ಉಪನ್ಯಾಸ: ಎಚ್.ಡಿ. ಜಯಪದ್ಮ ಕುಮಾರ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

**ಕಾಯಕ ಶರಣರ ಜಯಂತಿ:** ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಬಸವಹರಳಯ್ಯ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ನಾರಾಯಣಸ್ವಾಮಿ, ಶಿವರಾಜ್ ತಂಗಡಗಿ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

**ಉಚಿತ ಶಿಕ್ಷಣ ಕಾರ್ಯಕ್ರಮಗಳ ಸಮಾರೋಪ:** ಅಧ್ಯಾಪಕ ವೃಂದಕ್ಕೆ ಅಭಿನಂದನೆ: ವೆಂಕಟಶಿವಾ ರೆಡ್ಡಿ, ಮುಖ್ಯ ಅತಿಥಿಗಳು: ಟಿ.ವಿ. ರಾಜು, ಲಹರಿ ವೇಲು, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಹಾಗೂ ಸ್ಥಳ: ಉದಯಭಾನು ಸಾಂಸ್ಕೃತಿಕ ಭವನ, ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 5

**‘ರೈತರ ಭದ್ರತೆ, ದೇಶದ ಭದ್ರತೆ’ ಸಂವಾದ:** ಅಧ್ಯಕ್ಷತೆ: ಅಜಿತ್ ಡಿ. ಕಲ್ಕುಳಿ, ಚರ್ಚೆಯಲ್ಲಿ ಭಾಗವಹಿಸುವವರು: ನ್ಯಾ. ನಾಗಮೋಹನದಾಸ್, ಮುಖ್ಯ ಅತಿಥಿಗಳು: ಅರವಿಂದ ಸಿಗದಾಳು, ರಾಜಶೇಖರ, ಯಶವಂತ, ಆಯೋಜನೆ: ಮಲೆನಾಡು ಹಿತರಕ್ಷಣಾ ವೇದಿಕೆ, ಸ್ಥಳ: ಮಲೆನಾಡು ಕಲ್ಚರಲ್ ಕ್ಲಬ್, ಮಹಾಲಕ್ಷ್ಮೀ ಲೇಔಟ್, ಸಂಜೆ 5

**‘ಸೌರಭ 24’ ಪ್ರಶಸ್ತಿ ಪ್ರದಾನ ಸಮಾರಂಭ:** ಉದ್ಘಾಟನೆ: ಶಿವರಾಜ್ ತಂಗಡಗಿ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಮುಖ್ಯ ಅತಿಥಿಗಳು: ನಾಗೇಶ್ ಬೆಟ್ಟಕೋಟೆ, ಗೋವಿಂದ ರಾಜು, ಧರಣೀದೇವಿ ಮಾಲಗತ್ತಿ, ಜೆ. ಲೋಕೇಶ್, ಶ್ರೀನಿವಾಸ ಜಿ. ಕಪ್ಪಣ್ಣ, ರಂಗ ಗೌರವ: ಸಿ. ಬಸವಲಿಂಗಯ್ಯ, ಬಿ.ವಿ. ರಾಜಾರಾಮ್, ಆಯೋಜನೆ: ಭಾರತ ಯಾತ್ರಾ ಕೇಂದ್ರ, ರಂಗಸೌರಭ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಸಂಜೆ 5.30

**‘ಪುಕ್ಕಟೆ ಸಲಹೆ’ ಹಾಸ್ಯ ನಾಟಕ ಪ್ರದರ್ಶನ:** ರಚನೆ: ಎಚ್. ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ಪ್ರಸ್ತುತಿ: ವಿಶ್ವಪಥ ಕಲಾ ಸಂಗಮ, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾ ಭವನ , ಎನ್. ಆರ್. ಕಾಲೊನಿ, ಬಸವನಗುಡಿ, ಸಂಜೆ 5 ಹಾಗೂ ಸಂಜೆ 7.30

**ಕಲಾ ಸಂಭ್ರಮ: ಭರತನಾಟ್ಯ ಪ್ರದರ್ಶನ:** ಭಾವನಾ ವೆಂಕಟೇಶ್ವರ, ಗಾಯನ: ಶ್ರೀವತ್ಸ, ಮೃದಂಗ: ಜಿ.ಎಸ್. ನಾಗರಾಜ್, ನಟ್ಟುವಾಂಗ: ಪದ್ಮಿನಿ ಉಪಾಧ್ಯ, ಮುಖ್ಯ ಅತಿಥಿಗಳು: ಮೇದಿನಿ ಉದಯ್, ಉಮೇಶ್ ಕುಮಾರ್, ವೈ.ಕೆ. ಸಂಧ್ಯಾ ಶರ್ಮಾ, ಪೂರ್ಣ ಸುರೇಶ್, ಆಯೋಜನೆ ಹಾಗೂ ಸ್ಥಳ: ಅರ್ಕ ಥಿಯೇಟರ್, ಎರಡನೇ ಅಡ್ಡರಸ್ತೆ, ಜೆ ಪಿ ನಗರ 7ನೇ ಹಂತ, ಸಂಜೆ 6

**ಕರ್ನಾಟಕ ಶಾಸ್ತ್ರೀಯ ಸಂಗೀತ:** ಗಾಯನ: ಶುಭಮಂಗಳ ರಘುನಂದನ್, ಪಿಟೀಲು: ವೆಂಕಟೇಶ್ ಜೋಯಿಸ್, ಮೃದಂಗ: ಸುನೀಲ್ ಸುಬ್ರಹ್ಮಣ್ಯ, ಘಟ: ಎನ್.ಎಸ್. ಕೃಷ್ಣಪ್ರಸಾದ್, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಅಂಚೆ ಕಚೇರಿ ಹತ್ತಿರ, ಮಲ್ಲೇಶ್ವರ, ಸಂಜೆ 6.15

**ಮಧ್ವ ನವರಾತ್ರಿ ಪ್ರವಚನ ಮಾಲಿಕೆ:** ‘ಸುಮಧ್ವ ವಿಜಯ’ ಪ್ರವಚನ: ವಿನಾಯಕ ನಾಮಣ್ಣವರ್, ಆಯೋಜನೆ: ಗುರು ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
**nagaradalli_indu@prajavani.co.in**

ಲೋಕಸಭಾ ಚುನಾವಣೆ: ನಾಗರಿಕ ಸಮಾಜ ವೇದಿಕೆಯಿಂದ ಪ್ರಣಾಳಿಕೆ ಬಿಡುಗಡೆ

# 'ಒಕ್ಕೂಟ ವ್ಯವಸ್ಥೆ ದಮನಕ್ಕೆ ಯತ್ನ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೇಂದ್ರ ಸರ್ಕಾರ ಒಕ್ಕೂಟ ವ್ಯವಸ್ಥೆಯನ್ನೇ ಕೊಲ್ಲುವ ಪ್ರಯತ್ನ ನಡೆಸುತ್ತಿದೆ' ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆ.ಪಿ.ಸಿ.ಸಿ) ಮಾಧ್ಯಮ ವಿಭಾಗದ ಉಪಾಧ್ಯಕ್ಷ ರಮೇಶ ಬಾಬು ಆಪಾದಿಸಿದರು.

ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾಗರಿಕ ಸಮಾಜ ವೇದಿಕೆಯು ಹೊರತಂದಿರುವ ಲೋಕಸಭೆ ಚುನಾವಣೆ–2024ರ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಒಕ್ಕೂಟ ವ್ಯವಸ್ಥೆ ದಮನವಾದರೆ ಪ್ರಜಾಪ್ರಭುತ್ವಕ್ಕೆ ಅರ್ಥವೇ ಇರುವುದಿಲ್ಲ. ಪ್ರಾದೇಶಿಕ ಭಾವನೆಗಳು ಉಳಿಯಬೇಕು. ಯಾವುದೇ ಸರ್ಕಾರ ಇರಲಿ; ಸಂವಿಧಾನದ ಆಶಯಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು' ಎಂದು ಮನವಿ ಮಾಡಿದರು.

'ಏಕಧರ್ಮ, ಏಕ ಜಾತಿ ಇರುವಂತೆ ಮಾಡುತ್ತೇವೆ ಎಂಬುದು ಸರಿಯಾದ ಕ್ರಮವಲ್ಲ. ಅದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ' ಎಂದು ಪ್ರತಿಪಾದಿಸಿದರು.

'ಡ್ರಗ್ಸ್ ಮಾರಾಟ ಜಾಲಕ್ಕೆ ಕಡಿವಾಣ ಹಾಕುವಂತೆ ಮುಖ್ಯಮಂತ್ರಿಯವರು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದು ಸೂಚಿಸಿದ್ದರು. ಆದರೆ, ಪೊಲೀಸರು ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಆಪಾದಿಸಿದರು.

'ನಾಗರಿಕ ಸಮಾಜ ವೇದಿಕೆ ಹೊರತಂದಿರುವ ಪ್ರಣಾಳಿಕೆಯನ್ನು ಎಐಸಿಸಿ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಪಿ.ಚಿದಂಬರಂ ಅವರಿಗೆ ಸಲ್ಲಿಸಲಾಗುವುದು' ಎಂದು ಹೇಳಿದರು.

ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಮಾತನಾಡಿ, 'ಧರ್ಮ, ವೈಯಕ್ತಿಕ ವಿಚಾರಗಳನ್ನು ರಾಜಕೀಯಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಬಡವರಿಗೆ ನ್ಯಾಯಾಂಗದಿಂದ ನ್ಯಾಯ ಸಿಗುತ್ತಿಲ್ಲ. ಮಾಧ್ಯಮಗಳು ವ್ಯಾಪಾರೀಕರಣಗೊಂಡಿವೆ. ಮಾಧ್ಯಮದಿಂದಲೂ ನ್ಯಾಯ ದೊರೆಯುತ್ತಿಲ್ಲ' ಎಂದು ಹೇಳಿದರು.

'ಯಾರೂ ಉಚಿತ ಕೊಡುಗೆಗಳನ್ನೂ ದೂಷಿಸುತ್ತಿಲ್ಲ. ಉಚಿತ ಕೊಡುಗೆಗಳಿಗೆ ಆದ್ಯತೆ ಮುಖ್ಯ. ಶಿಕ್ಷಣ ಹಾಗೂ ಆರೋಗ್ಯ ಸೇವೆಯೂ ಉಚಿತವಾಗಿ ದೊರೆತರೆ ಜನರಿಗೆ ಹೆಚ್ಚು ಅನುಕೂಲ' ಎಂದು ಪ್ರತಿಪಾದಿಸಿದರು. ಬಿಜೆಪಿ ವಕ್ತಾರೆ ಸುರಭಿ ಪಾಲ್ಗೊಂಡಿದ್ದರು.

## ಪ್ರಣಾಳಿಕೆ ಪ್ರಮುಖಾಂಶಗಳು

- ರೈತರ ಕನಿಷ್ಠ ಬೆಂಬಲ ಬೆಲೆ ಖಾತರಿ ಹಕ್ಕು ಮಸೂದೆ–2018 ಅನ್ನು ಜಾರಿಗೆ ತರಬೇಕು
- ಕೃಷಿಯನ್ನು ಖಾಸಗಿ ಕ್ಷೇತ್ರಕ್ಕೆ ವಹಿಸುವ ಯಾವುದೇ ಪ್ರಯತ್ನ ಮಾಡಬಾರದು
- ದಲಿತರು ಹಾಗೂ ಬುಡಕಟ್ಟು ಜನರನ್ನು ಬಲವಂತದಿಂದ ಸ್ಥಳಾಂತರ ಮಾಡಬಾರದು
- ಪ್ರತಿ ರಾಜ್ಯದಲ್ಲಿ ವಲಸೆ ಕಾರ್ಮಿಕರ ಮಂಡಳಿಯನ್ನು ಕಡ್ಡಾಯವಾಗಿ ರಚಿಸಬೇಕು
- ಕೊಳೆಗೇರಿ ನಿವಾಸಿಗಳಿಗೆ ಆಸ್ತಿ ಹಕ್ಕು ಕಾಯ್ದೆಯನ್ನು ಜಾರಿಗೆ ತರಬೇಕು
- ಕುಡಿಯುವ ನೀರಿನ ಹಕ್ಕು, ಆರೋಗ್ಯದ ಹಕ್ಕು ಹಾಗೂ ಶಿಕ್ಷಣದ ಹಕ್ಕು ಎಲ್ಲರಿಗೂ ದೊರೆಯಬೇಕು
- ಶೇ 33ರಷ್ಟು ಮಹಿಳಾ ಮೀಸಲಾತಿಯನ್ನು ಹೊಸ ಜನಗಣತಿ ಹಾಗೂ ಕ್ಷೇತ್ರಗಳ ಪುನರ್ ವಿಂಗಡಣೆಗೂ ಮೊದಲು ಜಾರಿಗೆ ತರಬೇಕು
- ಅರಣ್ಯ ಹಕ್ಕು ಕಾಯ್ದೆಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಬೇಕು
- ಅಂಗವಿಕಲರ ಕಲ್ಯಾಣಕ್ಕೆ ಶೇ 5ರಷ್ಟು ಅನುದಾನ ಮೀಸಲಿಡಬೇಕು. ಶೇ 3ರಷ್ಟು ಕ್ಷೇತ್ರಗಳಲ್ಲಿ ಅಂಗವಿಕಲರಿಗೆ ಸ್ಪರ್ಧಿಸಲು ಅವಕಾಶ ಕಲ್ಪಿಸಬೇಕು
- ಎಲ್ಲ ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳು ತಮ್ಮ ಭಾಷಣದಲ್ಲಿ ದ್ವೇಷ ಬಿತ್ತುವುದು, ಜನಾಂಗೀಯ ಹತ್ಯೆಗಳಿಗೆ ಕರೆ ನೀಡುವುದು, ಜಾತಿ–ಧರ್ಮಗಳ ಹೆಸರಿನಲ್ಲಿ ಮತಯಾಚನೆ ಮಾಡಿದರೆ ಕ್ರಮ ಕೈಗೊಳ್ಳಬೇಕು
- ಕ್ರಿಮಿನಲ್ ಆರೋಪಗಳನ್ನು ಹೊತ್ತಿರುವ ಅಭ್ಯರ್ಥಿಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಬಾರದು




ಪ್ರಣಾಳಿಕೆಯನ್ನು ಎಎಪಿ ರಾಜ್ಯ ಘಟಕ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು (ಎಡದಿಂದ ನಾಲ್ಕನೆಯವರು) ಬಿಡುಗಡೆಗೊಳಿಸಿದರು. (ಎಡದಿಂದ) ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಪ್ರತಾಪ್ ಸಿಂಹ, ಸಿಪಿಐ ರಾಜ್ಯ ಸಮಿತಿಯ ಸಹಾಯಕ ಕಾರ್ಯದರ್ಶಿ ಬಿ.ಅಮ್ಜದ್, ಕೆಪಿಸಿಸಿ ಮಾಧ್ಯಮ ವಿಭಾಗದ ರಮೇಶ್ ಬಾಬು, ಜೆಡಿಎಸ್ ಮುಖಂಡ ಕೆ.ವಿ.ನಾರಾಯಣಸ್ವಾಮಿ, 'ಸಿವಿಕ್' ಬೆಂಗಳೂರಿನ ಕಾರ್ಯನಿರ್ವಾಹಕ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

# ಲೈಂಗಿಕ ದೌರ್ಜನ್ಯ: ವೈದ್ಯನ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಪ್ರತಿಷ್ಠಿತ ವೈದ್ಯಕೀಯ ಕಾಲೇಜೊಂದರ ವಿಭಾಗದ ಮುಖ್ಯಸ್ಥರಾಗಿರುವ ವೈದ್ಯೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಕೃತ್ಯ ಎಸಗಿರುವ ಆರೋಪದಡಿ ಅದೇ ಕಾಲೇಜಿನ ವೈದ್ಯರೊಬ್ಬರ ವಿರುದ್ಧ ಬನಶಂಕರಿ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

'ಜ. 19ರಿಂದ 24ರವರೆಗಿನ ಅವಧಿಯಲ್ಲಿ ನಡೆದಿರುವ ಕೃತ್ಯದ ಬಗ್ಗೆ 51 ವರ್ಷ ವಯಸ್ಸಿನ ವೈದ್ಯೆ ದೂರು ನೀಡಿದ್ದಾರೆ. ಅವರದ್ದೇ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ವೈದ್ಯನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಬನಶಂಕರಿ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

'ವಿಭಾಗದ ಜೇಷ್ಠತಾ ಪಟ್ಟಿ ಸಿದ್ಧಪಡಿಸುವ ವಿಚಾರವಾಗಿ ಗೊಂದಲ ಉಂಟಾಗಿತ್ತು. ಅದನ್ನು ವೈದ್ಯೆ ಪ್ರಶ್ನಿಸಿದ್ದರು. ಅಷ್ಟಕ್ಕೇ ಸಿಟ್ಟಾಗಿದ್ದ ಆರೋಪಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಗೌರವಕ್ಕೆ ಧಕ್ಕೆ ತಂದಿದ್ದರು. ಇದರಿಂದ ನೊಂದಿದ್ದ ವೈದ್ಯೆ, ಆರೋಪಿ ಕೃತ್ಯದ ವಿರುದ್ಧ ಪ್ರಾಂಶುಪಾಲರಿಗೆ ದೂರು ನೀಡಿದ್ದರು.'

'ದೂರು ನೀಡಿದ್ದರಿಂದ ಕೋಪಗೊಂಡಿದ್ದ ಆರೋಪಿ ವೈದ್ಯ, ಸಂತ್ರಸ್ತೆಯ ಕೊಠಡಿಗೆ ನುಗ್ಗಿದ್ದ. ಕೈ ಹಿಡಿದು ಎಳೆದಾಡಿದ್ದ. ಎದೆ ಮುಟ್ಟಿ ದೌರ್ಜನ್ಯ ಎಸಗಿದ್ದ. 'ನನ್ನ ವಿರುದ್ಧ ದೂರು ನೀಡುತ್ತಿಯಾ? ನೀನು ಎಂಥಾ ಹೆಣ್ಣು ಎಂದು ಎಲ್ಲರಿಗೂ ಗೊತ್ತಿದೆ. ದೂರು ವಾಪಸು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ನಿನ್ನನ್ನು ಜೀವಸಹಿತ ಬಿಡುವುದಿಲ್ಲ' ಎಂದು ಆರೋಪಿ ಕೊಲೆ ಬೆದರಿಕೆಯೊಡ್ಡಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ದೂರು ವಾಪಸು ತೆಗೆದುಕೊಳ್ಳದೇ ಇದ್ದುದರಿಂದ, ಕಾಲೇಜಿನಲ್ಲಿ ಇತರರ ಬಳಿ ಸಂತ್ರಸ್ತೆ ಬಗ್ಗೆ ಆರೋಪಿ ಕೆಟ್ಟದಾಗಿ ಮಾತನಾಡಲಾರಂಭಿಸಿದ್ದ. ಇದನ್ನು ಸಂತ್ರಸ್ತೆ ಪ್ರಶ್ನಿಸಿದ್ದರು. ಪುನಃ ಆರೋಪಿ ವೈದ್ಯೆಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಲೈಂಗಿಕ ದೌರ್ಜನ್ಯ ಎಸಗಿದ್ದನೆಂದು ಗೊತ್ತಾಗಿದೆ. ಈ ಸಂಗತಿ ದೂರಿನಲ್ಲಿದೆ. ಆರೋಪಿ ವೈದ್ಯನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ವಸತಿ ಸೇರಿ ವಿವಿಧ ಸೌಲಭ್ಯಗಳನ್ನು ಒದಗಿಸಲು ಆಗ್ರಹ

# ಕಾರ್ಮಿಕರ ಪ್ರತಿಭಟನೆ ನಾಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಸತಿ ಸೌಲಭ್ಯ, ಉಚಿತ ಬಸ್ ಪಾಸ್ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತ ಕಾರ್ಮಿಕರ ಒಕ್ಕೂಟ ಇದೇ 11ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾರ್ಮಿಕರ ಒಕ್ಕೂಟದ ರಾಜ್ಯಾಧ್ಯಕ್ಷ ಬಿ. ದೇವರಾಜ್, 'ಕಾರ್ಮಿಕರ ಹಕ್ಕಿಗಾಗಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಕೃಷಿ ಕಾರ್ಮಿಕರು, ಮನೆ ಕೆಲಸದವರು, ಆಟೊರಿಕ್ಷಾ ಚಾಲಕರು ಸೇರಿ 103 ವಲಯಗಳ ಅಸಂಘಟಿತ ಕಾರ್ಮಿಕರು ಈ ಹೋರಾಟದಲ್ಲಿ ಪಾಲ್ಗೊಳ್ಳುತ್ತಾರೆ. ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ವಸತಿ ಸೌಲಭ್ಯಕ್ಕಾಗಿ ಕಾರ್ಮಿಕ ಇಲಾಖೆ ತಲಾ ₹5 ಲಕ್ಷವನ್ನು ಘೋಷಿಸಬೇಕು. ಕಟ್ಟಡ ಕಾರ್ಮಿಕರಿಗೆ ಕೂಡಲೇ ಬಸ್‌ಪಾಸ್ ಕೂಡ ವಿತರಿಸಬೇಕು' ಎಂದು ಆಗ್ರಹಿಸಿದರು.

'ರಾಜ್ಯದಾದ್ಯಂತ ಕಾರ್ಮಿಕ ಕಲ್ಯಾಣ ಮಂಟಪ ಮತ್ತು ಕಾರ್ಮಿಕ ಸಮುದಾಯ ಭವನಗಳನ್ನು ನಿರ್ಮಿಸಬೇಕು. ಕನಿಷ್ಠ ವೇತನಕ್ಕೆ ಒಳಪಡುವ ಕಾರ್ಮಿಕರಿಗೆ ₹35 ಸಾವಿರ ನಿಗದಿಪಡಿಸಬೇಕು. ಮುಂದಿನ ಬಜೆಟ್‌ನಲ್ಲಿ ಕಾರ್ಮಿಕರಿಗಾಗಿಯೇ ₹1 ಸಾವಿರ ಕೋಟಿ ಅನುದಾನ ಮೀಸಲಿಡಬೇಕು. ಈಗ ಅನಧಿಕೃತವಾಗಿ ನೋಂದಾಯಿಸಿಕೊಂಡಿರುವ ಕಾರ್ಮಿಕರಿಗೆ ಮನೆ ನಿರ್ಮಾಣಕ್ಕಾಗಿ ಸ್ಲಂ ಬೋರ್ಡ್‌ನಿಂದ ನೀಡಿರುವ ಸಹಾಯಧನದ ಬಗ್ಗೆ ತನಿಖೆ ನಡೆಸಬೇಕು. ಪಿಂಚಣಿ ಸೌಲಭ್ಯವನ್ನು ಮರುಸ್ಥಾಪಿಸಲು' ಒತ್ತಾಯಿಸಿದರು.

'ವಿವಿಧ ಕನ್ನಡ ಸಂಘ–ಸಂಸ್ಥೆಗಳು ಬೆಂಬಲ ಸೂಚಿಸಿವೆ' ಎಂದು ಹೇಳಿದರು.

# ಬೀಗಲ್ಸ್, ಮೈಸೂರು ಮಹಿಳೆಯರಿಗೆ ಜಯ

**ಧಾರವಾಡ:** ಬೆಂಗಳೂರಿನ ಬೀಗಲ್ಸ್ ಕ್ಲಬ್ ಮತ್ತು ಮೈಸೂರಿನ ಡಿವೈಇಎಸ್ ತಂಡಗಳು ಇಲ್ಲಿಯ ರೋವರ್ಸ್ ಕ್ಲಬ್ ಆಶ್ರಯದಲ್ಲಿ ನಡೆಯುತ್ತಿರುವ ರಾಜ್ಯಮಟ್ಟದ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಮಹಿಳೆಯರ ವಿಭಾಗದ ಸೆಮಿಫೈನಲ್ ಲೀಗ್ ಪಂದ್ಯಗಳಲ್ಲಿ ಜಯಿಸಿದವು.

ರೋವರ್ಸ್ ಕ್ಲಬ್ ಅಂಕಣದಲ್ಲಿ ನಡೆದ ಶುಕ್ರವಾರ ನಡೆದ ಪಂದ್ಯದಲ್ಲಿ ಬೀಗಲ್ಸ್ ತಂಡವು 51–25ರಿಂದ ರೋವರ್ಸ್ ವಿರುದ್ಧ ಜಯಿಸಿತು.

ಇನ್ನೊಂದು ಪಂದ್ಯದಲ್ಲಿ ಮೈಸೂರು ತಂಡವು 46–40ರಿಂದ ನಿಟ್ಟೆಯ ಕೆ.ಎಸ್. ಹೆಗಡೆ ತಂಡದ ವಿರುದ್ಧ ಗೆದ್ದಿತು.

ಪುರುಷರ ವಿಭಾಗದಲ್ಲಿ ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್, ಕರ್ನಾಟಕ ರಾಜ್ಯ ಪೊಲೀಸ್, ಬೆಂಗಳೂರಿನ ಎಂ.ಎಸ್. ಕೆ.ಆರ್, ಬೆಂಗಳೂರಿನ ಡಿವೈಇಎಸ್, ಬೀಗಲ್ಸ್ ಕ್ಲಬ್, ವ್ಯಾನ್‌ಗಾರ್ಡ್ಸ್, ಜಯನಗರ ಬ್ಯಾಸ್ಕೆಟ್‌ಬಾಲ್ ಕ್ಲಬ್ ಹಾಗೂ ಜಿಎಸ್‌ಟಿ ಮತ್ತು ಕಸ್ಟಮ್ಸ್ ತಂಗಳು ಎಂಟರ ಘಟ್ಟ ತಲುಪಿವೆ. ಈ ತಂಡಗಳು ಎಂಟು ಗುಂಪುಗಳಲ್ಲಿ ಅಗ್ರಸ್ಥಾನ ಪಡೆದಿವೆ.



# ಪುಟ್ಟಣ್ಣ ಆಧಿಪತ್ಯಕ್ಕೆ 'ಮೈತ್ರಿ' ಸಡ್ಡು

## ಶಿಕ್ಷಕರ ಕ್ಷೇತ್ರ: ಜೆಡಿಎಸ್ ಪ್ರಾಬಲ್ಯ ಪುನರ್ ಸ್ಥಾಪಿಸಲು ರಂಗನಾಥ್ ಸಜ್ಜು, ಬಿಜೆಪಿಯಿಂದ ಬೆಂಬಲ

• ಚಂದ್ರಹಾಸ ಹಿರೇಮಳಲಿ

**ಬೆಂಗಳೂರು:** ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಫೆ.16ರಂದು ನಡೆಯಲಿರುವ ಉಪ ಚುನಾವಣೆ ತೀವ್ರ ಕುತೂಹಲ ಮೂಡಿಸಿದೆ. ಕ್ಷೇತ್ರದ ಮೇಲಿನ ಎರಡು ದಶಕಗಳ ಆಧಿಪತ್ಯವನ್ನು ಈಗ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಪುಟ್ಟಣ್ಣ ಉಳಿಸಿಕೊಳ್ಳುವರೇ ಎನ್ನುವತ್ತ ಎಲ್ಲರ ಚಿತ್ತ ನೆಟ್ಟಿದೆ.

**ಕ್ಷೇತ್ರ ವ್ಯಾಪ್ತಿ ಜಿಲ್ಲೆಗಳು** • ಬೆಂಗಳೂರು ನಗರ • ಬೆಂಗಳೂರು ಗ್ರಾಮಾಂತರ • ರಾಮನಗರ

| ವಿಭಾಗಗಳು | ಮತದಾರರು |
|---|---|
| ಬೆಂಗಳೂರು ಗ್ರಾಮಾಂತರ | 2,197 |
| ರಾಮನಗರ | 2,543 |
| ಬಿಬಿಎಂಪಿ ಕೇಂದ್ರ | 1,981 |
| ಬಿಬಿಎಂಪಿ ಉತ್ತರ | 2,834 |
| ಬಿಬಿಎಂಪಿ ದಕ್ಷಿಣ | 2,848 |
| ಬೆಂಗಳೂರು ನಗರ | 6,769 |
| ಒಟ್ಟು ಮತದಾರರು | 19,172 |



| | |
|---|---|
| ಚುನಾವಣೆ ನಡೆಯುವ ದಿನ | ಫೆ.16 |
| ಮತದಾನದ ಸಮಯ | ಬೆಳಿಗ್ಗೆ 8ರಿಂದ ಸಂಜೆ 4 |
| ಮತದಾನ ಕೇಂದ್ರಗಳು | 55 |
| ಮತ ಎಣಿಕೆ | ಫೆ.20 |

ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಜೆಡಿಎಸ್ ರಾಜ್ಯ ಕಾನೂನು ಘಟಕದ ಅಧ್ಯಕ್ಷ ಎ.ಪಿ. ರಂಗನಾಥ್ ಅವರು ಕಣಕ್ಕೆ ಇಳಿದಿದ್ದಾರೆ. 2020ರ ಚುನಾವಣೆಯಲ್ಲೂ ಈ ಇಬ್ಬರು ಮುಖಾಮುಖಿಯಾಗಿದ್ದವರು. ಬಿಜೆಪಿಯಿಂದ ಪುಟ್ಟಣ್ಣ, ಜೆಡಿಎಸ್‌ನಿಂದ ರಂಗನಾಥ್ ಪೈಪೋಟಿ ನಡೆಸಿದ್ದರು. ಅದೃಷ್ಟ ಪುಟ್ಟಣ್ಣ ಅವರಿಗೆ ಒಲಿದಿತ್ತು. ಈ ಬಾರಿ ಎರಡು ಪಕ್ಷಗಳ ಬೆಂಬಲ ರಂಗನಾಥ್‌ಗೆ ದೊರೆತಿದೆ. ಇಬ್ಬರ ಮಧ್ಯೆ ನೇರ ಪೈಪೋಟಿ ಏರ್ಪಟ್ಟಿದ್ದು, ತಮ್ಮ ತಮ್ಮ ಅಭ್ಯರ್ಥಿಗಳ ಗೆಲುವಿಗಾಗಿ ಕಾಂಗ್ರೆಸ್ ಹಾಗೂ ಮೈತ್ರಿ ಪಕ್ಷಗಳ ಪ್ರಮುಖ ನಾಯಕರೇ ಅಖಾಡಕ್ಕೆ ಇಳಿದಿದ್ದಾರೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೃಹತ್



ಪುಟ್ಟಣ್ಣ



ಎ.ಪಿ. ರಂಗನಾಥ್

ಬೆಂಗಳೂರು ನಗರ ಪಾಲಿಕೆಯ ಕೇಂದ್ರ, ಉತ್ತರ ಹಾಗೂ ದಕ್ಷಿಣ ಭಾಗಗಳ ಜತೆಗೆ ರಾಮನಗರ ಜಿಲ್ಲೆಯ ವ್ಯಾಪ್ತಿಯನ್ನು ಬೆಂಗಳೂರು ಶಿಕ್ಷಕರ ಕ್ಷೇತ್ರ ಒಳಗೊಂಡಿದೆ. ಶಿಕ್ಷಕರು ಮತದಾರರಾಗಿರುವ ಈ ಕ್ಷೇತ್ರದಿಂದ 2002ರಲ್ಲಿ ಸ್ಪರ್ಧಿಸಿದ್ದ ಪುಟ್ಟಣ್ಣ ಮೊದಲ ಪ್ರಯತ್ನದಲ್ಲೇ ಗೆಲುವು ಪಡೆದು ವಿಧಾನ ಪರಿಷತ್ ಪ್ರವೇಶಿಸಿದ್ದರು. ಜೆಡಿಎಸ್ ಅಭ್ಯರ್ಥಿಯಾಗಿ ಮೊದಲ ಅವಧಿಯಲ್ಲಿ ವಿಜಯಮಾಲೆ ಧರಿಸಿದ್ದ ಅವರು ನಂತರ 2008 ಹಾಗೂ 2014ರಲ್ಲೂ ಜೆಡಿಎಸ್‌ನಿಂದಲೇ ಕಣಕ್ಕೆ ಇಳಿದು ಸತತ ಮೂರು ಬಾರಿ ವಿಜಯಪತಾಕೆ ಹಾರಿಸಿದ್ದರು. 2020ರಲ್ಲಿ ಜೆಡಿಎಸ್ ತೊರೆದು ಬಿಜೆಪಿ ಸೇರಿ ನಾಲ್ಕನೇ ಬಾರಿ ಸ್ಪರ್ಧಿಸಿದಾಗಲೂ ಅವರಿಗೇ ಅದೃಷ್ಟ ಒಲಿದಿತ್ತು.

2023ರ ವಿಧಾನಸಭಾ ಚುನಾವಣೆಗೂ ಮುನ್ನ ವಿಧಾನ ಪರಿಷತ್ ಹಾಗೂ ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ, ರಾಜಾಜಿನಗರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಸೋತಿದ್ದರು. ವಿಧಾನ ಪರಿಷತ್‌ನಂತೆ ವಿಧಾನಸಭೆ ಪ್ರವೇಶದ ಅದೃಷ್ಟ ಅವರಿಗೆ ಸಿಕ್ಕಿರಲಿಲ್ಲ. ಅವರ ರಾಜೀನಾಮೆಯಿಂದಲೇ ತೆರವಾಗಿದ್ದ ಸ್ಥಾನದ ಉಳಿದ ಅವಧಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಮತ್ತೆ ಅವರೇ ಸ್ಪರ್ಧಿಸಿದ್ದಾರೆ. 2026ರ ನವೆಂಬರ್ 11ರವರೆಗಿನ ಉಳಿದ ಅವಧಿಗೆ ಸೀಮಿತವಾಗಿ ಈ ಉಪ ಚುನಾವಣೆ ನಡೆಯುತ್ತಿದೆ. ಮೂರು ಅವಧಿ ಜೆಡಿಎಸ್‌ನಿಂದ, ಒಂದು ಬಾರಿ ಬಿಜೆಪಿಯಿಂದ ಆಯ್ಕೆಯಾಗಿದ್ದ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಮತದಾರರು ಹೇಗೆ ಸ್ವೀಕರಿಸುತ್ತಾರೆ ಎನ್ನುವುದನ್ನು ಇದೇ 16ರಂದು ನಡೆಯುವ ಚುನಾವಣೆಯ ಫಲಿತಾಂಶ ಸಾಬೀತು ಮಾಡಲಿದೆ.

ಶಿಕ್ಷಕರ ಸಂಘಟನೆಗಳು ಮತ್ತು ಶಿಕ್ಷಣ ಸಂಸ್ಥೆಗಳ ಜತೆ ನಿಕಟ ಒಡನಾಟ ಇರಿಸಿಕೊಂಡಿದ್ದ ಪುಟ್ಟಣ್ಣ, ಸ್ವಂತ ಬಲದಿಂದ ಕ್ಷೇತ್ರವನ್ನು ಜೆಡಿಎಸ್‌ನ ಪ್ರಬಲ ನೆಲೆಯಾಗಿ ಮಾಡಿದ್ದರು. ಬಿಜೆಪಿಗೆ ಪಕ್ಷಾಂತರ ಮಾಡಿದ ನಂತರ ಅವರ ಬಲದಲ್ಲೇ ಗೆಲುವಿನ ಓಟ ಮುಂದುವರಿಸಿದ್ದರು. ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿ ಎ.ಪಿ.ರಂಗನಾಥ್ ಜೆಡಿಎಸ್ ಪ್ರಾಬಲ್ಯವನ್ನು ಪುನರ್‌ಸ್ಥಾಪಿಸುವ ಉಮೇದಿನಲ್ಲಿದ್ದಾರೆ. ಪುಟ್ಟಣ್ಣ ಅವರನ್ನು ಮಣಿಸಲು ತೀವ್ರ ಕಸರತ್ತು ನಡೆಸುತ್ತಿದ್ದಾರೆ. ಜೆಡಿಎಸ್ ತೊರೆದು ಬಂದವರಿಗೆ ಟಿಕೆಟ್ ಕೊಟ್ಟು ಗೆಲ್ಲಿಸಿದ್ದರೂ, ಅವಧಿಗೆ ಮುನ್ನವೇ ಕೈಕೊಟ್ಟ ಪುಟ್ಟಣ್ಣನವರ ವಿರುದ್ಧ ಸೇಡು ತೀರಿಸಿಕೊಳ್ಳಲು ಬಿಜೆಪಿ ನಾಯಕರೂ ತಂತ್ರ ರೂಪಿಸಿದ್ದಾರೆ.

### ಶಿಕ್ಷಕರ ಹಿತಾಸಕ್ತಿಗಳೇ ಪ್ರಮುಖ ವಾಗ್ದಾನ

ಶಿಕ್ಷಕರು ಹಾಗೂ ಅನುದಾನಿತ ಶಾಲಾ ಕಾಲೇಜುಗಳ ನೌಕರರಿಗೆ ತ್ವರಿತವಾಗಿ 7ನೇ ವೇತನ ಆಯೋಗ ಜಾರಿ, 2006 ಏಪ್ರಿಲ್ ನಂತರ ನೇಮಕಾತಿಯಾದವರಿಗೆ ಹಳೇ ಪಿಂಚಣಿ ವ್ಯವಸ್ಥೆಯಲ್ಲೇ ಮುಂದುವರಿಸುವುದು, ಖಾಸಗಿ ಶಾಲಾ–ಕಾಲೇಜುಗಳ ಸಿಬ್ಬಂದಿಗೂ ಆರೋಗ್ಯ ವಿಮೆ ಜಾರಿ, 1995–2000ದ ಅವಧಿಯಲ್ಲಿ ಆರಂಭವಾದ ಕನ್ನಡ ಶಾಲೆಗಳಿಗೂ ವೇತನಾನುದಾನಕ್ಕೆ ಒಳಪಡಿಸಲು ಪ್ರಯತ್ನಿಸುವುದಾಗಿ ಕಾಂಗ್ರೆಸ್ ಅಭ್ಯರ್ಥಿ ವಾಗ್ದಾನ ಮಾಡಿದ್ದಾರೆ.

ಖಾಸಗಿ ಶಾಲಾ-ಕಾಲೇಜು ಶಿಕ್ಷಕರಿಗೂ ಆರೋಗ್ಯ ವಿಮೆ, ಬಡ್ತಿ ಶಿಕ್ಷಕರಿಗೆ ಇರುವ ವೇತನ ತಾರತಮ್ಯ ನಿವಾರಣೆ, ಎನ್‌ಪಿಎಸ್ ರದ್ದು, ಶಿಕ್ಷಕರ ಕಲ್ಯಾಣ ನಿಧಿಯ ಸದ್ಬಳಕೆ, ಎಲ್ಲ ನೌಕರ, ಸಿಬ್ಬಂದಿಗೂ ಜ್ಯೋತಿ ಸಂಜೀವಿನಿ ಜಾರಿ ಸೇರಿದಂತೆ ಹಲವು ಭರವಸೆಗಳನ್ನು ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ನೀಡಿದ್ದಾರೆ.

# 'ಮಾಧ್ಯಮ–ಜನಪ್ರತಿನಿಧಿಗಳು ಜತೆಯಾಗಿ ಸಾಗಲಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಾಧ್ಯಮಗಳಿಲ್ಲದೇ ಜನ ಪ್ರತಿನಿಧಿಗಳಿಲ್ಲ. ಜನಪ್ರತಿನಿಧಿಗಳಿಲ್ಲದೇ ಮಾಧ್ಯಮಗಳೂ ಇಲ್ಲ. ಸಮಾಜದ ಒಳಿತಿಗಾಗಿ ಇಬ್ಬರೂ ಜೊತೆಯಾಗೇ ಸಾಗಬೇಕು ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಪತ್ರಿಕೆ, ವಿದ್ಯುನ್ಮಾನ ಮಾಧ್ಯಮದ ವರದಿಗಾರರು, ಜನ ಪ್ರತಿನಿಧಿಗಳಿಗೆ ಶುಕ್ರವಾರ ಹಮ್ಮಿಕೊಂಡಿದ್ದ ತರಬೇತಿ ಶಿಬಿರದಲ್ಲಿ ಅವರು ಮಾತನಾಡಿದರು.

ಬಜೆಟ್ ಅಧಿವೇಶನದಲ್ಲಿ ಎಲ್ಲ ಶಾಸಕರು ಭಾಗವಹಿಸಬೇಕು. ಅನಗತ್ಯ ವಿಷಯಗಳ ಬಗ್ಗೆ ಮಾತನಾಡಿ ಕಲಾಪದ ಚರ್ಚೆಯನ್ನು ವ್ಯರ್ಥಗೊಳಿಸಬಾರದು. ಚರ್ಚೆಗಳು ಚಿಂತನೆಗೆ ಅವಕಾಶ ನೀಡಬೇಕು ಎಂದು ತಿಳಿಸಿದರು.

ಸಭಾಪತಿ ಬಸವರಾಜ ಹೊರಟ್ಟಿ ಅವರು, ಶಾಸಕರು ಸದನದಲ್ಲಿ ಭಾಗವಹಿಸುವುದಷ್ಟೇ ಅಲ್ಲ, ಒಂದು ಡೈರಿಯಲ್ಲಿ ನೋಟ್ ಮಾಡಿಕೊಳ್ಳಬೇಕು. ಹೇಗೆ ಪ್ರಶ್ನೆ ಕೇಳಬೇಕು? ಎಂದು ಹೇಳಿದರು.

ಸಚಿವ ಕೃಷ್ಣ ಬೈರೇಗೌಡ, ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್, ಎಡಿಟರ್ ಗಿಲ್ಡ್ ಅಧ್ಯಕ್ಷ ರವಿ ಹೆಗಡೆ, ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಇದ್ದರು.

### 'ಮಾಧ್ಯಮಕ್ಕೂ ಜವಾಬ್ದಾರಿ ಇರಲಿ'

ವಿಧಾನಸಭಾ ಅಧಿವೇಶನದಲ್ಲಿ ಜನಪ್ರತಿನಿಧಿಗಳಿಗಿರುವಷ್ಟೆ ಜವಾಬ್ದಾರಿ ಪತ್ರಿಕಾ ಮಾಧ್ಯಮದವರಿಗೂ ಇರುತ್ತದೆ ಎಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮ ನಿಯಮಿತದ ಅಧ್ಯಕ್ಷರಾದ ಅಪ್ಪಾಜಿ ಸಿ.ಎಸ್.ನಾಡಗೌಡ ತಿಳಿಸಿದರು.

ಅಧಿವೇಶನದಲ್ಲಿ ಅಭಿವೃದ್ಧಿಯ ಬಗ್ಗೆ ಹಾಗೂ ಸಾರ್ವಜನಿಕ ಮಹತ್ವದ ವಿಷಯಕ್ಕೆ ಪ್ರಾಮುಖ್ಯ ನೀಡಬೇಕು ಎಂದು ಸಲಹೆ ನೀಡಿದರು.

ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಅವರು, 'ಮಾಧ್ಯಮದವರು ವಸ್ತುಸ್ಥಿತಿಯನ್ನು ಅರಿತು ಸುದ್ದಿ ಮಾಡಬೇಕು. ಸರ್ಕಾರ ಬಿಚ್ಚಿಡುವ ಮಾಹಿತಿಗಿಂತ, ಮುಚ್ಚಿಟ್ಟಿದ್ದನ್ನು ಹುಡುಕಿ ವರದಿ ಮಾಡಬೇಕು' ಎಂದು ತಿಳಿಸಿದರು.

# ಕ್ಯಾನ್ಸರ್: 36 ಲಕ್ಷ ಸ್ತ್ರೀಯರ ತಪಾಸಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕ್ಯಾನ್ಸರ್ ಪತ್ತೆಗೆ ಸಂಬಂಧಿಸಿ ಆರು ತಿಂಗಳಲ್ಲಿ 36 ಲಕ್ಷಕ್ಕೂ ಅಧಿಕ ಮಹಿಳೆಯರಿಗೆ ತಪಾಸಣೆ ನಡೆಸಲಾಗಿದೆ. 2,023 ಮಹಿಳೆಯರಲ್ಲಿ ಕ್ಯಾನ್ಸರ್‌ನ ಪ್ರಾರಂಭಿಕ ಲಕ್ಷಣಗಳು ಪತ್ತೆಯಾಗಿವೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

'ಕಾನ್ಸರ್ ಕುರಿತು ನಿಗಾ ವಹಿಸಲು ಹಾಗೂ ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ, ಚಿಕಿತ್ಸೆಗೆ ಆದ್ಯತೆ ನೀಡಲು ಕ್ಯಾನ್ಸರ್ ಕೇರ್ ಟಾಸ್ಕ್‌ಫೋರ್ಸ್ ರಚಿಸಲಾಗಿದೆ. ಮಹಿಳೆಯರಲ್ಲಿ ಹೆಚ್ಚಾಗಿ ಗರ್ಭಕಂಠ ಮತ್ತು ಸ್ತನ ಕ್ಯಾನ್ಸರ್ ಪತ್ತೆಯಾಗುತ್ತಿದೆ. ತಪಾಸಣೆ ವೇಳೆ ಕಾನ್ಸರ್ ದೃಢಪಟ್ಟವರಲ್ಲಿ 532 ಮಹಿಳೆಯರು ಸರ್ಕಾರದ ನೆರವಿನಿಂದ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಹೇಳಿದ್ದಾರೆ.

'ಸ್ತನ ಕ್ಯಾನ್ಸರ್ ಸಂಬಂಧ19.34 ಲಕ್ಷ ಮಹಿಳೆಯರಿಗೆ ತಪಾಸಣೆ ನಡೆಸಲಾಗಿದೆ. 890 ಮಂದಿಯಲ್ಲಿ ಕ್ಯಾನ್ಸರ್‌ನ ಆರಂಭಿಕ ಲಕ್ಷಣಗಳು ದೃಢಪಟ್ಟಿವೆ. ಗರ್ಭಕಂಠ ಕ್ಯಾನ್ಸರ್‌ಗೆ ಸಂಬಂಧಿಸಿದಂತೆ 16.84 ಲಕ್ಷ ಮಹಿಳೆಯರಿಗೆ ತಪಾಸಣೆ ಮಾಡಿದ್ದು, 1,133 ಮಂದಿಯಲ್ಲಿ ಖಚಿತಪಟ್ಟಿದೆ' ಎಂದರು.

'ಪ್ರಾಥಮಿಕ ಹಂತದಲ್ಲೇ ಕಾನ್ಸರ್ ಪತ್ತೆಯಾದರೆ ಚಿಕಿತ್ಸೆ ಮೂಲಕ ರೋಗವನ್ನು ಗುಣಪಡಿಸಬಹುದಾಗಿದೆ. ಕಾನ್ಸರ್ ಲಕ್ಷಣ ಪತ್ತೆಯಾದವರಿಗೆ ಚಿಕಿತ್ಸೆಗೆ ಕ್ರಮವಹಿಸಲಾಗಿದೆ. ಕ್ಯಾನ್ಸರ್ ರೋಗಿಗಳ ಬೆನ್ನೆಲುಬಾಗಿ ಆರೋಗ್ಯ ಇಲಾಖೆ ನಿಂತಿದೆ' ಎಂದು ಹೇಳಿದ್ದಾರೆ.

ಮೆಟ್ರೊ: ಪ್ರಗತಿಯಲ್ಲಿ ಇಂಟರ್‌ಚೇಂಜ್ ಭೂಗತ ನಿಲ್ದಾಣ ಕಾಮಗಾರಿ

# ಕಾಮರಾಜ ರಸ್ತೆ: ಏಪ್ರಿಲ್‌ಗೆ ಭಾಗಶಃ ಮುಕ್ತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೆಟ್ರೊ ಕಾಮಗಾರಿಗಾಗಿ ಐದು ವರ್ಷಗಳಿಂದ ಮುಚ್ಚಲಾಗಿರುವ ಕಾಮರಾಜ ರಸ್ತೆಯು ಏಪ್ರಿಲ್‌ನಲ್ಲಿ ವಾಹನ ಸಂಚಾರಕ್ಕೆ ಭಾಗಶಃ ಮುಕ್ತಗೊಳ್ಳಲಿದೆ.

ನಾಗವಾರ–ಕಾಳೇನ ಅಗ್ರಹಾರ ಮೆಟ್ರೊ ಗುಲಾಬಿ ಮಾರ್ಗದಲ್ಲಿ ಕಾಮಗಾರಿ ನಡೆಯುತ್ತಿದೆ. ಕಾವೇರಿ ಎಂಪೋರಿಯಂ ಜಂಕ್ಷನ್‌ನಿಂದ ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ ಇಂಟರ್‌ಚೇಂಜ್ ಎಂ.ಜಿ. ರಸ್ತೆ ಮೆಟ್ರೊ ಭೂಗತ ನಿಲ್ದಾಣವನ್ನು ನಿರ್ಮಿಸಲು 2019ರಲ್ಲಿ ಕಾಮರಾಜ ರಸ್ತೆಯನ್ನು ಮುಚ್ಚಲಾಗಿತ್ತು. ಇದರಿಂದ ಬ್ರಿಗೇಡ್ ರಸ್ತೆ, ಕಮರ್ಷಿಯಲ್ ಸ್ಟ್ರೀಟ್ ಮತ್ತು ಇತರ ಸ್ಥಳಗಳನ್ನು ತಲುಪಲು ವಾಹನ ಬಳಕೆದಾರರು ಸುತ್ತು ಹಾಕಿಕೊಂಡು ಬರಬೇಕಿತ್ತು. ಕಾಮರಾಜ ರಸ್ತೆ ಸಂಚಾರಕ್ಕೆ ತೆರೆದುಕೊಂಡರೆ ಈ ಸಮಸ್ಯೆ ತಪ್ಪಲಿದೆ. ಈಗ ಏಪ್ರಿಲ್‌ನಲ್ಲಿ ಈ ರಸ್ತೆಯ ಒಂದು ಬದಿಯಿಂದ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲು ಬಿಎಂಆರ್‌ಸಿಎಲ್ ಚಿಂತನೆ ನಡೆಸಿದೆ.

ಸುರಂಗ ಮಾರ್ಗದ ಯಂತ್ರೋಪಕರಣಗಳ ಸಾಗಾಟಕ್ಕಾಗಿ ಇನ್ನೊಂದು ಬದಿಯ ರಸ್ತೆ ಅಗತ್ಯ ಇರುವುದರಿಂದ ಕಾಮರಾಜ ರಸ್ತೆ ಪೂರ್ಣವಾಗಿ ಮುಕ್ತವಾಗಲು ಮತ್ತಷ್ಟು ಸಮಯ ಬೇಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಭೂಗತ ನಿಲ್ದಾಣವು 4 ಪ್ರವೇಶ ಮತ್ತು ನಿರ್ಗಮನ ದ್ವಾರಗಳನ್ನು ಹೊಂದಿರುತ್ತದೆ. ಇದರಲ್ಲಿ ಒಂದು ಪ್ರವೇಶ/ನಿರ್ಗಮನ ದ್ವಾರವನ್ನು ಎಂ.ಜಿ. ರಸ್ತೆಯಲ್ಲಿರುವ ಎತ್ತರಿಸಿದ ನಿಲ್ದಾಣದೊಂದಿಗೆ ಸಂಪರ್ಕಿಸಲಾಗುತ್ತಿದೆ.

ಇದೇ ಮಾರ್ಗದಲ್ಲಿ ಜಯದೇವ ಆಸ್ಪತ್ರೆ ಬಳಿ 3 ಹಂತದ ರಸ್ತೆ ಮತ್ತು 2 ಹಂತಗಳ ಮೆಟ್ರೊ ರೈಲು ಮಾರ್ಗಗಳು, ಐದು ಹಂತದ ಎತ್ತರಿಸಿದ ನಿಲ್ದಾಣವನ್ನು ನಿರ್ಮಿಸಲಾಗಿದೆ. ಕಂಟೋನ್ಮೆಂಟ್ ರೈಲು ನಿಲ್ದಾಣದ ಬಳಿ ನೆಲದಡಿ ಮೆಟ್ರೊ ನಿಲ್ದಾಣವನ್ನು ನಿರ್ಮಿಸಲಾಗುತ್ತಿದ್ದು, ರೈಲು ನಿಲ್ದಾಣದೊಂದಿಗೆ ಪಾದಚಾರಿ ಮೇಲುಸೇತುವೆಯ ಮೂಲಕ ಸಂಪರ್ಕಿಸಲಾಗುತ್ತದೆ. ನಾಗವಾರದಲ್ಲಿ ಏರ್‌ಪೋರ್ಟ್ ಮೆಟ್ರೊ ಮಾರ್ಗದೊಂದಿಗೆ ಸಂಯೋಜನೆಗೊಳಿಸಲಾಗುತ್ತಿದೆ. 2025ರ ವೇಳೆಗೆ ಈ ಮಾರ್ಗ ಮೆಟ್ರೊ ಸಂಚಾರಕ್ಕೆ ತೆರೆದುಕೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

# ‘ಪಿಎಂ–ಗತಿಶಕ್ತಿ’ಯಡಿ ಮೆಟ್ರೊ 3ನೇ ಹಂತ ಶಿಫಾರಸು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೇಶದ ಐದು ಮೂಲಸೌಕರ್ಯ ಯೋಜನೆಗಳಿಗೆ ಪ್ರಧಾನಮಂತ್ರಿ ಗತಿಶಕ್ತಿ ಯೋಜನೆಯಡಿಯಲ್ಲಿ ಅನುಮೋದನೆ ನೀಡಲು ಶಿಫಾರಸು ಮಾಡಲಾಗಿದೆ. ಅದರಲ್ಲಿ ಬೆಂಗಳೂರಿನ ‘ನಮ್ಮ ಮೆಟ್ರೊ’ ಮೂರನೇ ಹಂತವೂ ಸೇರಿದೆ.

ಗೋವಾ, ಮೇಘಾಲಯ ಮತ್ತು ಅಸ್ಸಾಂನ ಹೆದ್ದಾರಿ ಯೋಜನೆಗಳು, ಬಿಹಾರದ ರೈಲ್-ಓವರ್-ರೈಲ್ ಬಲ್ಬ್ ಲೈನ್ ನಿರ್ಮಾಣ, ಬೆಂಗಳೂರು ಮತ್ತು ದೆಹಲಿ/ಎನ್‌ಸಿಆರ್‌ನಲ್ಲಿ ನಗರ ಮೆಟ್ರೊ ಸಾರಿಗೆ ಯೋಜನೆಗಳ ವಿವರಗಳನ್ನು ಪಿಎಂ ಗತಿಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್ (ಎನ್‌ಎಂಪಿ) ಮ್ಯಾಪಿಂಗ್ ಆಧರಿಸಿ ಪರಿಶೀಲಿಸಲಾಗಿದೆ. 65ನೇ ನೆಟ್‌ವರ್ಕ್ ಪ್ಲಾನಿಂಗ್ ಗ್ರೂಪ್ (ಎನ್‌ಪಿಜಿ) ಸಭೆಯಲ್ಲಿ ಮೌಲ್ಯಮಾಪನ ಮಾಡಲಾಗಿದೆ.



ಮೆಟ್ರೊ ರೈಲು (ಸಾಂದರ್ಭಿಕ ಚಿತ್ರ)

ಆನಂತರ ಅನುಮೋದನೆಗೆ ಶಿಫಾರಸು ಮಾಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

ಸರಕು ಸಾಗಾಟ ವೆಚ್ಚವನ್ನು ಕಡಿಮೆ ಮಾಡಲು ಸಮಗ್ರ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಯೋಜನೆಯನ್ನು ಎನ್‌ಪಿಜಿ ಪ್ರಾರಂಭಿಸಿದೆ. ₹ 500 ಕೋಟಿಗಿಂತ ಹೆಚ್ಚಿನ ಹೂಡಿಕೆಗಳನ್ನು ಹೊಂದಿರುವ ಯೋಜನೆಗಳಿಗೆ ಸಾರ್ವಜನಿಕ ಹೂಡಿಕೆ ಮಂಡಳಿ ಅಥವಾ ಹಣಕಾಸು ಸಚಿವಾಲಯದ ಅಡಿಯಲ್ಲಿ ವೆಚ್ಚ ಇಲಾಖೆಯಿಂದ ಅನುಮತಿ ನೀಡುವ ಮೊದಲು ಎನ್‌ಪಿಜಿಯ ಅನುಮೋದನೆ ಪಡೆಯಬೇಕಾಗುತ್ತದೆ ಎಂದು ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

**ಮೆಟ್ರೊ 3ನೇ ಹಂತ:** ಜೆ.ಪಿ. ನಗರ 4ನೇ ಹಂತದಿಂದ ಕೆಂಪಾಪುರದವರೆಗೆ, ಹೊಸಹಳ್ಳಿಯಿಂದ ಮಾಗಡಿ ರಸ್ತೆಯ ಕಡಬಗೆರೆವರೆಗೆ ಹಾಗೂ ಸರ್ಜಾಪುರದಿಂದ ಹೆಬ್ಬಾಳವರೆಗೆ ಮೂರು ಕಾರಿಡಾರ್‌ಗಳನ್ನು ‘ನಮ್ಮ ಮೆಟ್ರೊ’ ಮೂರನೇ ಹಂತ ಹೊಂದಿದೆ. ಒಟ್ಟು 81.15 ಕಿ.ಮೀ. ಉದ್ದದ ಈ ಮಾರ್ಗ ನಿರ್ಮಾಣ ಕಾರ್ಯ 2024ರ ಅಂತ್ಯದೊಳಗೆ ಆರಂಭಗೊಳ್ಳುವ ನಿರೀಕ್ಷೆ ಇದೆ

# ಬೈಯಪ್ಪನಹಳ್ಳಿ: ಮೇಲ್ಸೇತುವೆಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೈಯಪ್ಪನಹಳ್ಳಿಯಲ್ಲಿರುವ ರೈಲ್ವೆ ಟರ್ಮಿನಲ್‌ಗೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆ ನಿರ್ಮಿಸಲು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

ಟರ್ಮಿನಲ್ ಸುತ್ತಮುತ್ತ ವಾಹನ ದಟ್ಟಣೆಯನ್ನು ನಿಯಂತ್ರಿಸಲು, ಪ್ರಯಾಣಿಕರು ಸರಾಗವಾಗಿ ಸಂಚರಿಸಲು ಬಿಬಿಎಂಪಿ ವತಿಯಿಂದ ಮೇಲ್ಸೇತುವೆ ನಿರ್ಮಿಸಲು ಸರ್ಕಾರವು ₹263 ಕೋಟಿ ಅನುದಾನವನ್ನು ಒದಗಿಸಿತ್ತು. ಬಳಿಕ ಈ ಯೋಜನೆಯನ್ನು ಹೊಸ ವಿನ್ಯಾಸದ ಮಾದರಿಯಲ್ಲಿ (ಡಿಸೈನ್ ಬಿಲ್ಡ್ ಟ್ರಾನ್ಸ್‌ಫರ್ ಆ್ಯಂಡ್ ಲಂಪ್ಸಮ್– ಟರ್ನ್‌ಕೀ– ನೋ ವೇರಿಯೇಶನ್, ನೋ ಎಸ್ಕಲೇಶನ್ ಮಾದರಿ) ನಿರ್ಮಿಸಲು ವಿಸ್ತೃತ ಯೋಜನಾ ವರದಿ ತಯಾರಿಸಲಾಗಿದೆ.

ಯೋಜನೆಗೆ ಕಮ್ಮನಹಳ್ಳಿ ಮುಖ್ಯರಸ್ತೆ, ಮಾರುತಿ ಸೇವಾನಗರ, ಬೈಯಪ್ಪನಹಳ್ಳಿ ಮುಖ್ಯರಸ್ತೆ, ಬಾಣಸವಾಡಿ ಮುಖ್ಯರಸ್ತೆಗಳಲ್ಲಿ ಭೂ ಸ್ವಾಧೀನ ಮಾಡಬೇಕು. ಅದಕ್ಕಾಗಿ 2023–24ನೇ ಸಾಲಿನಲ್ಲಿ ಸರ್ಕಾರ ಒದಗಿಸಿದ ₹263 ಕೋಟಿಯಲ್ಲದೇ 2024–25ನೇ ಸಾಲಿನಲ್ಲಿ ₹117 ಕೋಟಿ ಒದಗಿಸಲು ಅನುಮೋದನೆ ನೀಡಿದೆ ಎಂದು ಹೇಳಿಕೆ ತಿಳಿಸಿದೆ.

# 17ಕ್ಕೆ ಆರ್‌ಪಿಐ ಸಮಾವೇಶ

**ಬೆಂಗಳೂರು:** ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್.ಪಿ.ಐ) ಇದೇ 17ರಂದು ಬೆಳಿಗ್ಗೆ 11.30ಕ್ಕೆ ಇಲ್ಲಿನ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಕಾರ್ಯಕರ್ತರ ರಾಜ್ಯಮಟ್ಟದ ಸಮಾವೇಶ ಏರ್ಪಡಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಆರ್.ಪಿ.ಐ ರಾಜ್ಯ ಪ್ರಧಾನ ಕಾರ್ಯದರ್ಶಿ ಎ. ಗೋಪಾಲ್, ‘ಈ ಸಮಾವೇಶವನ್ನು ಕೇಂದ್ರ ಸಚಿವ ಹಾಗೂ ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ರಾಂದಾಸ್ ಅಠವಳೆ ಉದ್ಘಾಟಿಸುತ್ತಾರೆ. ಎನ್‌ಡಿಎ ಮೈತ್ರಿ ಪಕ್ಷದ ಮುಖಂಡರನ್ನೂ ಈ ಸಮಾವೇಶಕ್ಕೆ ಆಹ್ವಾನಿಸಲಾಗುವುದು’ ಎಂದು ಅವರು ತಿಳಿಸಿದರು.

# ಟ್ರಿನಿಟಿ–ಎಂ.ಜಿ ರಸ್ತೆ ಮಧ್ಯೆ ನಾಳೆ ಭಾಗಶಃ ಮೆಟ್ರೊ ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಿರ್ವಹಣೆ ಕಾಮಗಾರಿ ಹಮ್ಮಿಕೊಳ್ಳಲು ಮೆಟ್ರೊ ನೇರಳೆ ಮಾರ್ಗದ ಟ್ರಿನಿಟಿ ನಿಲ್ದಾಣ ಮತ್ತು ಎಂ.ಜಿ. ರಸ್ತೆ ನಡುವೆ ಫೆ.11ರಂದು ಬೆಳಿಗ್ಗೆ 7ರಿಂದ ಬೆಳಿಗ್ಗೆ 9ರ ವರೆಗೆ ಮೆಟ್ರೊ ಸೇವೆ ಸ್ಥಗಿತಗೊಳ್ಳಲಿದೆ.

ಈ ಅವಧಿಯಲ್ಲಿ ರೈಲುಗಳು ಎಂ.ಜಿ. ರಸ್ತೆ – ಚಲ್ಲಘಟ್ಟ ಹಾಗೂ ಇಂದಿರಾನಗರ – ವೈಟ್‌ಫೀಲ್ಡ್ (ಕಾಡುಗೋಡಿ) ನಡುವೆ ಮಾತ್ರ ಎಂದಿನಂತೆ ರೈಲುಗಳು ಸಂಚರಿಸಲಿವೆ. ಹಸಿರು ಮಾರ್ಗದ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

## ನಿಮ್ಹಾನ್ಸ್‌ಗೆ ‘ನೆಲ್ಸನ್ ಮಂಡೇಲಾ ಪ್ರಶಸ್ತಿ’

**ಬೆಂಗಳೂರು:** ಆರೋಗ್ಯ ಜಾಗೃತಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ‘ನೆಲ್ಸನ್ ಮಂಡೇಲಾ ಪ್ರಶಸ್ತಿ’ಗೆ ಭಾಜನವಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯು 2019ರಿಂದ ಈ ಪ್ರಶಸ್ತಿ ನೀಡುತ್ತಿದೆ. ಮಾನಸಿಕ ಆರೋಗ್ಯ ಕ್ಷೇತ್ರಕ್ಕೆ ನಿಮ್ಹಾನ್ಸ್ ನೀಡಿದ ಕೊಡುಗೆಯನ್ನು ಪರಿಗಣಿಸಿ ಈ ಆಯ್ಕೆ ಮಾಡಲಾಗಿದೆ. ಸಂಸ್ಥೆಯು ರೋಗಿಗಳಿಗೆ ಚಿಕಿತ್ಸೆ ಒದಗಿಸುವ ಜತೆಗೆ ಸಂಶೋಧನೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿಯೂ ತೊಡಗಿಕೊಂಡಿದೆ.

‘ಪ್ರತಿಷ್ಠಿತ ಪ್ರಶಸ್ತಿ ಸ್ವೀಕರಿಸಲು ಹೆಮ್ಮೆಪಡುತ್ತೇವೆ. ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮವನ್ನು ಉತ್ತೇಜಿಸುವ ನಮ್ಮ ಧ್ಯೇಯವನ್ನು ಮುಂದುವರಿಸುತ್ತೇವೆ’ ಎಂದು ಸಂಸ್ಥೆ ನಿರ್ದೇಶಕಿ ಡಾ. ಪ್ರತಿಮಾಮೂರ್ತಿ ಸಂತಸ ವ್ಯಕ್ತಪಡಿಸಿದ್ದಾರೆ.

ಶನಿವಾರ • ಫೆಬ್ರುವರಿ 10, 2024 ಪ್ರಜಾವಾಣಿ

ಕೆಡಬ್ಲ್ಯುಎಫ್ ಬ್ಯಾಂಕ್ ₹4,561 ಕೋಟಿ ಸಾಲ • 2027ಕ್ಕೆ ಬಳಕೆಗೆ ಲಭ್ಯ

# ಉಪನಗರ ರೈಲು: ಸಾಲ ಒಪ್ಪಂದಕ್ಕೆ ಸಹಿ

ಪ್ರಜಾವಾಣಿ ವಾರ್ತೆ

**ಉಪನಗರ ರೈಲು ಯೋಜನೆಯ ನಾಲ್ಕು ಕಾರಿಡಾರ್‌ಗಳು**

| ಕಾರಿಡಾರ್ 1 | ಕಾರಿಡಾರ್ 2 | ಕಾರಿಡಾರ್ 3 | ಕಾರಿಡಾರ್ 4 |
|---|---|---|---|
| ಬೆಂಗಳೂರು - ದೇವನಹಳ್ಳಿ | ಚಿಕ್ಕಬಾಣಾವರ - ಬೆನ್ನಿಗಾನಹಳ್ಳಿ | ಕೆಂಗೇರಿ - ವೈಟ್ ಫೀಲ್ಡ್ | ಹೀಳಲಿಗೆ - ರಾಜಾನುಕುಂಟೆ |
| 41.4 ಕಿ.ಮೀ. | 25.2 ಕಿ.ಮೀ. | 35.52 ಕಿ.ಮೀ. | 46.24 ಕಿ.ಮೀ. |

**ಬೆಂಗಳೂರು:** ರಾಜಧಾನಿಯ ಸುತ್ತಮುತ್ತಲಿನಲ್ಲಿ 148 ಕಿ.ಮೀ. ಉದ್ದದ ಮಾರ್ಗದಲ್ಲಿ ಉಪನಗರ ರೈಲು ಯೋಜನೆ ಅನುಷ್ಠಾನಕ್ಕೆ ಜರ್ಮನಿಯ ಲಕ್ಸಂಬರ್ಗ್‌ನ ಕೆಡಬ್ಲ್ಯುಎಫ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಪಡೆಯುವ ₹ 4,561 ಕೋಟಿ ಸಾಲದ ಮೇಲಿನ ಷರತ್ತುಗಳುಳ್ಳ ಒಪ್ಪಂದಕ್ಕೆ ರಾಜ್ಯ ಸರ್ಕಾರಿ ಸ್ವಾಮ್ಯದ ಕೆ-ರೈಡ್ ಸಂಸ್ಥೆಯು ಶುಕ್ರವಾರ ಸಹಿ ಹಾಕಿತು.

₹15,767 ಕೋಟಿ ವೆಚ್ಚದಲ್ಲಿ ಉಪನಗರ ರೈಲು ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇಕಡ 20ರಷ್ಟು ವೆಚ್ಚ ಭರಿಸಲಿವೆ. ₹ 4,561 ಕೋಟಿ ಸಾಲ ಪಡೆಯುವ ಒಪ್ಪಂದಕ್ಕೆ ಕೇಂದ್ರ ಸರ್ಕಾರ ಮತ್ತು ಕೆಡಬ್ಲ್ಯುಎಫ್ ಬ್ಯಾಂಕ್ 2023ರ ಡಿಸೆಂಬರ್‌ನಲ್ಲಿ ಸಹಿ ಮಾಡಿದ್ದವು.

ಸಾಲ ಮಂಜೂರಾತಿಯ ಷರತ್ತುಗಳನ್ನು ಒಳಗೊಂಡ ಒಪ್ಪಂದಗಳಿಗೆ ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಳಾ ಮತ್ತು ಕೆಡಬ್ಲ್ಯುಎಫ್ ಬ್ಯಾಂಕ್‌ನ ಭಾರತ ಘಟಕದ ಮುಖ್ಯಸ್ಥ ವೂಲ್ಫ್ ಮತ್ ಸಹಿ ಮಾಡಿದರು. ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಮತ್ತು ಬೆಂಗಳೂರಿನಲ್ಲಿ ಜರ್ಮನಿಯ ಕಾನ್ಸುಲ್ ಜನರಲ್ ಅಕಿಂ ಬರ್ಕಾರ್ಟ್ ಉಪಸ್ಥಿತಿಯಲ್ಲಿ ಒಪ್ಪಂದ ಪತ್ರದ ವಿನಿಮಯ ನಡೆಯಿತು.




ವಿಧಾನಸೌಧದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಳಾ ಮತ್ತು ಜರ್ಮನಿಯ ಕೆಡಬ್ಲ್ಯುಎಫ್ ಬ್ಯಾಂಕ್‌ನ ಭಾರತ ಘಟಕದ ಮುಖ್ಯಸ್ಥ ವೂಲ್ಫ್ ಮತ್ ಅವರು ಬೆಂಗಳೂರು ಉಪನಗರ ರೈಲು ಯೋಜನೆಯ ಸಾಲ ಒಪ್ಪಂದ ಪತ್ರಗಳನ್ನು ಪ್ರದರ್ಶಿಸಿದರು. ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ, ಬೆಂಗಳೂರಿನಲ್ಲಿ ಜರ್ಮನಿಯ ಕಾನ್ಸುಲ್ ಜನರಲ್ ಅಕಿಂ ಬರ್ಕಾರ್ಟ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಒಪ್ಪಂದದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರು, 'ಉಪನಗರ ರೈಲು ಯೋಜನೆ ಅನುಷ್ಠಾನಕ್ಕೆ ಕೆಡಬ್ಲ್ಯುಎಫ್ ವಾರ್ಷಿಕ ಶೇ 4ರ ಬಡ್ಡಿ ದರದಲ್ಲಿ ಸಾಲ ನೀಡುತ್ತಿದೆ. 20 ವರ್ಷಗಳ ಸಾಲ ಮರುಪಾವತಿ ಅವಧಿ ಇದೆ' ಎಂದರು.

ಕೆಂಗೇರಿ-ವೈಟ್‌ಫೀಲ್ಡ್ ಮಧ್ಯದ ಕಾರಿಡಾರ್-3ರ ಅಡಿ ಬರುವ ನಿಲ್ದಾಣ ಕಾಮಗಾರಿ, ವಯಾಡಕ್ಟ್, ಹೀಳಲಿಗೆ-ರಾಜಾನುಕುಂಟೆ ಮಧ್ಯದ ಕಾರಿಡಾರ್-4ರ ವ್ಯಾಪ್ತಿಯಲ್ಲಿ ಬರುವ ದೇವನಹಳ್ಳಿಯಲ್ಲಿನ ಡಿಪೋ-1, ಸಿಗ್ನಲ್ ಮತ್ತು ಟೆಲಿಕಾಂ, ಪ್ಲಾಟ್ ಫಾರ್ಮ್ ಸ್ಕ್ರೀನ್ ಡೋರ್, ಸ್ವಯಂಚಾಲಿತ ಪ್ರಯಾಣ ದರ ವಸೂಲಿ ವ್ಯವಸ್ಥೆ, ಸೌರ ವಿದ್ಯುತ್ ಫಲಕ, ಭದ್ರತಾ ಸಾಧನಗಳು ಮತ್ತು ಮ್ಯಾನ್ ಮಶೀನ್ ಇಂಟರ್‌ಫೇಸ್ (ಎಂಎಂಐ) ಕಾಮಗಾರಿಗಳಿಗೆ ಸಾಲದ ಮೊತ್ತವನ್ನು ಬಳಸಲಾಗುವುದು ಎಂದು ವಿವರಿಸಿದರು.

**2027ರ ಅಂತ್ಯಕ್ಕೆ ಪೂರ್ಣ:** ಒಟ್ಟು ನಾಲ್ಕು ಕಾರಿಡಾರ್‌ಗಳಲ್ಲಿ 148 ಕಿ.ಮೀ. ಉದ್ದದ ಉಪನಗರ ರೈಲ್ವೆ ಸಂಪರ್ಕ ಜಾಲವನ್ನು ನಿರ್ಮಿಸಲಾಗುತ್ತಿದೆ. ಕಾರಿಡಾರ್ ಎರಡು ಮತ್ತು ನಾಲ್ಕರ ಕಾಮಗಾರಿಗಳು ಬೇಗ ಪೂರ್ಣಗೊಳ್ಳಲಿವೆ. ಒಂದು ಮತ್ತು ಮೂರನೇ ಕಾರಿಡಾರ್‌ಗಳ ಕಾಮಗಾರಿಗಳಿಗೆ ಶೀಘ್ರದಲ್ಲಿ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗುವುದು. 2027ರ ಡಿಸೆಂಬರ್ ಅಂತ್ಯಕ್ಕೆ ಯೋಜನೆ ಪೂರ್ಣಗೊಳ್ಳಲಿದೆ ಎಂದು ಪಾಟೀಲ ಹೇಳಿದರು.

ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಹಣಕಾಸು ಇಲಾಖೆ ಕಾರ್ಯದರ್ಶಿ ಆರ್. ವಿಶಾಲ್, ಕೆಎಫ್‌ಡಬ್ಲ್ಯುನ ನಗರ ಮತ್ತು ಸಂಚಾರ ವಿಭಾಗದ ಹಿರಿಯ ತಜ್ಞೆ ಸ್ವಾತಿ ಖನ್ನಾ ಹಾಗೂ ಬೆಂಗಳೂರಿನಲ್ಲಿ ಜರ್ಮನಿ ಕಾನ್ಸುಲೇಟ್‌ನ ಸಲಹೆಗಾರ್ತಿ ಕಾಂಚಿ ಅರೋರ ಉಪಸ್ಥಿತರಿದ್ದರು.

### 'ಇನ್ನಷ್ಟು ನಗರಗಳಿಗೆ ವಿಸ್ತರಿಸಲು ಪ್ರಸ್ತಾವ'

'ಮೈಸೂರು, ತುಮಕೂರು ಸೇರಿದಂತೆ ಇತರ ನಗರಗಳಿಗೂ ಉಪನಗರ ರೈಲು ಯೋಜನೆಯನ್ನು ವಿಸ್ತರಿಸುವ ಪ್ರಸ್ತಾವವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ತಾಂತ್ರಿಕವಾಗಿ ಕೆಲವು ತೊಡಕುಗಳಿವೆ. ಅವುಗಳನ್ನು ನಿವಾರಿಸಿದ ನಂತರ ನಿರ್ಧಾರಕ್ಕೆ ಬರಲಾಗುವುದು' ಎಂದು ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

### 'ಪ್ರತಿ 90 ಸೆಕೆಂಡ್‌ಗೆ ಒಂದು ರೈಲು'

'ಉಪನಗರ ರೈಲು ಮಾರ್ಗದಲ್ಲಿ ಪ್ರತಿ 90 ಸೆಕೆಂಡ್‌ಗೆ ಒಂದು ರೈಲು ಸಂಚರಿಸುವಂತೆ ಯೋಜನೆ ರೂಪಿಸಲಾಗಿದೆ. ಜನದಟ್ಟಣೆಯ ಆಧಾರದಲ್ಲಿ ರೈಲುಗಳ ಸಂಚಾರದ ಅವಧಿಯನ್ನು ನಿರ್ಧರಿಸಲಾಗುವುದು' ಎಂದು ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಳಾ ತಿಳಿಸಿದರು.

## ಸುದ್ದಿ 2 ನಿಮಿಷ

### ಎನ್‌ಐಎ ಎಸ್ಪಿಯಾಗಿ ರಾಹುಲ್‌ಕುಮಾರ್ ನಿಯೋಜನೆ

**ಬೆಂಗಳೂರು:** ನಗರದ ದಕ್ಷಿಣ ವಿಭಾಗದ ಡಿಸಿಪಿ ಆಗಿರುವ ರಾಹುಲ್ ಕುಮಾರ್ ಶಹಪುರವಾಡ್ ಅವರನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಎಸ್ಪಿಯಾಗಿ ನಿಯೋಜಿಸಲಾಗಿದೆ.

ಈ ಬಗ್ಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಶುಕ್ರವಾರ ಆದೇಶ ಪತ್ರ ಕಳುಹಿಸಿರುವ ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿ ಸಂಜೀವ್‌ಕುಮಾರ್, 'ಮುಂದಿನ ಐದು ವರ್ಷಗಳ ಅವಧಿಗೆ ನಿಯೋಜನೆ ಆಧಾರದಲ್ಲಿ ರಾಹುಲ್ ಕುಮಾರ್ ಶಹಪುರವಾಡ್ ಅವರನ್ನು ಎನ್‌ಐಎ ಎಸ್ಪಿಯಾಗಿ ನಿಯೋಜಿಸಲಾಗಿದೆ' ಎಂದಿದ್ದಾರೆ.



'ರಾಹುಲ್‌ಕುಮಾರ್ ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡಬೇಕು. ಅವರು ತುರ್ತಾಗಿ ಹೊಸ ಹುದ್ದೆಯ ಅಧಿಕಾರ ಸ್ವೀಕರಿಸಬೇಕು' ಎಂದೂ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಮಹಾರಾಷ್ಟ್ರದ ರಾಹುಲ್‌ಕುಮಾರ್, ಎಂಬಿಎ ಪದವೀಧರ. 2012ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಇವರು, ಬಂಟ್ವಾಳದ ಎಎಸ್ಪಿ ಆಗಿ ವೃತ್ತಿ ಆರಂಭಿಸಿದ್ದರು. ಹಾಸನ, ತುಮಕೂರು ಎಸ್ಪಿಯಾಗಿ ಕೆಲಸ ಮಾಡಿದ್ದರು. ಕೆಲ ತಿಂಗಳಿನಿಂದ ಬೆಂಗಳೂರು ದಕ್ಷಿಣ ವಿಭಾಗದ ಡಿಸಿಪಿ ಆಗಿ ಕಾರ್ಯನಿರ್ವಹಿಸುತ್ತಿದ್ದರು.

### ಮಾದಕವಸ್ತು ನಿಯಂತ್ರಣಕ್ಕೆ ಮುಖ್ಯಮಂತ್ರಿ ಸೂಚನೆ

**ಬೆಂಗಳೂರು:** ಶಿಕ್ಷಣ ಸಂಸ್ಥೆಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗಾಂಜಾ ಸೇರಿದಂತೆ ಮಾದಕವಸ್ತುಗಳ ಮಾರಾಟ, ಸೇವನೆಯನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳ ಸುತ್ತಮುತ್ತ ಮಾದಕವಸ್ತು ಹಾವಳಿ ವ್ಯಾಪಕವಾಗಿರುವ ಕುರಿತು ಮುಖ್ಯಮಂತ್ರಿಗೆ ಪತ್ರ ಬರೆದಿದ್ದ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದರು. ಅವರ ಪತ್ರವನ್ನು ಆಧರಿಸಿ ಮುಖ್ಯಮಂತ್ರಿಯವರು ಕ್ರಮಕ್ಕೆ ಸೂಚಿಸಿದ್ದಾರೆ.

'ರಾಜ್ಯದಲ್ಲಿ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ಮಾದಕವಸ್ತು ಮಾರಾಟ ಜಾಲ ಸಕ್ರಿಯವಾಗಿದೆ. ಅದನ್ನು ನಿಯಂತ್ರಿಸದಿದ್ದರೆ ಯುವಜನರು ಮಾದಕವಸ್ತುಗಳ ಜಾಲಕ್ಕೆ ಸಿಲುಕಿ ಅಪಾಯಕ್ಕೆ ಸಿಲುಕುತ್ತಾರೆ. ಆದ್ದರಿಂದ ಜಿಲ್ಲಾ ಮಟ್ಟದಲ್ಲಿ ವಿಶೇಷ ತನಿಖಾ ದಳ ರಚಿಸುವುದೂ ಸೇರಿದಂತೆ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಮುಖ್ಯಮಂತ್ರಿಯವರಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದರು. ಗೃಹ ಸಚಿವ ಜಿ. ಪರಮೇಶ್ವರ ಅವರಿಗೂ ಪತ್ರ ಬರೆದಿದ್ದರು.

## ಪತ್ನಿ ಕೊಂದು ಆತ್ಮಹತ್ಯೆ ನಾಟಕವಾಡಿದ್ದ ಪತಿ

ಪ್ರಜಾವಾಣಿ ವಾರ್ತೆ



ಪ್ರೇಮಲತಾ



ಶಿವಶಂಕರ್



ವಿನಯ್

**ಬೆಂಗಳೂರು:** ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದ ಪ್ರೇಮಲತಾ (35) ಸಾವಿನ ರಹಸ್ಯ ಭೇದಿಸಿರುವ ಪೊಲೀಸರು, ಕೊಲೆ ಆರೋಪದಡಿ ಪತಿ ಶಿವಶಂಕರ್ ಹಾಗೂ ಆತನ ಸ್ನೇಹಿತ ವಿನಯ್‌ನನ್ನು ಬಂಧಿಸಿದ್ದಾರೆ.

'ಶ್ರೀಕಂಠೇಶ್ವರ ನಗರದ ನಿವಾಸಿ ಪ್ರೇಮಲತಾ ಅವರ ಮೃತದೇಹ ಮನೆಯ ಕಿಟಕಿಗೆ ನೇಣು ಬಿಗಿದಿದ್ದ ಸ್ಥಿತಿಯಲ್ಲಿ ಫೆ. 5ರಂದು ಪತ್ತೆಯಾಗಿತ್ತು. ಪತ್ನಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪತಿ ಶಿವಶಂಕರ್ ನಾಟಕವಾಡಿದ್ದ. ಮೃತದೇಹ ಸಿಕ್ಕ ಸ್ಥಿತಿ ಬಗ್ಗೆ ಅನುಮಾನ ಇತ್ತು. ತನಿಖೆಯಿಂದ ಶಿವಶಂಕರ್ ಹಾಗೂ ಸ್ನೇಹಿತ ವಿನಯ್ ಸಿಕ್ಕಿಬಿದ್ದಿದ್ದಾರೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಇಬ್ಬರೂ ಸೇರಿ ಪ್ರೇಮಲತಾ ಅವರನ್ನು ಕೊಂದಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ. ಕೊಲೆ ಆರೋಪದಡಿ ಶಿವಶಂಕರ್ ಹಾಗೂ ವಿನಯ್‌ನನ್ನು ಬಂಧಿಸಲಾಗಿದೆ. ಇಬ್ಬರನ್ನೂ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

**ಶೀಲ ಶಂಕೆ, ಪತ್ನಿ ಸಾಯಿಸಲು ವಾಮಾಚಾರ:** 'ಪ್ರೇಮಲತಾ ಬಟ್ಟೆ ವ್ಯಾಪಾರ ಮಾಡುತ್ತಿದ್ದರು. ಶಿವಶಂಕರ್ ಬ್ಯಾಂಕ್‌ವೊಂದರಲ್ಲಿಗುತ್ತಿಗೆಆಧಾರದಲ್ಲಿ ಕೆಲಸ ಮಾಡಿಕೊಂಡಿದ್ದ. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಪ್ರೇಮಲತಾ ಪರ ಪುರುಷನ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿರುವುದಾಗಿ ಶಿವಶಂಕರ್‌ಗೆ ಅನುಮಾನ ಬಂದಿತ್ತು. ಇದೇ ವಿಚಾರವಾಗಿ ಪದೇ ಪದೇ ಜಗಳವಾಗುತ್ತಿತ್ತು' ಎಂದು ಪೊಲೀಸರು ಹೇಳಿದರು.

'ಪತಿ ಮಾತಿಗೆ ಪ್ರೇಮಲತಾ ಕಿವಿಗೊಡುತ್ತಿರಲಿಲ್ಲ. ಪತ್ನಿಯನ್ನು ಸಾಯಿಸಲು ಯೋಚಿಸಿದ್ದ ಆರೋಪಿ ಶಿವಶಂಕರ್, ವಾಮಾಚಾರ ಮಾಡಿಸಿದ್ದ. ಆದರೆ, ಪ್ರೇಮಲತಾ ಮೇಲೆ ಯಾವುದೇ ಪರಿಣಾಮ ಬೀರಿರಲಿಲ್ಲ. ಪತ್ನಿ ಮೇಲೆ ಮತ್ತಷ್ಟು ಅನುಮಾನಗೊಂಡಿದ್ದ ಶಿವಶಂಕರ್, ಮನೆಗೆ ಯಾರೆಲ್ಲ ಬಂದು ಹೋಗುತ್ತಾರೆಂದು ತಿಳಿಯಲು ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಿದ್ದ. ಮೊಬೈಲ್‌ನಲ್ಲಿಯೇ ದೃಶ್ಯಗಳನ್ನು ವೀಕ್ಷಿಸುತ್ತಿದ್ದ' ಎಂದು ಹೇಳಿದರು.

**ಸ್ನೇಹಿತನಿಗೆ ₹3 ಲಕ್ಷ ಸುಪಾರಿ:** 'ಆರೋಪಿ ವಿನಯ್, ಹುಣಸಮಾರನಹಳ್ಳಿ ನಿವಾಸಿ. ಈತ, ಐದು ವರ್ಷಗಳ ಹಿಂದೆ ಶಿವಶಂಕರ್‌ಗೆ ಪರಿಚಯಗೊಂಡಿದ್ದ. ತನ್ನ ಪತ್ನಿಯ ಸಾವಿನ ಪ್ರಕರಣದಲ್ಲಿ ಜೈಲಿಗೆ ಹೋಗಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ವಿನಯ್‌ನ ಅಪರಾಧ ಹಿನ್ನೆಲೆ ಶಿವಶಂಕರ್‌ಗೆ ಗೊತ್ತಿತ್ತು. ವಿನಯ್ ಸಹ ತನ್ನ ಪತ್ನಿಯನ್ನು ಸಾಯಿಸಿದ್ದು ಹೇಗೆ ಎಂಬುದನ್ನು ಬಿಡಿಸಿ ಹೇಳಿದ್ದ' ಎಂದು ತಿಳಿಸಿದರು.

'ಪ್ರೇಮಲತಾ ಅವರನ್ನು ಕೊಲೆ ಮಾಡುವಂತೆ ವಿನಯ್‌ಗೆ ಹೇಳಿದ್ದ ಶಿವಶಂಕರ್, ₹3 ಲಕ್ಷ ಸುಪಾರಿ ನೀಡುವುದಾಗಿ ತಿಳಿಸಿ ಮುಂಗಡವಾಗಿ ₹40 ಸಾವಿರ ಕೊಟ್ಟಿದ್ದ' ಎಂದು ಹೇಳಿದರು.

**ಕತ್ತು ಹಿಸುಕಿ ಕೊಲೆ:** 'ಸೋಮವಾರ (ಫೆ. 5) ಬೆಳಿಗ್ಗೆ ಮಕ್ಕಳು ಶಾಲೆಗೆ ಹೋಗಿದ್ದರು. ಮನೆಯಲ್ಲಿದ್ದ ಶಿವಶಂಕರ್, ಸಿ.ಸಿ. ಟಿ.ವಿ ಕ್ಯಾಮೆರಾ ಆಫ್ ಮಾಡಿದ್ದ. ಮನೆಗೆ ಬಂದ ವಿನಯ್, ಪ್ರೇಮಲತಾ ಅವರ ಕತ್ತು ಹಿಸುಕಿ ಕೊಂದಿದ್ದ. ನಂತರ ಇಬ್ಬರೂ ಸೇರಿ ಮೃತದೇಹವನ್ನು ಮನೆಯ ಕಿಟಕಿಗೆ ನೇಣುಹಾಕಿ, ಸ್ಥಳದಿಂದ ಪರಾರಿಯಾಗಿದ್ದರು' ಎಂದರು.

'ಶಾಲೆ ಮುಗಿದ ಮೇಲೆ ಮಕ್ಕಳು ಸಂಜೆ ಮನೆಗೆ ಬಂದಾಗ ಮೃತದೇಹ ನೋಡಿ ಸ್ಥಳೀಯರಿಗೆ ಹೇಳಿದ್ದರು. ಅದೇ ಸಮಯಕ್ಕೆ ಶಿವಶಂಕರ್ ಮನೆಗೆ ವಾಪಸು ಬಂದಿದ್ದ. ತನ್ನ ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಸ್ಥಳೀಯರ ಎದುರು ಗೋಳಾಡಿ ಅತ್ತಿದ್ದ. ಸ್ಥಳಕ್ಕೆ ಬಂದ ಪೊಲೀಸರ ಎದುರು ಆತ್ಮಹತ್ಯೆ ನಾಟಕವಾಡಿದ್ದ. ಕಿಟಕಿ ಎತ್ತರ ಕಡಿಮೆ ಇದೆ. ಇಂಥ ಕಿಟಕಿಗೆ ನೇಣು ಹಾಕಿಕೊಳ್ಳುವುದು ಅಸಾಧ್ಯವೆಂಬುದು ಮೇಲ್ನೋಟಕ್ಕೆ ಗೊತ್ತಾಗಿತ್ತು. ಮೃತದೇಹವನ್ನು ಗಮನಿಸಿದಾಗ, ಯಾರೋ ಕೊಲೆ ಮಾಡಿದ್ದಾರೆಂಬ ಅನುಮಾನ ಬಂದಿತ್ತು. ತಾಂತ್ರಿಕ ಪುರಾವೆಗಳನ್ನು ಆಧರಿಸಿ ಶಿವಶಂಕರ್‌ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಸತ್ಯಾಂಶ ತಿಳಿಯಿತು' ಎಂದಿದ್ದಾರೆ ಪೊಲೀಸರು.

## 'ಕಾಂಗ್ರೆಸ್'ನಲ್ಲಿ ಹೆಚ್ಚಿದ ಲಾಬಿ

ಬಿ.ಎಲ್. ಶಂಕರ್, ಎಂ.ಸಿ. ವೇಣುಗೋಪಾಲ್ ಹೆಸರುಗಳು ಮುಂಚೂಣಿಯಲ್ಲಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ರಾಜ್ಯಸಭಾ ಟಿಕೆಟ್‌ಗಾಗಿ ಕಾಂಗ್ರೆಸ್‌ನಲ್ಲಿ ಲಾಬಿ ಜೋರಾಗಿದ್ದು, ಹೈಕಮಾಂಡ್‌ಗೆ ತಲೆನೋವಾಗಿದೆ.

ವಿಧಾನಸಭೆಯ ಸದಸ್ಯರ ಬಲಾಬಲದ ಆಧಾರದಲ್ಲಿ ಕಾಂಗ್ರೆಸ್ ರಾಜ್ಯದಲ್ಲಿ 3 ಸ್ಥಾನಗಳನ್ನು ಗೆಲ್ಲಲು ಸಾಧ್ಯವಿದೆ. ಈ ಪೈಕಿ, ಮೊದಲ ಅಭ್ಯರ್ಥಿ ಹೈಕಮಾಂಡ್‌ನ 'ಅಚ್ಚರಿ'ಯ ಆಯ್ಕೆಯಾಗಲಿದ್ದಾರೆ. ಕಾಂಗ್ರೆಸ್‌ನ ಹಿರಿಯ ಮುಖಂಡ ಅಭಿಷೇಕ್‌ಮನುಸಿಂಘ್ವಿಹಾಗೂಆರ್‌ಬಿಐ ಮಾಜಿ ಗವರ್ನರ್ ರಘುರಾಮ್ ರಾಜನ್ ಅವರ ಹೆಸರು ಮುಂಚೂಣಿಯಲ್ಲಿದೆ. ರಾಜನ್ ವಿದೇಶ ಪ್ರವಾಸದಲ್ಲಿದ್ದು, ಅವರು ಭಾರತಕ್ಕೆ ಮರಳುವುದು ಫೆ.15ರಂದು. ನಾಮಪತ್ರ ಸಲ್ಲಿಕೆಗೆ ಅಂದೇ ಕಡೆಯ ದಿನಾಂಕ.

ಬೆಂಗಳೂರಿನಲ್ಲಿ ಸಭೆ ಸೇರಿದ್ದ ದಲಿತ ಸಮುದಾಯದ ಸಚಿವರು ರಾಜ್ಯಸಭಾ ಚುನಾವಣೆ ಕುರಿತು ಚರ್ಚಿಸಿದ್ದರು. 'ಒಕ್ಕಲಿಗ ಕೋಟಾದಲ್ಲಿ ಬಿ.ಎಲ್.ಶಂಕರ್, ಹಿಂದುಳಿದಸಮುದಾಯದಕೋಟಾದಲ್ಲಿ ಸವಿತಾ ಸಮುದಾಯದ ಮುಖಂಡ ಎಂ.ಸಿ.ವೇಣುಗೋಪಾಲ್ ಅವರಿಗೆ ಟಿಕೆಟ್ ನೀಡಬೇಕೆಂದು ಹೈಕಮಾಂಡ್‌ಗೆ ಒತ್ತಡ ಹೇರಲು ಸಭೆಯಲ್ಲಿ ನಿರ್ಧರಿಸಲಾಯಿತು' ಎಂದು ಹಿರಿಯ ನಾಯಕರೊಬ್ಬರು ತಿಳಿಸಿದರು.

ಎಂ.ಸಿ.ವೇಣುಗೋಪಾಲ್ ಅವರು ಗೃಹ ಸಚಿವ ಜಿ.ಪರಮೇಶ್ವರ ಅವರ ಆಪ್ತರು. ಲಿಂಗಾಯತ ಸಮುದಾಯದ ಕೋಟಾದಲ್ಲಿ ತಮ್ಮನ್ನು ಕಣಕ್ಕೆ ಇಳಿಸಬೇಕು ಎಂದು ಆಳಂದ ಶಾಸಕ ಬಿ.ಆರ್. ಪಾಟೀಲ ಅವರು ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ.

ಮುಸ್ಲಿಂ ಸಮುದಾಯದಿಂದ ಯುವ ಮುಖಂಡ ಮನ್ಸೂರ್ ಅಲಿ ಖಾನ್ ಅವರಿಗೆ ಈ ಸಲ ಅವಕಾಶ ನೀಡಬೇಕು ಎಂದು ಸಮುದಾಯದ ಮುಖಂಡರ ನಿಯೋಗವೊಂದು ಹೈಕಮಾಂಡ್‌ಗೆ ಒತ್ತಡ ಹೇರಿದೆ. ರಾಜ್ಯಸಭಾ ಸದಸ್ಯರಾಗಿರುವ ಸಯ್ಯದ್ ನಾಸಿರ್ ಹುಸೇನ್ ಅವರು ಸಿಡಬ್ಲ್ಯುಸಿ ಸದಸ್ಯರಾಗಿದ್ದಾರೆ. ಹೀಗಾಗಿ, ಅವರ ಬದಲು ಮನ್ಸೂರ್ ಅವರಿಗೆಅವಕಾಶನೀಡಬೇಕು.ಇದರಿಂದ ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಅನುಕೂಲವಾಗಲಿದೆ ಎಂದೂ ನಿಯೋಗವು ಹೈಕಮಾಂಡ್‌ಗೆ ಮನವರಿಕೆ ಮಾಡಿದೆ ಎಂದು ಮೂಲಗಳು ಹೇಳಿವೆ.

### ಬೆಂಗಳೂರಿನ ಮೇಲೆ 3 ಸಚಿವರ ಕಣ್ಣು

**ನವದೆಹಲಿ:** ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರಿನ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ವಿದೇಶಾಂಗ ಸಚಿವ ಜೈಶಂಕರ್ ಹಾಗೂ ಐಟಿ ಸಚಿವ ರಾಜೀವ್ ಚಂದ್ರಶೇಖರ್ ಒಲವು ತೋರಿದ್ದಾರೆ.

ನಿರ್ಮಲಾ ಸೀತಾರಾಮನ್ ಹಾಗೂ ಜೈಶಂಕರ್ ಅವರು ಬೆಂಗಳೂರು ದಕ್ಷಿಣ ಕ್ಷೇತ್ರದ ಮೇಲೆ ಹಾಗೂ ರಾಜೀವ್ ಚಂದ್ರಶೇಖರ್ ಅವರು ಬೆಂಗಳೂರು ಕೇಂದ್ರ ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದಾರೆ. ನಿರ್ಮಲಾ ಅವರನ್ನು ದಕ್ಷಿಣ ಕನ್ನಡ ಕ್ಷೇತ್ರದಿಂದ ಕಣಕ್ಕಿಳಿಸುವ ಸಂಭವವೂ ಇದೆ ಎಂದು ಮೂಲಗಳು ಹೇಳಿವೆ. ತೇಜಸ್ವಿ ಸೂರ್ಯ ಅವರು ಬೆಂಗಳೂರು ದಕ್ಷಿಣ ಹಾಗೂ ಪಿ.ಸಿ.ಮೋಹನ್ ಅವರು ಬೆಂಗಳೂರು ಕೇಂದ್ರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

ಹಲವು ಕೇಂದ್ರ ಸಚಿವರ ರಾಜ್ಯಸಭಾ ಅವಧಿ ಏಪ್ರಿಲ್‌ಗೆ ಕೊನೆಗೊಳ್ಳುತ್ತಿದೆ. ಹೀಗಾಗಿ, ಅವರನ್ನು ಲೋಕಸಭಾ ಚುನಾವಣೆಯ ಹುರಿಯಾಳುಗಳನ್ನಾಗಿ ಮಾಡಲು ಪಕ್ಷದ ವರಿಷ್ಠರು ಯೋಜಿಸಿದ್ದಾರೆ. ತಾವು ಸ್ಪರ್ಧಿಸಲು ಇಚ್ಛಿಸುವ ಮೂರು ಕ್ಷೇತ್ರಗಳ ಹೆಸರನ್ನು ನೀಡುವಂತೆ ವರಿಷ್ಠರು ಈ ಸಚಿವರಿಗೆ ಸೂಚಿಸಿದ್ದಾರೆ.

ಪಕ್ಷವು ರಾಜಸ್ಥಾನದಿಂದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಹರಿಯಾಣದಿಂದ ಅರಣ್ಯ ಹಾಗೂ ಕಾರ್ಮಿಕ ಸಚಿವ ಭೂಪೇಂದರ್ ಯಾದವ್, ಕೇರಳದಿಂದ ವಿ. ಮುರಳೀಧರನ್, ಒಡಿಶಾದಿಂದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಕೂಡ ಕಣಕ್ಕಿಳಿಸಬಹುದು ಎಂದು ಮೂಲಗಳು ತಿಳಿಸಿವೆ.

ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಹೊಸ ಮುಖಗಳನ್ನು ಕಣಕ್ಕೆ ಇಳಿಸಿ ಬಿಜೆಪಿ ಯಶಸ್ಸು ಗಳಿಸಿದೆ. ಲೋಕಸಭಾ ಚುನಾವಣೆಯಲ್ಲಿ ಈ ತಂತ್ರವನ್ನು ಅನುಸರಿಸುವ ಸಾಧ್ಯತೆ ಇದೆ. 543 ಸ್ಥಾನಗಳ ಪೈಕಿ ಶೇ 30ರಷ್ಟು ಕ್ಷೇತ್ರಗಳಲ್ಲಿ ಹೊಸ ಮುಖಗಳಿಗೆ ಆದ್ಯತೆ ನೀಡುವ ಸಾಧ್ಯತೆ ಇದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿಯೊಬ್ಬರು ತಿಳಿಸಿದರು. ಇತ್ತೀಚೆಗೆ ನಡೆದ ಪಂಚ ರಾಜ್ಯಗಳ ಚುನಾವಣೆಯಲ್ಲಿ ಕೇಂದ್ರ ಸಚಿವರನ್ನು ಹುರಿಯಾಳುಗಳನ್ನಾಗಿ ಮಾಡಿ ಬಿಜೆಪಿ ಭಾರಿ ಯಶಸ್ಸು ಗಳಿಸಿತ್ತು.

## ಬೆಂಗಳೂರು ರೇಸ್

### ಸೀಝ್ ಕರೇಜಿಯಸ್ ಗೆಲ್ಲುವ ನಿರೀಕ್ಷೆ

ಆಘಾ ಅಲೈ ಅಸ್ಕರ್ ಸ್ಪ್ರಿಂಟರ್ಸ್ ಟ್ರಯಲ್ ಸ್ಟೇಕ್ಸ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೀಝ್ ಕರೇಜಿಯಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ಟಾರ್ಮಿ ಓಷನ್ 2, ಅಕ್ವಮ್ಯಾಟಿಕ್ 5, ಗೋಲ್ಡನ್ ಟೈಮ್ 4

2ನೇ ರೇಸ್: ರೀಡಿಫೈನ್ಡ್ 7, ಆರ್ಟ್ ಆಫ್ ರೊಮಾನ್ಸ್ 8, ಮಾಂಟೇರಿಯೊ 4

3ನೇ ರೇಸ್: ಬಾರ್ನ್ ಡ್ಯಾನ್ಸರ್ 3, ಬಾಲ್ಟಿಮೋರ್ 1, ಕೇಪ್ರಿ ಗರ್ಲ್ 4.

4ನೇ ರೇಸ್: ಸ್ಟೆಲ್ಲಾಂಟಿಸ್ 2, ಐರಿಷ್ ಕಾಫಿ 6, ಡೌಗ್ಲಾಸ್ 3

5ನೇ ರೇಸ್: ನ್ಯೂಮಾ 2, ಪ್ರೊಫೆಸಿ 12, ಸ್ಟಾರ್ ಕಾನ್ಸೆಪ್ಟ್ 11

6ನೇ ರೇಸ್: ಸೀಝ್ ಕರೇಜಿಯಸ್ 3, ಆಲ್ ಅಟ್ರ್ಯಾಕ್ಟಿವ್ 1, ಈಸ್‌ನಾಟ್ ಶೀ ಬ್ಯೂಟಿಫುಲ್ 5

7ನೇ ರೇಸ್: ಗ್ಲೋ ಇನ್ ದಿ ಡಾರ್ಕ್ 5, ವಾರ್ ಟ್ರಯಲ್ 7, ಸಿಂಗ್‌ಸಾಬ್ 3

8ನೇ ರೇಸ್: ಆಕ್ಸಿಟಾಸಿನ್ 6, ಸ್ಟಾರ್ ಅಡ್ಮಿರಲ್ 1, ರೈಟ್ಲಿ ನೋಬಲ್ 2

**ಉತ್ತಮ ಬೆಟ್: ಗ್ಲೋ ಇನ್ ದಿ ಡಾರ್ಕ್**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 4,5,6,7,8 | 3,4,5 | 6,7,8 |

## ಬೆಂಗಳೂರು–ಚೆನ್ನೈ ಕಾರಿಡಾರ್: ಕೇಂದ್ರ, ರಾಜ್ಯಕ್ಕೆ ಹೈಕೋರ್ಟ್ ನೋಟಿಸ್

**ಬೆಂಗಳೂರು:** ಬೆಂಗಳೂರು–ಚೆನ್ನೈ ಕಾರಿಡಾರ್ ಮಾರ್ಗದಲ್ಲಿನ ಹೊಸಕೋಟೆ ತಾಲ್ಲೂಕಿನ ಕೊಳತೂರು ಜಂಕ್ಷನ್ ಬಳಿ ಮೇಲ್ಸೇತುವೆ ನಿರ್ಮಿಸುವಂತೆ ಕೋರಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ಕೃಷಿಕರಾದ ಕೆ.ವಿ. ರವಿಕುಮಾರ್ ಸೇರಿದಂತೆ ಕೊಳತೂರು, ಅಪ್ಪಸಂದ್ರ, ಸೋಲೂರು, ಊರಹಳ್ಳಿ ಗ್ರಾಮಗಳ ಒಟ್ಟು 13 ನಿವಾಸಿಗಳು ಸಲ್ಲಿಸಿರುವ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಹಾಗೂ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆವೇಳೆಅರ್ಜಿದಾರರಪರವಕೀಲಎಂ.ಶಿವಪ್ರಕಾಶ್, 'ಕಾರಿಡಾರ್‌ನಿರ್ಮಾಣದಿಂದ ಗ್ರಾಮೀಣ ಭಾಗದ ನಿವಾಸಿಗಳು ಅನಪೇಕ್ಷಿತ ತೊಂದರೆ ಅನುಭವಿಸುವಂತಾಗಿದೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಕಾರ್ಯದರ್ಶಿ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧ್ಯಕ್ಷ, ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನಾ ನಿರ್ದೇಶಕ, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಮಾ. 1ಕ್ಕೆ ಮುಂದೂಡಲಾಗಿದೆ.

22 ಸಂಘಗಳು, 20 ಮಂದಿ ಪ್ರಮುಖರಿಂದ ಆರೋಪಪಟ್ಟಿ ಬಿಡುಗಡೆ

## 'ಕೇಂದ್ರದಿಂದ ಸಂಸತ್ತಿನ ಆಮೂಲಾಗ್ರ ನಾಶ'

**ನವದೆಹಲಿ:** ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಂಸತ್ತು ಬಹುಮುಖ್ಯವಾದ ಆಧಾರಸ್ತಂಭ. ಆದರೆ, ಈಗಿನ ಕೇಂದ್ರ ಸರ್ಕಾರ ಈ ಆಧಾರಸ್ತಂಭವನ್ನೇ ಆಮೂಲಾಗ್ರವಾಗಿ ನಾಶಪಡಿಸಿದೆ ಎಂದು ಸಮಾಜ ವಿವಿಧ ಕ್ಷೇತ್ರಗಳ ಪ್ರಮುಖರು ಆರೋಪಿಸಿದ್ದಾರೆ.

ಕೇಂದ್ರ ಸರ್ಕಾರ ವ್ಯವಸ್ಥಿತವಾಗಿ ಹೇಗೆ ಈ ಆಧಾರಸ್ತಂಭವನ್ನು ನಾಶಪಡಿಸಿದೆ ಎಂಬುದಕ್ಕೆ ಪುರಾವೆಗಳು ಒಳಗೊಂಡಂತೆ ಆರೋಪಪಟ್ಟಿಯನ್ನು ಆನ್‌ಲೈನ್ ವೇದಿಕೆಯಲ್ಲಿ ಈ ಪ್ರಮುಖರು ಗುರುವಾರ ಬಿಡುಗಡೆ ಮಾಡಿದರು.

ಸಂಸತ್ತನ್ನು ಬಹುಸಂಖ್ಯಾತರ ಮತ್ತು ಅಪ್ರಜಾಸತ್ತಾತ್ಮಕ ಕಾನೂನು ರಚನೆಗೆ ವೇದಿಕೆಯಾಗಿ ಬಳಸಿಕೊಳ್ಳಲು ಸರ್ಕಾರ ಎಲ್ಲ ಸಾಂವಿಧಾನಿಕ ನಿಬಂಧನೆಗಳು, ಕಾರ್ಯವಿಧಾನಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿದೆ ಎಂದು ಆರೋಪಿಸಲಾಗಿದೆ.

ಇಂತಹ ಕ್ರಮಗಳಿಂದ ಸಂಸದೀಯ ಪ್ರಜಾಪ್ರಭುತ್ವವನ್ನು ಹೀಗೆ ದುರ್ಬಲಗೊಳಿಸುವುದರಿಂದ ಪ್ರಜಾಪ್ರಭುತ್ವವೇ ನಾಶವಾಗಿಬಿಡುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಸಂಸದೀಯ ಪ್ರಜಾಪ್ರಭುತ್ವದ ದಿಕ್ಕುತಪ್ಪಿಸುತ್ತಿರುವ ಮತ್ತು ದುರ್ಬಲಗೊಳಿಸುತ್ತಿರುವ ಭಾರತ ಸರ್ಕಾರದ ವಿರುದ್ಧದ ಈ ಆರೋಪಪಟ್ಟಿಗೆ 'ಭಾರತದ ಜನತೆಯಾದ ನಾವು v/s ಭಾರತ ಸರ್ಕಾರ' ಎಂದು ಹೆಸರಿಸಲಾಗಿದೆ.

22 ವಿವಿಧ ಸಂಘ ಸಂಸ್ಥೆಗಳ ಪ್ರಮುಖರು, ವಿವಿಧ 20 ಮಂದಿ ಪ್ರಮುಖರು ಈ ಆರೋಪಪಟ್ಟಿಗೆ ಸಹಿ ಹಾಕಿದ್ದಾರೆ. ಗುರುವಾರ ಆನ್‌ಲೈನ್ ಪತ್ರಿಕಾಗೋಷ್ಠಿಯಲ್ಲಿ ಇದನ್ನು ಬಿಡುಗಡೆ ಮಾಡಿದರು.

ಸಂವಿಧಾನ ನಡೆ ಸಮೂಹದ ಸುಬೋಧ್ ಲಾಲ್, ಸ್ವಾತಿ ನಾರಾಯಣ್, ಸಿಟಿಜನ್ ಆಫ್ ಇಂಡಿಯಾದ ಕೃಷಿಕರಾದ ಉಮಾ ಶಂಕರಿ, ಹೆಲ್ತ್ ರೈಟ್ಸ್‌ನ ಡಾ. ಸುಹಾಸ್ ಕೊಲ್ಹೇಕರ್, ನಿವೃತ್ತ ಅಧಿಕಾರಿ ಸುಂದರ್ ಬುರ್ರಾ, ಆಶೀಶ್ ಕೊಠಾರಿ, ದಿನೇಶ್ ಅಬ್ರೋಲ್, ನಿಖಿಲ್ ಡೇ, ಎನ್.ಡಿ. ಜಯಪರಕಾಸ್, ನರ್ಮದಾ ಬಚಾವೊ ಆಂದೋಲನದ ಮೇಧಾ ಪಾಟ್ಕರ್, ಹಿರಿಯ ಪರಿಸರ ಕಾರ್ಯಕರ್ತೆ ಸೌಮ್ಯ ದತ್ತಾ, ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟದ ಕೊಣಿನಿಕಾ ರೇ ಅವರು ಸಹಿ ಹಾಕಿದ್ದಾರೆ.

ಅಲ್ಲದೆ, ಅಖಿಲ ಭಾರತ ವಕೀಲರ ಸಂಘಟನೆ, ಅಖಿಲ ಭಾರತ ಪೀಪಲ್ಸ್ ಸೈನ್ಸ್ ನೆಟ್‌ವರ್ಕ್, ಎಪಿಸಿಆರ್, ಬಹುತ್ವ ಕರ್ನಾಟಕ, ದೆಹಲಿ ಸೈನ್ಸ್ ಫೋರಂ, ಜನ ಸರೋಕರ್, ಮಾಧ್ಯಮ ಬೆಂಬಲ ವ್ಯಕ್ತಪಡಿಸಿರುವ ಸಂಘಟನೆಗಳಲ್ಲಿ ಸೇರಿವೆ.

### ಪಟ್ಟಿ ಮಾಡಿರುವ ಆರೋಪಗಳು

- ಲೋಕಸಭೆ ಕಲಾಪದ ಅವಧಿ ಮೊಟಕುಗೊಳಿಸಲಾಗಿದೆ. ಕಾರ್ಯನೀತಿಗಳ ಚರ್ಚೆ ಸಂವಾದಕ್ಕೆ ಅವಕಾಶವನ್ನು ಈ ಮೂಲಕ ಮೊಟಕುಗೊಳಿಸಲಾಗಿದೆ.
- ಸ್ವಾತಂತ್ರ್ಯ ನಂತರ ಇದೇ ಮೊದಲ ಬಾರಿಗೆ 17ನೇ ಲೋಕಸಭೆ ಅವಧಿಯಲ್ಲಿ ಉಪಸಭಾಪತಿ ಆಯ್ಕೆಯಾಗಿಲ್ಲ. ಇದು ಸಂವಿಧಾನದ 93ನೇ ಕಲಂನ ನೇರ ಉಲ್ಲಂಘನೆಯಾಗಿದೆ.
- 2009–14ರ ನಡುವೆ ಲೋಕಸಭೆಯಲ್ಲಿ ಮಂಡಿಸಿದ ಮಸೂದೆಗಳಲ್ಲಿ ಶೇ 71ರಷ್ಟು ಮಸೂದೆಗಳನ್ನು ಹೆಚ್ಚಿನ ಚರ್ಚೆ, ವಿಶ್ಲೇಷಣೆಗಾಗಿ ಸ್ಥಾಯಿ ಸಮಿತಿಗಳಿಗೆ ಒಪ್ಪಿಸಲಾಗಿತ್ತು. 2016ರ ನಂತರದಲ್ಲಿ ಶೇ 16ರಷ್ಟು ಮಾತ್ರ ಒಪ್ಪಿಸಲಾಗಿದೆ.
- ಕೂಲಂಕಷ ಪರಿಶೀಲನೆ ಮತ್ತು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದು ಸುಗ್ರೀವಾಜ್ಞೆಗಳ ಮೂಲಕ ಶಾಸನಗಳ ಬದಲಾವಣೆ ಮೂಲಕ ಸರ್ಕಾರವು ಸಂಸದೀಯ ವಿಶ್ಲೇಷಣೆಯಿಂದ ಉದ್ದೇಶಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿದೆ.
- ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಒಂದು 'ಅಪೂರ್ವ' ವಿಧಾನವೆಂದರೆ ಸಂಸದರ ಪ್ರಶ್ನೆಗಳನ್ನೇ ಕಲಾಪಪಟ್ಟಿಯಿಂದ ಕಿತ್ತುಹಾಕುವುದು. ಕಾನೂನಿನಲ್ಲಿ ಇದಕ್ಕೆ ಅವಕಾಶವೇ ಇಲ್ಲದಿದ್ದರೂ ಹೀಗೆ ಮಾಡಲಾಗುತ್ತಿದೆ.
- 2015, 2020, 2021, 2023ರಲ್ಲಿ ಸರ್ಕಾರ ಹೀಗೆ ಪ್ರತಿಪಕ್ಷಗಳ ಸದಸ್ಯರ ಪ್ರಶ್ನೆಗಳನ್ನು ಕಿತ್ತುಹಾಕಿದೆ.
- ಹೊಣೆಗಾರಿಕೆ, ಪಾರದರ್ಶಕತೆ ಮತ್ತು ಪ್ರಜಾಸತ್ತಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವುದನ್ನು ಖಾತ್ರಿಗೆ ಅಳವಡಿಸಿಕೊಂಡಿದ್ದ ಎಲ್ಲ ಪ್ರಕ್ರಿಯೆಗಳನ್ನು ಬುಡಮೇಲು ಮಾಡಿರುವ ಸರ್ಕಾರದ ಅಸಾಂವಿಧಾನಿಕ ಮತ್ತು ಅಪ್ರಜಾಸತ್ತಾತ್ಮಕ ನಡೆಗಳನ್ನು ಅನುಸರಿಸುತ್ತಿದೆ.

ಸಂಸ್ಕೃತಿ ಸಂವರ್ಧನಾ ಸಮಾರಂಭದಲ್ಲಿ ರಂಭಾಪುರಿ ಶ್ರೀ

## ಧರ್ಮ, ದೇಶ ಎರಡು ಕಣ್ಣುಗಳಿದ್ದಂತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಧರ್ಮ ಮತ್ತು ದೇಶ ಎರಡು ಕಣ್ಣುಗಳಿದ್ದಂತೆ. ಎರಡರ ಬಗ್ಗೆಯೂ ಭಕ್ತಿ, ಅಭಿಮಾನ ಇರಬೇಕು ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಆನಂದ ರಾವ್ ಸರ್ಕಲ್ ಬಳಿ ಇರುವ ಜಗದ್ಗುರು ರೇಣುಕಾಚಾರ್ಯ ಕಾಲೇಜಿನಲ್ಲಿ ಶುಕ್ರವಾರ ಜರುಗಿದ ಸಂಸ್ಕೃತಿ ಸಂವರ್ಧನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸಂಸ್ಕೃತಿ, ಸಭ್ಯತೆ, ಸಾಮರಸ್ಯ ಬೆಳೆಸುವುದೇ ಧರ್ಮದ ಗುರಿಯಾಗಿದೆ. ವ್ಯಕ್ತಿತ್ವ ವಿಕಸನಕ್ಕೆ ವೀರಶೈವ ಧರ್ಮ ಸದಾ ಶ್ರಮಿಸುತ್ತಾ ಬಂದಿದೆ. ಸಕಲ ಜೀವಾತ್ಮಗಳಿಗೆ ಒಳಿತನ್ನೇ ಬಯಸಿದ ಧರ್ಮ ನಮ್ಮದು' ಎಂದು ತಿಳಿಸಿದರು.

ಬಿಜೆಪಿ ಮುಖಂಡ ಜಗದೀಶ್ ಶೆಟ್ಟರ್ ಮಾತನಾಡಿ, 'ಭಾವೈಕ್ಯ ಮತ್ತು ಅಧ್ಯಾತ್ಮ ಜ್ಞಾನ ಭಾರತದ ಉಸಿರು. ಮಾನವೀಯ ಮೌಲ್ಯಗಳನ್ನು ಉಳಿಸಿ ಬೆಳೆಸುವುದೇ ಧರ್ಮದ ಧ್ಯೇಯ. ವೈಚಾರಿಕತೆಯ ಹೆಸರಿನಲ್ಲಿ ಸಂಸ್ಕೃತಿ, ಸಭ್ಯತೆ ನಾಶವಾಗಬಾರದು. ಯುವಜನಾಂಗ ಶಿಕ್ಷಣ ಪಡೆಯುವುದರ ಜೊತೆಗೆ ಸಂಸ್ಕಾರವಂತರಾಗಿ ಬಾಳಬೇಕು' ಎಂದು ತಿಳಿಸಿದರು.

ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, 'ದೇವರು ಮತ್ತು ಧರ್ಮದಲ್ಲಿ ಶ್ರದ್ಧೆ, ನಂಬಿಕೆ ಇರಬೇಕು. ಸಾತ್ವಿಕ ತಾತ್ವಿಕ ಹಿತ ಚಿಂತನೆಗಳನ್ನು ಬೋಧಿಸುವುದೇ ಗುರುವಿನ ಧರ್ಮವಾಗಿದೆ. ಕಾಯಕ ಮತ್ತು ದಾಸೋಹದ ಮೂಲಕ ಜನರನ್ನು ಉದ್ಧಾರ ಮಾಡಿದ ಶ್ರೇಯಸ್ಸು ವೀರಶೈವ ಧರ್ಮಕ್ಕೆ ಸಲ್ಲುತ್ತದೆ' ಎಂದು ಹೇಳಿದರು.

ಪ್ರಾಧ್ಯಾಪಕಿ ಮಮತಾ ಸಾಲಿಮಠ ಉಪನ್ಯಾಸ ನೀಡಿದರು. ಸಿದ್ಧರಬೆಟ್ಟ ಕ್ಷೇತ್ರದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಸಕ ಕೆ.ಗೋಪಾಲಯ್ಯ, ಎಡೆಯೂರು ರೇಣುಕ ಶಿವಾಚಾರ್ಯ ಸ್ವಾಮೀಜಿ ಭಾಗವಹಿಸಿದ್ದರು. ಚಿಕ್ಕಕಲ್ಲು ಬಾಳುಮಠದ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಬೆಳ್ಳಾವಿ ಮಹಾಂತ ಶಿವಾಚಾರ್ಯ ಸ್ವಾಮೀಜಿ, ಬಿ.ಎಸ್.ಪರಮಶಿವಯ್ಯ, ಗುರುಸ್ವಾಮಿ, ಎಚ್.ಬಿ. ನಾಗರಾಜ್, ಪಂಚಾಕ್ಷರಿ ಹಿರೇಮಠ, ಸಂಗಯ್ಯ ಹಿರೇಮಠ ಗುರುರಕ್ಷೆ ಸ್ವೀಕರಿಸಿದರು.

ಚಿಕ್ಕಪೇಟೆ ಮಹಂತಿ ಮಠದಲ್ಲಿ ರಂಭಾಪುರಿ ಸ್ವಾಮೀಜಿ ಇಷ್ಟಲಿಂಗ ಪೂಜೆ ನೆರವೇರಿಸಿದರು.




ನಗರದಲ್ಲಿ ಶುಕ್ರವಾರ ನಡೆದ ಇಷ್ಟಲಿಂಗ ಮಹಾಪೂಜೆ ಹಾಗೂ ಸಂಸ್ಕೃತಿ ಸಂವರ್ಧನಾ ಸಮಾರಂಭದಲ್ಲಿ ರಕ್ಷಿತಾ ಭರತನಾಟ್ಯ ಪ್ರದರ್ಶನ ನೀಡಿದರು. ಎಡೆಯೂರು ರೇಣುಕ ಶಿವಾಚಾರ್ಯ ಸ್ವಾಮೀಜಿ, ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಬಿಜೆಪಿ ಮುಖಂಡ ಜಗದೀಶ್ ಶೆಟ್ಟರ್, ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಬಿ. ಎಸ್. ಪರಮಶಿವಯ್ಯ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾದ ಬೆಂಗಳೂರು ಘಟಕದ ಅಧ್ಯಕ್ಷ ಗುರುಸ್ವಾಮಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

## ಬಿ.ಆರ್.ಶೆಟ್ಟಿ ವಿದೇಶ ಪ್ರಯಾಣಕ್ಕೆ ಅನುಮತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಹುಕೋಟಿ ಸಾಲ ಹಿಂದಿರುಗಿಸದೇ ಇರುವ ಕಾರಣಕ್ಕಾಗಿ ಉದ್ಯಮಿ ಬಿ.ಆರ್.ಶೆಟ್ಟಿ ವಿರುದ್ಧ ಹೊರಡಿಸಲಾಗಿದ್ದ ಲುಕ್‌ಔಟ್ ಸರ್ಕ್ಯುಲರ್ (ಎಲ್‌ಒಸಿ) ಅನ್ನು ಅಮಾನತಿನಲ್ಲಿ ಇರಿಸುವಂತೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬಿ.ಆರ್.ಶೆಟ್ಟಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಪ್ರಕಟಿಸಿದ್ದು, ಅರ್ಜಿದಾರರ ವಿದೇಶ ಪ್ರಯಾಣಕ್ಕೆ ಅನುಮತಿ ನೀಡಿದೆ.

'ಅರ್ಜಿದಾರರು ₹ 1 ಕೋಟಿ ಮೊತ್ತದ ಜಾಮೀನು ಭದ್ರತೆ ಒದಗಿಸಬೇಕು. ಇವರ ವಿರುದ್ಧ ಬೇರೆ ಯಾವುದೇ ಪ್ರಕರಣಗಳು ಇಲ್ಲದಿದ್ದರೆ ವೈದ್ಯಕೀಯ ಚಿಕಿತ್ಸೆಗಾಗಿ ವಿದೇಶ ಪ್ರಯಾಣಕ್ಕೆ ಅನುಮತಿಸಬಹುದು' ಎಂದು ಕೇಂದ್ರ ಗೃಹ ಖಾತೆ ವ್ಯಾಪ್ತಿಯ ವಲಸೆ ಕಚೇರಿಗೆ ನಿರ್ದೇಶಿಸಿದೆ.

'ಅವರ ಒಡೆತನದಲ್ಲಿರುವ ಯಾವುದೇ ಸ್ಥಿರಾಸ್ತಿ ಡಿಕ್ರಿಗಳನ್ನು ಪರಭಾರೆ ಮಾಡಬಾರದು' ಎಂದೂ ಷರತ್ತು ವಿಧಿಸಲಾಗಿದೆ.

'ಬಿ.ಆರ್.ಶೆಟ್ಟಿ ವಿರುದ್ಧ ಯಾವುದೇ ಕ್ರಿಮಿನಲ್ ಕೇಸುಗಳಿಲ್ಲ. ಭಾರತೀಯ ಪ್ರಜೆಯಾಗಿರುವ ಅವರಿಗೀಗ 80 ವರ್ಷವಾಗಿದೆ' ಎಂಬ ಅರ್ಜಿದಾರರ ಪರ ಹಿರಿಯ ವಕೀಲರಾದ ಪ್ರಭುಲಿಂಗ ಕೆ.ನಾವದಗಿ ಹಾಗೂ ಬಿ.ವಿ.ಆಚಾರ್ಯ ಮಂಡಿಸಿದ್ದ ವಾದವನ್ನು ನ್ಯಾಯಪೀಠ ಭಾಗಶಃ ಮಾನ್ಯ ಮಾಡಿದೆ. ಕೇಂದ್ರ ಸರ್ಕಾರದ ಪರ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ವಾದ ಮಂಡಿಸಿದ್ದರು.

**ಪ್ರಕರಣವೇನು?:** 'ಬ್ಯಾಂಕುಗಳ ಬಹುಕೋಟಿ ಸಾಲ ವಸೂಲಾತಿ ಪ್ರಕ್ರಿಯೆ ಬಾಕಿ ಇದೆ' ಎಂಬ ಹಿನ್ನೆಲೆಯಲ್ಲಿ ಶೆಟ್ಟಿ ಅವರ ವಿದೇಶ ಪ್ರಯಾಣಕ್ಕೆ ನಿರ್ಬಂಧ ವಿಧಿಸಲು ಕೋರಿ, ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಬರೋಡಾ ವಲಸೆ ಕಚೇರಿಗೆ ಮನವಿ ಸಲ್ಲಿಸಿದ್ದವು. ಇದರ ಅನುಸಾರ ವಲಸೆ ಕಚೇರಿಯು ಶೆಟ್ಟಿ ಅವರ ವಿರುದ್ಧ ಲುಕ್‌ಔಟ್ ಸರ್ಕ್ಯುಲರ್ ಹೊರಡಿಸಿತ್ತು.

### ಚಿರತೆ ಕಾರ್ಯಪಡೆಗೆ ಕೌಶಲ ತರಬೇತಿ

**ಆನೇಕಲ್:** ಚಿರತೆ ಕಾರ್ಯಪಡೆಯ 100ಕ್ಕೂ ಹೆಚ್ಚು ಸಿಬ್ಬಂದಿಗೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಕಾರ್ಯಾಚರಣೆ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಲಾಯಿತು.

ಸಂಪನ್ಮೂಲ ವ್ಯಕ್ತಿ ಸಂಜಯ್ ಗುಬ್ಬಿ ಮತ್ತು ಡೆಹರಾಡೂನ್‌ನಲ್ಲಿ ವನ್ಯಜೀವಿ ಕಾರ್ಯಾಚರಣೆ ತರಬೇತಿ ಪಡೆದಿರುವ ಹಿರಿಯ ಅಧಿಕಾರಿಗಳು ಸಿಬ್ಬಂದಿಗೆ ಕೌಶಲ ಬಗ್ಗೆ ತಿಳಿಸಿಕೊಟ್ಟರು.

ಅರವಳಿಕೆ ಚುಚ್ಚುಮದ್ದು ನೀಡಿದ ಬಳಿಕ ಚಿರತೆಯನ್ನು ಹೇಗೆ ಸೆರೆ ಹಿಡಿಯಬೇಕು ಎಂಬ ಅಂಶಗಳ ಬಗ್ಗೆ ಕಾರ್ಯಪಡೆ ಸಿಬ್ಬಂದಿಗೆ ತರಬೇತಿ ನೀಡಲಾಯಿತು.

# ‘ಜಾರಕಿಹೊಳಿ ವಿರುದ್ಧ ಬಲವಂತದ ಕ್ರಮ ಬೇಡ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಕ್ಕರೆ ಕಾರ್ಖಾನೆ ಅಭಿವೃದ್ಧಿಗೆ ಪಡೆದ ಸಾಲ ಮರುಪಾವತಿ ಮಾಡದ ಆರೋಪ ಎದುರಿಸುತ್ತಿರುವ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಮುಂದಿನ ವಿಚಾರಣೆವರೆಗೂ ಯಾವುದೇ ಕ್ರಮಕ್ಕೆ ಮುಂದಾಗಬಾರದು’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ರಮೇಶ ಜಾರಕಿಹೊಳಿ ಮತ್ತಿತರರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

‘ಇದೇ 26ರಂದು ಅರ್ಜಿದಾರರ ಮಗನ ಮದುವೆ ನಿಶ್ಚಯವಾಗಿದೆ. ಈ ಸಂದರ್ಭದಲ್ಲಿ ತನಿಖಾಧಿಕಾರಿಗಳು ಬಂಧಿಸುವ ಸಾಧ್ಯತೆಯಿದೆ. ಆದ್ದರಿಂದ, ಅವರಿಗೆ ರಕ್ಷಣೆ ನೀಡಬೇಕು’ ಎಂದು ರಮೇಶ ಜಾರಕಿಹೊಳಿ ಪರ ವಕೀಲರು ಮನವಿ ಮಾಡಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ‘ಹಿಂದೂ ಧಾರ್ಮಿಕ ಸಂಪ್ರದಾಯಗಳ ಪ್ರಕಾರ ಮಗನ ಮದುವೆಯಲ್ಲಿ ತಂದೆ ಹಾಜರಿರುವುದು ಅತ್ಯಗತ್ಯ. ಆದ್ದರಿಂದ, ಮುಂದಿನ ವಿಚಾರಣೆಯವರೆಗೂ ರಮೇಶ ಜಾರಕಿಹೊಳಿ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗಬಾರದು’ ಎಂದು ತನಿಖಾಧಿಕಾರಿಗಳಿಗೆ ನಿರ್ದೇಶಿಸಿತು.

‘ಪ್ರಕರಣದ ಇತರೆ ಅರ್ಜಿದಾರರ ವಿರುದ್ಧ ತನಿಖೆ ನಡೆಸುವುದಕ್ಕೆ ಯಾವುದೇ ಅಡ್ಡಿ ಇರುವುದಿಲ್ಲ’ ಎಂದು ಸ್ಪಷ್ಟಪಡಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

**ಪ್ರಕರಣವೇನು?:** ಬೆಳಗಾವಿ ಜಿಲ್ಲೆ ಗೋಕಾಕದಲ್ಲಿರುವ ಸೌಭಾಗ್ಯ ಲಕ್ಷ್ಮಿ ಶುಗರ್ಸ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ರಮೇಶ ಜಾರಕಿಹೊಳಿ ಮತ್ತಿತರರು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್ ನಿಂದ ಪಡೆದಿದ್ದ ₹ 329 ಕೋಟಿ ಸಾಲ ಪಾವತಿಸದೇ ವಂಚಿಸಿರುವ ಆರೋಪ ಎದುರಿಸುತ್ತಿದ್ದಾರೆ.

ಈ ಸಂಬಂಧ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಜನವರಿ 5ರಂದು ನೀಡಿದ ದೂರಿನ ಅನ್ವಯ ವಿ.ವಿ. ಪುರಂ ಠಾಣೆಯಲ್ಲಿ ಆರೋಪಿಗಳ ವಿರುದ್ಧ ಐಪಿಸಿ ಕಲಂ 406, 420ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಇದನ್ನು ರದ್ದುಪಡಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

# ನಕಲಿ ದಾವೆ ಜಾಲ: 50 ದೋಷಾರೋಪ ಪಟ್ಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಕಲಿ ಕಕ್ಷಿದಾರ ಹಾಗೂ ಪ್ರತಿವಾದಿಗಳನ್ನು ಸೃಷ್ಟಿಸಿ ನ್ಯಾಯಾಲಯದಿಂದ ಆಸ್ತಿ ಹಕ್ಕಿನ ರಾಜಿ ಡಿಕ್ರಿ ಪಡೆದು ನೂರಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿ ಲಪಟಾಯಿಸುತ್ತಿದ್ದ ಜಾಲದ ವಿರುದ್ಧ ತನಿಖೆ ನಡೆಸಿದ್ದ ಸಿಐಡಿ ಅಧಿಕಾರಿಗಳು, 50 ಪ್ರಕರಣಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ವಾರಸುದಾರರು ಉಪಯೋಗಿಸದ ಖಾಲಿ ಜಾಗವನ್ನು ಕಬಳಿಸಲು ನಕಲಿ ಮೊಕದ್ದಮೆ ಹೂಡುತ್ತಿದ್ದ ಜಾಲ ಹಲವು ವರ್ಷಗಳಿಂದ ಸಕ್ರಿಯ ವಾಗಿತ್ತು. ಪ್ರಕರಣವೊಂದರ ವಿಚಾರಣೆ ಸಂದರ್ಭದಲ್ಲಿ ಜಾಲದ ಸುಳಿವು ಪತ್ತೆ ಮಾಡಿದ್ದ ಹೈಕೋರ್ಟ್, ತನಿಖೆಗೆ ಸೂಚಿಸಿತ್ತು.

‘ಮೋಸದ ಮಾರ್ಗದಿಂದ ಆಸ್ತಿ ಹಕ್ಕಿನ ರಾಜಿ ಡಿಕ್ರಿ ಪಡೆಯುತ್ತಿದ್ದ’ ಬಗ್ಗೆ ಹೈಕೋರ್ಟ್ ನೀಡಿದ್ದ ನಿರ್ದೇಶನದಂತೆ ಲಘು ಪ್ರಕರಣಗಳ ನ್ಯಾಯಾಲಯದ (ಎಸ್‌ಸಿಸಿಎಚ್) ರಿಜಿಸ್ಟ್ರಾರ್ ಆರ್. ಧನಲಕ್ಷ್ಮಿ ಅವರು ಹಲಸೂರು ಗೇಟ್ ಠಾಣೆಗೆ ದೂರು ನೀಡಿದ್ದರು. 2020ರ ಡಿಸೆಂಬರ್ 7ರಂದು ಎಫ್‌ಐಆರ್ ದಾಖಲಾಗಿತ್ತು.

ತನಿಖೆ ಕೈಗೆತ್ತಿಕೊಂಡಿದ್ದ ಸಿಐಡಿ ಅಧಿಕಾರಿಗಳು, ಜಾಲದ ಪ್ರಮುಖ ಆರೋಪಿ ಜಾನ್ ಮೋಸಸ್ ಸೇರಿದಂತೆ 18 ಆರೋಪಿಗಳನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದರು. ಹಲವರು ಜಾಮೀನು ಪಡೆದುಕೊಂಡಿದ್ದಾರೆ.

**130 ಪ್ರಕರಣಗಳು:** ‘ನಕಲಿ ಮೊಕದ್ದಮೆ ಹೂಡಿ ಆಸ್ತಿ ಕಬಳಿಸಿದ್ದ 130 ಪ್ರಕರಣಗಳು ತನಿಖೆ ವೇಳೆ ಪತ್ತೆಯಾಗಿದ್ದವು. ಇದೀಗ 50 ಪ್ರಕರಣಗಳ ತನಿಖೆ ಮುಕ್ತಾಯಗೊಂಡಿದ್ದು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಉಳಿದ ಪ್ರಕರಣಗಳ ತನಿಖೆ ಮುಂದುವರಿದಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.


‘ಪ್ರಮುಖ ಆರೋಪಿ ಜಾನ್ ಮೋಸಸ್, ಸೇಂಟ್ ಜಾನ್ಸ್ ರಸ್ತೆಯಲ್ಲಿ ಜಾಜ್ ಗ್ಲೋಬಲ್ ಬ್ಯುಸಿನೆಸ್ ಕಂಪನಿ ಕಚೇರಿ ಹೊಂದಿದ್ದಾನೆ. ನಕಲಿ ದಾಖಲೆ ಸೃಷ್ಟಿಸಿ ಪರರ ಆಸ್ತಿ ಕಬಳಿಸುವುದನ್ನೇ ಈತ ವೃತ್ತಿ ಮಾಡಿಕೊಂಡಿದ್ದ. ಈತನ ಕೃತ್ಯದಲ್ಲಿ ಹಲವರು ಭಾಗಿಯಾಗಿದ್ದರು. ಎಲ್ಲರ ವಿರುದ್ಧವೂ ಪುರಾವೆಗಳು ಲಭ್ಯವಾಗಿದ್ದು, ಅವುಗಳನ್ನು ಆರೋಪ ಪಟ್ಟಿ ಜೊತೆ ಲಗತ್ತಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

**ಪತ್ತೆಯಾಗಿದ್ದು ಹೇಗೆ:** ಯಶವಂತಪುರ ಬಳಿಯ ಗೋಕುಲ 1ನೇ ಹಂತದ ಆಂಜನೇಯ ದೇವಸ್ಥಾನ ಬಳಿ ಇರುವ ಷಾ ಹರಿಲಾಲ್ ಭಿಕಾಭಾಯಿ ಆ್ಯಂಡ್ ಕಂಪನಿಗೆ ಸೇರಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಜಾಗ ಕಬಳಿಸಲು ಆರೋಪಿಗಳು ನಕಲಿ ದಾವೆ ಹೂಡಿದ್ದರು. ಜಾಲದ ಕೃತ್ಯ ಗೊತ್ತಾಗುತ್ತಿದ್ದಂತೆ ನೈಜ ಮಾಲೀಕರು, ಹೈಕೋರ್ಟ್ ಮೆಟ್ಟಿಲೇರಿದ್ದರು. ಇದೇ ಅರ್ಜಿ ವಿಚಾರಣೆ ಸಂದರ್ಭದಲ್ಲಿ ನಕಲಿ ದಾವೆ ಜಾಲದ ಕೃತ್ಯಗಳು ಪತ್ತೆಯಾಗಿದ್ದವು. ಜಾನ್ ಮೋಸಸ್, ಸಹಚರರು, ಕೆಲ ವಕೀಲರ ವಿರುದ್ಧವೂ ಎಫ್‌ಐಆರ್‌ಗಳು ದಾಖಲಾಗಿದ್ದವು.

# ಎಪಿಎಂಸಿ: ದಲ್ಲಾಳಿಗಳ ಹಾವಳಿ ತಡೆಗೆ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆಲವು ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ (ಎಪಿಎಂಸಿ) ದಲ್ಲಾಳಿಗಳು ರೈತರಿಂದ ಹೆಚ್ಚುವರಿ ಕಮಿಷನ್ ಪಡೆಯುತ್ತಿರುವ, ಸರ್ಕಾರದ ಸವಲತ್ತುಗಳು ಮತ್ತು ವ್ಯಾಪಾರ ಪರವಾನಗಿ ಪಡೆದಿರುವ ದೂರುಗಳು ಬಂದಿದ್ದು ಅಂತಹ ಪರವಾನಗಿಗಳನ್ನು ಗುರುತಿಸಿ ರದ್ದುಪಡಿಸಬೇಕು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್. ಪಾಟೀಲ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.



ಶಿವಾನಂದ ಪಾಟೀಲ

ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಅವರು, ಮಾರುಕಟ್ಟೆ ಶುಲ್ಕ ವಂಚನೆಯ ದೂರುಗಳು ಹೆಚ್ಚಾಗುತ್ತಿವೆ. ಎಪಿಎಂಸಿಗಳ ಆದಾಯವೂ ಕಡಿಮೆ ಯಾಗುತ್ತಿದೆ. ಎಲ್ಲಿ ಸೋರಿಕೆ ಆಗುತ್ತಿದೆ ಎಂಬುದನ್ನು ಪತ್ತೆ ಮಾಡಿ ತಡೆಗಟ್ಟಬೇಕು ಎಂದು ನಿರ್ದೇಶನ ನೀಡಿದರು.

ವಂಚನೆ ತಡೆಗೆ ವಿಚಕ್ಷಣ ದಳಗಳನ್ನು ಮತ್ತೆ ಸಕ್ರಿಯಗೊಳಿಸಲಾಗುವುದು. ಯಾವುದೇ ಕೃಷಿ ಉತ್ಪನ್ನ ಮಾರುಕಟ್ಟೆಗಳಿಂದ ರೈತರ ಶೋಷಣೆಯ ದೂರುಗಳು ಬರಬಾರದು. ಎಪಿಎಂಸಿಗಳು ರೈತ ಸ್ನೇಹಿಯಾಗಿರಬೇಕು, ಆರ್ಥಿಕ ಅಪರಾಧಗಳಿಗೆ ಅವಕಾಶ ನೀಡಬಾರದು. ಆರ್ಥಿಕವಾಗಿ ಸದೃಢಗೊಳಿಸಬೇಕು ಎಂದು ತಿಳಿಸಿದರು.

ಮಾರುಕಟ್ಟೆ ಶುಲ್ಕ ಸಂಗ್ರಹ ಗುರಿ ಸಾಧನೆ ತಲುಪಲು ಸಾಧ್ಯವಾಗದಿರುವುದಕ್ಕೆ ಬರ ಪರಿಸ್ಥಿತಿ ಕಾರಣ ಎಂಬ ಸಬೂಬು ಹೇಳಲಾಗುತ್ತಿದೆ. ಆದರೆ ಯಶವಂತಪುರ ಮಾರುಕಟ್ಟೆಗೆ ಈರುಳ್ಳಿ, ಬೆಳ್ಳುಳ್ಳಿ, ಬ್ಯಾಡಗಿ ಮತ್ತು ಹುಬ್ಬಳ್ಳಿ ಮಾರುಕಟ್ಟೆಗೆ ಮೆಣಸಿನಕಾಯಿ ದ್ವಿದಳ ಧಾನ್ಯಗಳ ಆವಕ ಹೆಚ್ಚಳವಾಗಿದೆ. ಈರುಳ್ಳಿ, ಬೆಳ್ಳುಳ್ಳಿ ಆವಕ ಪ್ರಮಾಣ ಮತ್ತು ಧಾರಣೆ ಗರಿಷ್ಠ ಮಟ್ಟ ತಲುಪಿದೆ. ಅದಕ್ಕೆ ತಕ್ಕಂತೆ ಶುಲ್ಕ ಸಂಗ್ರಹ ಪ್ರಮಾಣದಲ್ಲಿ ಏಕೆ ಏರಿಕೆ ಆಗಿಲ್ಲ ಎಂದು ಪ್ರಶ್ನಿಸಿದರು.

ಅಡಕೆ ಆವಕ ಪ್ರಮಾಣ ಹೆಚ್ಚಳವಾಗಿದೆ. ಅಡಕೆ ಬೆಳೆಯುವ ಪ್ರದೇಶದ ವಿಸ್ತಾರವೂ ಇದಕ್ಕೆ ಕಾರಣ ಇರಬಹುದು. ಅಡಕೆ ವಹಿವಾಟು ಇರುವ ಎಪಿಎಂಸಿಗಳಲ್ಲಿ ಗುರಿ ತಲುಪದಿರಲು ಏನು ಕಾರಣ ಎಂದು ಪ್ರಶ್ನಿಸಿದರು. ಶುಲ್ಕ ಸಂಗ್ರಹ ಗುರಿಯಲ್ಲಿ ತೀರಾ ಕಳಪೆ ಸಾಧನೆ ಮಾಡಿರುವುದಕ್ಕೆ ಲೋಪ ಏನೆಂದು ತಿಳಿದುಕೊಂಡು ಸರಿಯಾಗಿ ಕೆಲಸ ಮಾಡಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.



ಭರಮಸಾಗರ ಆರೋಗ್ಯ ಕೇಂದ್ರದಲ್ಲಿ ನಡೆದ ಪ್ರೀ ವೆಡ್ಡಿಂಗ್ ಶೂಟ್ ವೇಳೆ ಭಾವಿ ಪತಿ ಅಭಿಷೇಕ್ ಮುಖದ ಮೇಲಿನ ಬೆವರು ಒರೆಸಲು ಮುಂದಾದ ಯುವತಿ

# ವೈದ್ಯ ಅಭಿಷೇಕ್ ಅಮಾನತು

ಪ್ರಜಾವಾಣಿ ವಾರ್ತೆ

**ಸಿರಿಗೆರೆ (ಚಿತ್ರದುರ್ಗ):** ಭರಮಸಾಗರದ ಸಮುದಾಯ ಆರೋಗ್ಯ ಕೇಂದ್ರದ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಪ್ರೀ ವೆಡ್ಡಿಂಗ್ ಶೂಟ್ ಮಾಡಿದ್ದ ಹೊರಗುತ್ತಿಗೆ ವೈದ್ಯ ಅಭಿಷೇಕ್ ಅವರನ್ನು ಚಿತ್ರದುರ್ಗ ಜಿಲ್ಲಾಧಿಕಾರಿ ಟಿ. ವೆಂಕಟೇಶ್ ಅಮಾನತುಗೊಳಿಸಿದ್ದಾರೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಭಿಷೇಕ್ ಅವರು ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಬುಧವಾರ ಪ್ರೀ ವೆಡ್ಡಿಂಗ್ ಶೂಟ್ ಮಾಡಿದ್ದರು. ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಆಡಳಿತ ವೈದ್ಯಾಧಿಕಾರಿ ನೀಡಿರುವ ವರದಿ ಆಧರಿಸಿ ಜಿಲ್ಲಾಧಿಕಾರಿ ಶುಕ್ರವಾರ ಕ್ರಮ ಕೈಗೊಂಡಿದ್ದಾರೆ.

ಭರಮಸಾಗರದವರಾದ ಅಭಿಷೇಕ್, ಹೊಳಲ್ಕೆರೆ ತಾಲ್ಲೂಕು ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಕೆಲವು ದಿನಗಳ ಹಿಂದೆ ಭರಮಸಾಗರ ಆರೋಗ್ಯ ಕೇಂದ್ರಕ್ಕೆ ಪ್ರಭಾರಿ ವೈದ್ಯರಾಗಿ ನಿಯೋಜನೆಗೊಂಡಿದ್ದರು. ಇವರ ಸಂಗಾತಿಯು ವೈದ್ಯಕೀಯ ಪದವೀಧರೆ ಎಂದು ಹೇಳಲಾಗಿದೆ.

ಈ ಜೋಡಿ ಪ್ರೀ ವೆಡ್ಡಿಂಗ್ ಶೂಟ್‌ಗಾಗಿ ನಾಲ್ವರು ಛಾಯಾಗ್ರಾಹಕರನ್ನು ಆರೋಗ್ಯ ಕೇಂದ್ರಕ್ಕೆ ಕರೆಸಿತ್ತು. ವ್ಯಕ್ತಿಯೊಬ್ಬನಿಗೆ ರೋಗಿಯ ವೇಷ ತೊಡಿಸಿ ಶಸ್ತ್ರ ಚಿಕಿತ್ಸೆ ನಡೆಸಲು ಮುಂದಾಗಿತ್ತು. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬೆನ್ನಲ್ಲೇ ಟೀಕೆಗಳು ವ್ಯಕ್ತವಾಗಿದ್ದವು. ಅಭಿಷೇಕ್, ಪ್ರಭಾವಿ ಮನೆತನಕ್ಕೆ ಸೇರಿದವರು ಎನ್ನಲಾಗಿದೆ.

ಘಟನೆ ಕುರಿತು ತನಿಖೆ ನಡೆಸಿ ವರದಿ ನೀಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗೆ ಸೂಚಿಸಿದ್ದರು.

# 38 ವಿದ್ಯಾರ್ಥಿಗಳ ಅಮಾನತು

ಪ್ರಜಾವಾಣಿ ವಾರ್ತೆ

**ಗದಗ:** ನಗರದ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಜಿಮ್ಸ್) ಎಂಬಿಬಿಎಸ್ ಇಂಟರ್ನ್‌ಶಿಪ್ ವಿದ್ಯಾರ್ಥಿಗಳು ಜಿಲ್ಲಾ ಆಸ್ಪತ್ರೆಯಲ್ಲಿ ಮಾಡಿದ ರೀಲ್ಸ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಈ ಸಂಬಂಧ 38 ವಿದ್ಯಾರ್ಥಿಗಳನ್ನು ಒಂದು ವಾರ ಅಮಾನತು ಮಾಡಿ ಜಿಮ್ಸ್ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ ಆದೇಶಿಸಿದ್ದಾರೆ.

ಎಂಬಿಬಿಎಸ್ ವಿದ್ಯಾರ್ಥಿಗಳು ಜಿಲ್ಲಾ ಆಸ್ಪತ್ರೆಯಲ್ಲಿ ರೋಗಿಗಳ ಎದುರೇ ಕನ್ನಡ, ತಮಿಳು, ತೆಲುಗು, ಹಿಂದಿ ಚಿತ್ರ ಗೀತೆಗಳಿಗೆ ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು. ಈ ರೀಲ್ಸ್‌ಗಳನ್ನು ನೋಡಿ ಕೆಲವರು ಇಷ್ಟಪಟ್ಟರೆ, ಇನ್ನು ಕೆಲವರು ‘ನಿಮ್ಮ ಹುಚ್ಚಾಟಕ್ಕೆ ಬೇರೆ ಜಾಗ ಸಿಗಲಿಲ್ವಾ?’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಎಂಬಿಬಿಎಸ್ ಇಂಟರ್ನ್‌ಶಿಪ್ ವಿದ್ಯಾರ್ಥಿಗಳು ಅನುಮತಿ ಪಡೆಯದೇ ಜಿಲ್ಲಾ ಆಸ್ಪತ್ರೆಯ ವಿವಿಧೆಡೆ ರೀಲ್ಸ್ ಮಾಡಿದ್ದಾರೆ. ಇದರ ಬಗ್ಗೆ ವಿಚಾರಿಸಿದಾಗ, ಏಪ್ರಿಲ್‌ನಲ್ಲಿ ಪದವಿ ಪೂರ್ಣಗೊಳ್ಳುವ ಸಂಭ್ರಮದಲ್ಲಿ ಯಾರಿಗೂ ತೊಂದರೆ ಆಗದಂತೆ ರೀಲ್ಸ್ ಮಾಡಿರುವುದಾಗಿ ತಿಳಿಸಿದ್ದಾರೆ. ಆದರೆ, ಆಸ್ಪತ್ರೆಯಲ್ಲಿ ರೀಲ್ಸ್ ಮಾಡಿದ್ದು ತಪ್ಪು’ ಗ್ರಾಜ್ಯುಯೇಷನ್ ಡೇ ಮಾಡದಿರಲು ನಿರ್ಧರಿಸಲಾಗಿದೆ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

# ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



# ನಿನ್ನ ಪ್ರೇಮದ ಪರಿಯ...

ರಶ್ಮಿ ಎಸ್

ಪ್ರೇಮಿಗಳ ದಿನದ ನಿರೀಕ್ಷೆಯಲ್ಲಿ ಪ್ರತಿದಿನವೂ ಸಂಭ್ರಮ ಆಚರಿಸಲಾಗುತ್ತಿದೆ. ಪ್ರೇಮ.. ಅಂದ್ರೆ ಕಾಳಜಿ, ಕಣ್ರೆಪ್ಪೆಯ ಮೇಲಿನ ಕನಸದು. ಕೆನ್ನೆಗಾನಿದರೆ ನನಸೂ ಆದೀತು, ಕಣ್ಣೀರೂ ಆದೀತು.

ಪ್ರೇಮ... ಅಂದ್ರೆ ಗೌರವ. ನೀನೂ ನನ್ನಂತೆಯೇ, ನಾನೂ ನಿನ್ನಂತೆಯೇ ಎಂಬ ಪರಸ್ಪರ ಗೌರವ

ಪ್ರೇಮ ಅಂದ್ರೆ.. ಸಮಯ, ಪರಸ್ಪರ ನೀಡಬೇಕಿರುವ ಸಮಯ, ಪರಸ್ಪರರಿಗಾಗಿ ಮೀಸಲಿಡಬೇಕಾದ ಸಮಯ

ಪ್ರೇಮ... ಅಂದ್ರೆ.. ಅದೆಂದೂ ಮುಗಿಯದ ಅಫ್ಸಾನಾ,(ಕತೆಗಳ ಸರಮಾಲೆ) ಅದೆಂದಿಗೂ ಅಪೂರ್ಣ

ಪ್ರೇಮ.. ಚಾಕಲೇಟಿನ ಕೊನೆಯ ಕಣವನ್ನೂ ನಾಲಗೆಯ ತುದಿಯಿಂದ ಆಸ್ವಾದಿಸುತ್ತ, ಕಣ್ಮುಚ್ಚುವುದು, ತಿಂದಾದ ಮೇಲೆಯೂ ಅದರದ್ದೇ ಸ್ವಾದದಲ್ಲಿ ಮಿಂದೇಳುವುದು...

ಪ್ರೇಮ.. ಕರಗಿ, ಜಾರಿ ಬೀಳಬಹುದಾದ ಐಸ್‌ಕ್ರೀಂನಂತೆ.. ಕರಗುವ ಮುನ್ನ ತಿಂದರೂ ಮುಗಿದೇ ಹೋಯ್ತಲ್ಲ ಎಂದು ಕೊರಗುವುದು, ಕೊನೆಯವರೆಗೂ ಉಳಿಯಲಿ ಎಂದು ಕಾಪಿಟ್ಟರೂ, ಕರಗಿ ಹೋಯ್ತಲ್ಲ ಎಂದು ಅಳುವುದು. ಬದುಕನ್ನು ಆಸ್ವಾದಿಸುವುದು, ಆನಂದಿಸುವುದು, ವಿರಹಿನಿಯಾಗುವುದು, ಪ್ರಣಯಿನಿ ಆಗುವುದು, ಆಮೋದಿನಿಯಾಗುವುದು.. ಹೀಗೆ ಏನೆಲ್ಲ.. ಬದುಕಿನ ನವರಸಗಳನ್ನೂ ಅನುಭವಕ್ಕೆ ತರುವ ಪ್ರೇಮದ ಪರಿ ಕಾಲ ಬದಲಾದಂತೆ, ವಯಸ್ಸು ಮಾಗಿದಂತೆ ಬದಲಾಗುತ್ತಲೇ ಹೋಗುತ್ತದೆ. ವಿಷಾದ, ನಿರೀಕ್ಷೆ, ಉತ್ಸಾಹ, ಕಾಯುವುದು, ಬೇಯುವುದು ಎಲ್ಲವೂ ಪ್ರೇಮದ ಪರಿಯೇ ಹೌದು. ಇಲ್ಲಿ ಅಂಥ ಕೆಲವು ಪ್ರೇಮದ ವ್ಯಾಖ್ಯಾನಗಳು ನಿಮಗಾಗಿ...



## ನಿನ್ನ ಪ್ರೇಮದ ಪರಿಯ ನಾನರಿಯೆ ಕನಕಾಂಗಿ..

'ನಿನ್ನ ಪ್ರೇಮದ ಪರಿಯ ನಾನರಿಯೆ ಕನಕಾಂಗಿ' ಎಂದು ಕಾಲವಳಿಸದ ಚೆಲುವಿನ ಪ್ರೇಮಕವಿ ಕೆಎಸ್.ನರಸಿಂಹಸ್ವಾಮಿಗಳು ಬರೆದರು. ಅಷ್ಟು ಸುಲಭವೆ ಪ್ರೇಮದ ಪರಿಯನ್ನು ಅರಿಯುವುದು. ಪ್ರೇಮ ಒಂದು ಭಾವ, ಅದು ಮೈದಾಳಬೇಕಾದರೆ ಅದಕ್ಕೊಂದು ಜೀವ ಬೇಕು. ಅಷ್ಟೇ ಸತ್ಯ ಎಂದರೆ ಪ್ರತಿ ಜೀವದ ಬೆನ್ನ ಮೇಲೆಯೂ ನಿನ್ನೆಯ ಅಗೋಚರ ಹೊರೆ ಇದ್ದೇ ಇರುತ್ತದೆ. ಆ ಹೊರೆ ಮತ್ತು ಆ ಜೀವದ ನಾಳಿನ ನಿರೀಕ್ಷೆಗಳು ಪ್ರೇಮಕ್ಕೆ ಕಣ್ಣು, ಮೂಗು, ಕಿವಿಗಳನ್ನು ರೂಪಿಸುತ್ತವೆ.



ಅಲ್ಲಿ ಕಳೆದವರ್ಷಗಳ ಲೆಕ್ಕ ಮಾತ್ರವಲ್ಲ, ವರ್ಷ, ಗ್ರೀಷ್ಮ, ವಸಂತ, ಋತುಗಳ ಒದ್ದೆ, ಒಣಗು, ಬೆರಗುಗಳೂ ಇರುತ್ತವೆ. ಪ್ರೀತಿಯನ್ನು ಬಿಗಿದುಹಿಡಿ ಎಂದು ಒಂದು ಜೀವ ಎಂದರೆ, ಬೇಡ ಮುಕ್ತವಾಗಿ ಬಿಡು ಎಂದು ಇನ್ನೊಂದು ಉಸುರುತ್ತದೆ. ಅನ್ನಿಸಿದೆಲ್ಲವನ್ನೂ ಹೇಳಿಬಿಡು, ಪ್ರೀತಿಯನ್ನು ಸುರಿದುಬಿಡು ಎಂದು ಒಂದು ಹಸ್ತ ಬೆನ್ನ ಮೇಲೆ ಕೈ ಇಟ್ಟರೆ, ತಾಳುತಾಳು ಹಾಗೆ ನಿನ್ನನ್ನು ಬಯಲಾಗಿಸಬೇಡ ಎಂದು ಇನ್ನೊಂದು ಕೈ ತಡೆಯುತ್ತದೆ.

ಅಂದಹಾಗೆ ವಯಸ್ಸು ಕಲಿಸಿದ ಇನ್ನೊಂದು ಸತ್ಯ, ಎಲ್ಲಾ ಪ್ರೀತಿಗಳೂ ಕೇವಲ 'ಐ ಲವ್ ಯೂ' ಮೂಲಕವೇ ಅಭಿವ್ಯಕ್ತಗೊಳ್ಳಬೇಕಿಲ್ಲ. ಕೆಲವು, 'ಮಾತ್ರೆ ತಗೊಂಡು ಅರ್ಧಗಂಟೆಯಾಯಿತು, ಊಟಮಾಡಬಾರದೆ?', 'ತಲುಪಿದೆಯಾ?', 'ಮೊಣಕಾಲ ನೋವು ಹೇಗಿದೆ?', 'ಇನ್ನೂ ನಿದ್ದೆ ಮಾಡಿಲ್ಲವೆ?' ಎಂದು ಸಹ ಕೇಳಿಸಬಹುದು. ಫೆಬ್ರವರಿ ತಿಂಗಳಲ್ಲಿ ಪ್ರೀತಿಯ ಬಗ್ಗೆ ಬರೆಯುವ ವಯಸ್ಸು ಮೀರಿಲ್ಲವೆ ಎಂದು ಒಮ್ಮೆ ಅನಿಸಿದರೂ, ಹಿಂದೆಯೇ ಬಹುಶಃ ಅದನ್ನು ಬರೆಯುವ ಸಾವಧಾನ ಈಗ ಬಂದಿರುತ್ತದೆ ಅಂತಲೂ ಅನ್ನಿಸಿತು. ಏಕೆಂದರೆ ಚಿಟ್ಟೆಯ ಉಸಿರುಗಟ್ಟಿಸದೆ ಅಂಗೈಯಲ್ಲಿ ಹಿಡಿಯುವ ತಾಳ್ಮೆ ಮತ್ತು ಚಿಟ್ಟೆ ಹಾರಿಹೋಗದಂತೆ ಹಿಡಿಯುವ ಜಾಣ್ಮೆ ಎರಡನ್ನೂ ವಯಸ್ಸು ತಂದಿರಬಹುದು ....Hopefully!

ಎನ್.ಸಂಧ್ಯಾರಾಣಿ

## ಒಟ್ಟಿಗಿರುವುದೇ ಒಲವಲ್ಲ...



ಹತ್ತು ವರ್ಷಗಳ ಹಿಂದೆ ಕಬ್ಬಳಿ ಜಾತ್ರೆಯಲ್ಲಿ ಕೇಳಿದ ಎಲ್ಲವನ್ನೂ ಕೊಡಿಸಿದ್ದ ಅಪ್ಪ ಜಡೆಗೆ ಕಟ್ಟುವ ಟೇಪನ್ನು ಮಾತ್ರ ನೆಲಕ್ಕೆ ಬಿದ್ದು ಹೊರಳಾಡಿ ಅತ್ತರೂ ಕೊಡಿಸಿರಲಿಲ್ಲ. ಲಂಗದ ಮಡಿಲಲ್ಲಿದ್ದ ಕಂಬಾರಕಟ್ಟು, ಬಾಂಬೆ ಮಿಟಾಯಿ, ಬತ್ತಾಸು ಸುಣ್ಣಕಲ್ಲುಗಳೆಲ್ಲ ಸಿಗದೇ ಹೋದ ಆ ಟೇಪಿನ ಮುಂದೆ ಅವಳಿಗೆ ಸಪ್ಪೆ ಸಪ್ಪೆ ಅನಿಸಿದ್ದವು.

ಮನೆಯಲ್ಲಿ ಜೀತಕ್ಕಿದ್ದ ಅವನು ಜಾತ್ರೆಗೆ ಹೊರಟಾಗ ಇವಳಪ್ಪ ನೀನೂ ಏನಾದರೂ ತಗೋ ಎಂದು ಕೊಟ್ಟ ತಿಂಗಳ ಸಂಬಳ ಹತ್ತು ಪೈಸೆಗೆ ಅವನು ಕೊಂಡಿದ್ದು ಮಾತ್ರ ಒಂದು ಜೊತೆ ಬಿಳೀ ಟೇಪು!

ಸದಾ ನೆರಳಿನಂತೆ ಇವಳ ದೇಕರೇಖಿ ನೋಡಿಕೊಳ್ಳುತ್ತಿದ್ದ ಅವನು ಪಕ್ಕದೂರಿನ ಜಮೀನ್ದಾರ ಕುಳಕ್ಕೆ ಇವಳನ್ನು ಕೊಟ್ಟ ದಿನ ಜಗತ್ತಿನಿಂದಲೇ ಕಾಣೆಯಾಗಿದ್ದ! ಅವಳ ಗಂಡನಾದರೂ ಎಂತವನು? ಮೂವತ್ತು ಎಕರೆ ಮಲ್ಲಿಗೆ ತೋಟವಿದ್ದವನು! ಒಂದು ಸಂಜೆಯಾದರೂ ಇವಳ ಮುಡಿಗೆ ಒಂದು ಮೊಳ ಮಲ್ಲಿಗೆ ಮುಡಿಸುವುದ ಮರೆತವನು. ವಿಶೇಷವೆಂದರೆ ಇವನ ತೋಟದ ಮಲ್ಲಿಗೆ ಊರಾಚೆ ಹಂದಿ ಕಡಿವ ಗಂಗಿಯ ಮುಡಿಯಲ್ಲಿ ಘಮ್ಮೆನ್ನುತ್ತಿದ್ದವು. ಇಷ್ಟಕ್ಕೇ! ಗಂಡನ ಬಿಡಲು ಹೊರಟ ಇವಳ ಗುಂಡಿಗೆ ಬಗೆಯಲು ಜನ ಸುತ್ತುವರೆದಾಗ ಅದೆಲ್ಲಿದ್ದನೋ ಅವನು ಇವಳ ಮಗ್ಗುಲಲ್ಲಿ ಭೀಮನಂತೆ ಎದೆಸೆಟಸಿ ನಿಂತುಬಿಟ್ಟಿದ್ದ!



ಆತನ ತೋಟದಲ್ಲಿ ಅರಳುವ ಏಳುಸುತ್ತಿನ ಮಲ್ಲಿಗೆ ಅವನ ಪಾಲಿಗೆ ಮತ್ತೇರಿಸುವ ಘಮವಾಗಿರಲಿಲ್ಲ. ಘಮವನ್ನು ಮಾರುತ್ತಿದ್ದ, ಅದಕ್ಕಾಗಿ ಬೆಳೆಯುತ್ತಿದ್ದ. ಇಷ್ಟಪಡುವವರನ್ನು ಸೆಳೆಯಲಿಕ್ಕಾಗಿ ಒಂದಷ್ಟು ಮಲ್ಲಿಗೆಯ ಮಡಿಲಿಗೆ ಸುರಿಯುತ್ತಿದ್ದ.

ಕೆ ಜೆ ಲೆಕ್ಕದಲ್ಲಿ ಮಾರುವ ಮಲ್ಲಿಗೆಯನ್ನು ಅವನು ಒಂದು ಮೊಳ ಪ್ರೇಮವಾಗಿಸುವುದನ್ನು ಕಲಿಯಲಿಲ್ಲ...

ಅವಳೂ ಸಹ ನನ್ನದೇ ತೋಟದ ಮಲ್ಲಿಗೆ ಘಮ ಮೊಳವಾಗಿ ಆಚೆ ಗಂಗಿಯ ಜಡೆಯಲ್ಲಿ ಘಮವಾಗುವುದನ್ನು ತಡೆಯಲಿಲ್ಲ.

ಗಂಗೀ ಸಹ ಅದೆಲ್ಲಿಯದೋ ಕೆಂಪುಮಣ್ಣಿನ ಬೇರಿಂದ ಬಂದ ಘಮವನ್ನು ಮುಡಿಗೇರಿಸಿದಳು.

ಇಲ್ಲಿ ಪ್ರೇಮ ಅಂದರೆ ಎಲ್ಲಿ ಸ್ಥಾಯಿಯಾಗಿದೆ...?


ಎಲ್ಲಿ ಚಲನೆಯಾಗಿದೆ ಅಂತ ನಿರ್ಧಾರ ಮಾಡುವುದು ಕಷ್ಟ ಮಾತ್ರವಲ್ಲ... ಮಾಡಬಾರದ ಕೆಲಸ.

ಪ್ರೇಮ ಮಲ್ಲಿಗೆಯಂತೆ. ಬಾಡಿದ ನಂತರವೂ ಖುಷಿಗಾಗಿ ಗೌರವದಿಂದ ನೋಡಬಹುದು.

ಜೀತವಿಮುಕ್ತನಾದ ಅವನು, ಅವನ ಬಿಟ್ಟ ನಾನು, ಮಲ್ಲಿಗೆ ತೋಟದ ಅವನು, ಘಮವ ಮುಡಿಗೇರಿಸಿದ ಗಂಗೀ, ತೋಟ ದಾಟಿ ಆಚೆ ಹೊರಟ ಮೊಳ ಮಲ್ಲಿಗೆಯ ಅಸಹಾಯಕಳಾಗಿ ನೋಡುವ ಅವಳೂ... ಒಟ್ಟಾರೆ... ನಿನ್ನ ಪ್ರೇಮದ ಪರಿಯ ನಾನರಿಯೇ...

ದಯಾ ಗಂಗನಘಟ್ಟ

## ಪ್ರೇಮವೇನು ಹಗುರವೆ?



ಆಕೆಯನ್ನ ಎಲ್ಲಿಬೇಕಂದರಲ್ಲಿ ಮುಟ್ಟದಿದ್ದರೆ ಯಾವಾಗ ಬೇಕಾದಾಗ ಮುಟ್ಟದಿದ್ದರೆ ಅದು ಪ್ರೀತಿಯೇನು? ಒಂದೇಟು ಹೊಡೆಯದಿದ್ದರೇ ಅದ್ಯಾವ ಪ್ರೀತಿ. ಟಿವಿಯಲ್ಲಿ ಕುಳಿತ ನಿರ್ದೇಶಕನೊಬ್ಬ ಹೇಳುತ್ತಿದ್ದರೆ ಹದಿನಾರರ ಹುಡುಗರು ಹೋ ಎಂದು ಶಿಳ್ಳೆಹೊಡೆಯುತ್ತಾರೆ.

ಪ್ರೀತಿಯೆಂದರೆ ಹೀಗೆ ಅಬ್ಬರಿಸಿ ಬೊಬ್ಬಿರಿಯುವುದು ಆಕೆಯನ್ನ ಅಥವಾ ಆತನನ್ನು ಸ್ವತ್ತು ಎಂದು ಭಾವಿಸುವುದು ಬೇಕಾದಾಗ ಬೇಕೆಂದ ತಕ್ಷಣವೇ ದೊರಕುವ ಸುಖವೇ ಪ್ರೀತಿಯೆಂಬುದನ್ನು ಮತ್ತಷ್ಟು ತಲೆಗೆ ತುಂಬುತ್ತಿರುವಂತಹ ವಾತಾವರಣದಲ್ಲಿ ಪ್ರೀತಿಯ ನವಿರುತನವನ್ನಾಗಲಿ ಗೌರವ ಘನತೆಯನ್ನು ಉಳಿಸಿಕೊಳ್ಳುವುದು ಸ್ಥಾಪಿಸುವುದು ಎಷ್ಟು ಸುಲಭವಾದಿತು.

ಅನುಮಾನವಿರದ ಅನುರಾಗವಿಲ್ಲ ಎಂಬ ಮಾತುಗಳನ್ನೇ ನಂಬಿಕೊಂಡು ಬಂದವರಿಗೆ ಉಸಿರುಗಟ್ಟಿಸುವ ತೀವ್ರ ಪ್ರತಿಪಾದನೆಯನ್ನೆ ನಿಜವಾದ ಪ್ರೀತಿಯೆಂದು ನಂಬಿಕೊಂಡು ಬಂದವರಿಗೆ ಪರಸ್ಪರರ ರುಚಿ ಅಭಿರುಚಿಯನ್ನು ಗೌರವಿಸೋಣ ಒಂಚೂರು ಸ್ಪೇಸ್ ಕೊಡೋಣ ಎಂಬ ಮಾತುಗಳು ಹುಸಿ ಅನಿಸ್ಯಾವು. ಮುನಿಸು ತಂದಾವು. ಆದರೆ ಆಕೆ ನಿನ್ನ ಸಂಗಾತಿ ಆಗುವ ಮೊದಲು ಆಕೆಗೆ ಈ ಸಂಬಂಧದ ಹೊರತಾಗಿಯೂ ಒಂದು ವ್ಯಕ್ತಿತ್ವ ಇದೆ ಎಂಬುದುನ್ನ ಹೇಳುವರಾರು?



ಪ್ರೀತಿಗೆ ಒಲಿದ ಹುಡುಗಿಯೋ, ಕಟ್ಟಿಕೊಂಡು ಬಂದ ಹೆಂಡತಿಯೋ ಆಕೆಯನ್ನು ಮುಟ್ಟುವುದು ತಮ್ಮ ಜನ್ಮ ಸಿದ್ಧ ಅಧಿಕಾರ ಅನ್ನೋದು ನಮ್ಮ ಸ್ಪರ್ಶ ಹೀನ ಅಥವಾ ಟಚ್ ಡಿಪ್ರೈವಡ್ಸ್ ಸಮಾಜದ ಧೋರಣೆ.

ಮುಟ್ಟುವುದೆಂದರೆ ಅದೊಂದು ಜವಾಬ್ದಾರಿ, ಪರಸ್ಪರ ಒಪ್ಪಿತ ಒಲವಿನ ಅಭಿವ್ಯಕ್ತಿ. ಮದುವೆಯನ್ನೂ ಸೇರಿದಂತೆ ಯಾವುದೇ ಒಪ್ಪಿತ ಸಂಬಂಧದಲ್ಲಿ ಮನವನ್ನು ತನುವನ್ನು ಜೀವನವನ್ನು ಹಂಚಿಕೊಳ್ಳುತ್ತೇವೆ ಎಂಬುದೊಂದು ಜವಾಬ್ದಾರಿಯುತವಾಗಿ ಮಾಡಿದ ಪ್ರಮಾಣವೇ ಹೊರತು ಹಕ್ಕು ಚಲಾಯಿಸುವ ಸ್ವತ್ತು ಅಲ್ಲ.

ಕೋಪದ ತೀವ್ರತೆಯೋ ಕಾಮದ ಉತ್ಕಟತೆಯೋ ಹಿಂಸೆಯ ರೂಪಕ್ಕಿಳಿದಾಗ ಅದು ಪರಸ್ಪರ ಪ್ರೇಮದಲ್ಲಿರುತ್ತೇವೆಯೆಂಬ ಒಪ್ಪಂದವನ್ನು ಮೀರಿದಂತೆ. ಪ್ರೀತಿಯಲ್ಲಿ ಸಲುಗೆ, ಆಪ್ತತೆ, ನನ್ನವರೆಂಬ ಖಾಸಾತನವನೋ ಸರಿ ಆದರೆ ಆ ಖಾಸಾತನ ಒಂದು ಆಪ್ತ ಭಾವವಾಗಿರಬೇಕೆ ಹೊರತು ಸಂಗಾತಿಯ ದೇಹದ ಮನಸಿನ ಮೇಲೆ ಬೇಕೆಂದಹಾಗೆ ಬೇಕಾದಾಗಲೆಲ್ಲ ಹಕ್ಕು ಚಲಾಯಿಸುವ ಪರವಾನಿಗೆ ಆಗಬಾರದು. ಆತ ಅಥವಾ ಆಕೆ ನಮ್ಮ ಪ್ರೇಮಿಯೇನೋ ಹೌದು ಆದರೆ ಎಲ್ಲದಿಕ್ಕಿಂತ ಮುಖ್ಯವಾಗಿ ಆಕೆಯೊಬ್ಬಳು ಘನತೆಯುಳ್ಳ ವ್ಯಕ್ತಿ ಎಂಬ ಅರಿವು ಮರೆವಾಗದಂತೆ ಇರುವುದು ಪ್ರೇಮ. ಯಾವುದೇ ಕ್ಷಣದಲ್ಲೂ ಆ ಘನತೆಯನ್ನು ಕಳೆದಂತೆ ಕಾಪಾಡಿಕೊಳ್ಳುವುದು ಪ್ರೇಮ. ಘನತೆಯನ್ನು ಕಾಪಿಟ್ಟುಕೊಳ್ಳುವ ಪ್ರತಿದಿನವೂ ಪ್ರೇಮಿಗಳ ದಿನವೇ..

ಮೇಘಾ ಯಲಿಗಾರ್

# ಆಹಹಾ... ಹೆರಳೆಕಾಯಿ

ಕಂಚಿಕಾಯಿ ಕಿತ್ತಳೆ ಜಾತಿಗೆ ಸೇರಿದ್ದು. ಸಾಧಾರಣವಾಗಿ ಮನೆಯ ಹಿತ್ತಿಲು, ತೋಟಗಳಲ್ಲಿ ಒಂದೆರಡು ಮರಗಳಿರುತ್ತವೆ. ಇದಕ್ಕೆ ಹೆರಳೆಕಾಯಿ ಎಂದೂ ಹೇಳುತ್ತಾರೆ. ಇದರಿಂದ ರುಚಿಕರ ಅಡುಗೆ ತಯಾರಿಸಬಹುದು.

ಸೌಖ್ಯ ಮೋಹನ್ ತಲಕಾಲುಕೊಪ್ಪ

### ಕಂಚಿಕಾಯಿ ಗೊಜ್ಜು

**ಸಾಮಗ್ರಿ :** ಕಂಚಿಕಾಯಿ ೧, ಹುಣಿಸೇಹಣ್ಣು ಒಂದು ನೆಲ್ಲಿಕಾಯಿ ಗಾತ್ರದ್ದು, ಉಪ್ಪು, ಬೆಲ್ಲ, ಅರಿಶಿಣಪುಡಿ, ಜೀರಿಗೆ ಒಂದು ಚಮಚ, ಕಾಳುಮೆಣಸು ಕಾಲು ಚಮಚ, ಒಣಮೆಣಸು ೮-೧೦, ಸಾಸಿವೆ ಕಾಲು ಚಮಚ

ಒಗ್ಗರಣೆಗೆ : ಎಣ್ಣೆ, ಸಾಸಿವೆ, ಕರಿಬೇವು, ಒಣಮೆಣಸು

**ವಿಧಾನ :** ಕಂಚಿಕಾಯನ್ನು ಸಣ್ಣಗೆ ಹೆಚ್ಚಿಕೊಂಡು ಉಪ್ಪು, ಅರಿಶಿಣ, ಚೂರು ಬೆಲ್ಲ ಹಾಕಿ ಕಲೆಸಿಟ್ಟುಕೊಳ್ಳಿ. ಜೀರಿಗೆ, ಕಾಳುಮೆಣಸು, ಒಣಮೆಣಸು ಮತ್ತು ಸಾಸಿವೆಯನ್ನು ಬೇರೆ ಬೇರೆಯಾಗಿ ಹುರಿದು ಪುಡಿಮಾಡಿಟ್ಟುಕೊಳ್ಳಿ. ಬಾಣಲೆಯಲ್ಲಿ ಒಗ್ಗರಣೆಗೆ ಇಟ್ಟು ಕಲೆಸಿಟ್ಟ ಕಂಚಿಕಾಯಿ ಹೋಳುಗಳನ್ನು ಹಾಕಿ ಎರಡು ನಿಮಿಷ ಹುರಿಯಿರಿ. ಉಪ್ಪು, ನೆನೆಸಿದ ಹುಣಿಸೇಹಣ್ಣು, ಸ್ವಲ್ಪ ನೀರು ಸೇರಿಸಿ ಚೆನ್ನಾಗಿ ಬೇಯಿಸಿಕೊಳ್ಳಿ. ಸ್ವಲ್ಪ ಬೆಲ್ಲ ಸೇರಿಸಿ. ಕೊನೆಯಲ್ಲಿ ಹುರಿದ ಮಸಾಲೆಪುಡಿ ಹಾಕಿ. ಒಂದೆರಡು ಬಾರಿ ಕೈಯಾಡಿಸಿ ಇಳಿಸಿ.





### ಕಂಚಿಕಾಯಿ ತಂಬುಳಿ

ಕಂಚಿಕಾಯಿ ಒಂದು, ಉಪ್ಪು, ತೆಂಗಿನಕಾಯಿ ಹಾಲು ಒಂದು ಕಪ್, ಹಸಿಮೆಣಸು, ಚೂರು ಬೆಲ್ಲ

ಒಗ್ಗರಣೆಗೆ: ಎಣ್ಣೆ, ಸಾಸಿವೆ, ಒಣಮೆಣಸು

ವಿಧಾನ: ಮೊದಲು ಕಂಚಿಕಾಯಿ ಕತ್ತರಿಸಿ ರಸವನ್ನು ತೆಗೆದುಕೊಳ್ಳಿ. ಅದಕ್ಕೆ ಉಪ್ಪು, ಸ್ವಲ್ಪ ನೀರು, ಚೂರು ಬೆಲ್ಲ ಹಾಕಿ ಕದಡಿ. ಆಮೇಲೆ ಹಸಿಮೆಣಸನ್ನು ಸುಟ್ಟು, ಸೀಳಿ ಅದಕ್ಕೆ ಸೇರಿಸಿ. ನಂತರ ತೆಂಗಿನಕಾಯಿ ಹಾಲು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಕೊನೆಯಲ್ಲಿ ಒಗ್ಗರಣೆ ಕೊಡಿ.


### ಕಂಚಿಕಾಯಿ ಚಟ್ನಿ

ಕಂಚಿಕಾಯಿ ಅರ್ಧ, ಒಂದು ಕೊಬ್ಬರಿ ತುರಿ, ಉಪ್ಪು, ಬೆಲ್ಲ ಚೂರು, ಹುಣಿಸೇಹಣ್ಣು, ಸಾಸಿವೆ, ಜೀರಿಗೆ, ಒಣಮೆಣಸು, ಕಾಳುಮೆಣಸು ಸ್ವಲ್ಪ

ಒಗ್ಗರಣೆಗೆ: ಎಣ್ಣೆ, ಸಾಸಿವೆ, ಜೀರಿಗೆ,

**ವಿಧಾನ:** ಕಂಚಿಕಾಯನ್ನು ಸಣ್ಣಗೆ ಹೆಚ್ಚಿ ಅರಿಶಿಣಪುಡಿ, ಉಪ್ಪು, ಬೆಲ್ಲ ಹಾಕಿ ಕಲೆಸಿಟ್ಟುಕೊಳ್ಳಿ. ಸಾಸಿವೆ, ಜೀರಿಗೆ, ಒಣಮೆಣಸು, ಕಾಳುಮೆಣಸು ಹುರಿದುಕೊಳ್ಳಿ. ನಂತರ ಎಲ್ಲವನ್ನೂ ಸೇರಿಸಿ, ನುಣ್ಣನೆ ರುಬ್ಬಿ. ಒಗ್ಗರಣೆ ಕೊಡಿ.





### ಕಂಚಿಕಾಯಿ ಚಿತ್ರಾನ್ನ

ಕಂಚಿಕಾಯಿ ಒಂದು, ಅನ್ನ ನಾಲ್ಕು ದೊಡ್ಡ ಕಪ್, ಉಪ್ಪು

ಒಗ್ಗರಣೆಗೆ : ಎಣ್ಣೆ, ಸಾಸಿವೆ, ಜೀರಿಗೆ, ಕಡ್ಲೆಬೇಳೆ, ಶೇಂಗಾ, ಗೋಡಂಬಿ, ಹಸಿಮೆಣಸು, ಕರಿಬೇವು, ಅರಿಶಿಣಪುಡಿ

**ವಿಧಾನ:** ಮೊದಲು ಕಂಚಿಕಾಯಿ ಕತ್ತರಿಸಿ, ರಸ ತೆಗೆದುಕೊಳ್ಳಿ. ಮೇಲೆ ಒಗ್ಗರಣೆಗೆ ಹೇಳಿದ ಎಲ್ಲ ಸಾಮಗ್ರಿ ಹಾಕಿ ಒಗ್ಗರಿಸಿಕೊಳ್ಳಿ. ಅದಕ್ಕೆ ಕಂಚಿರಸ, ಉಪ್ಪು ಸೇರಿಸಿ. ನಂತರ ಉದುರಾದ ಅನ್ನವನ್ನು ಹಾಕಿ ಮುದ್ದೆಯಾಗದಂತೆ ಚೆನ್ನಾಗಿ ಮಿಶ್ರಣ ಮಾಡಿ.

# ಸ್ವಪ್ರೀತಿಯ 12 ಸೂತ್ರಗಳು

ಈ ವರ್ಷದ ಮೊದಲ ತಿಂಗಳು ಮುಗಿಯುತ್ತಿರುವಾಗ, ಹೊಸ ವರ್ಷದ ಶುಭಾಶಯ ಕೋರುವ ಮೆಸೇಜೊಂದು ಮತ್ತೆ ಮತ್ತೆ ಎಲ್ಲ ಹೆಂಗಳೆಯರಿಗೂ ಸೆಳೆಯುತ್ತಿದೆ.

ಹೊಸವರ್ಷದ ಶುಭಾಶಯ, ಸಂಕಲ್ಪಗಳೆಲ್ಲವೂ ಕ್ಯಾಲೆಂಡರಿನ ದೂಳಿನೊಂದಿಗೆ ಮಸುಕಾಗುವಾಗ, ಸಾಮಾಜಿಕ ಜಾಲತಾಣದಲ್ಲಿ ವೈದ್ಯರೊಬ್ಬರ ಸಲಹೆ ಇದು ಎಂದು ಹೇಳುತ್ತಲೇ ಮತ್ತೆಮತ್ತೆ ಮಿಂಚತೊಡಗಿದೆ.

ಇಷ್ಟಕ್ಕೂ ಈ ಸಂದೇಶ ಹೇಳುವುದೇನು? ನಿಮ್ಮನ್ನು ನೀವು ಪ್ರೀತಿಸಿ, ನಿಮಗಾಗಿ ನೀವು ಬದುಕಲು ಆರಂಭಿಸಿ ಎಂದು ಹೇಳುತ್ತ ಹತ್ತು ಸಲಹೆಗಳನ್ನು ನೀಡಿದೆ.

**1.** ಒಂದೇ ದಿನ, ನೀವೊಬ್ಬರೇ ಮನೆಯ ಎಲ್ಲ ಕೆಲಸಗಳನ್ನೂ ಪೂರೈಸಲೇಬೇಕೆಂಬ ಹಟ ಹಿಡಿಯಬೇಡಿ. ಹೀಗೆ ಎಲ್ಲವನ್ನೂ ಮಾಡಿದವರು ಯಾರೂ ಇಲ್ಲ. ಇದ್ದರೂ ಅವರೀಗ ರೋಗಿಗಳಾಗಿದ್ದಾರೆ ಅಥವಾ ಗೋರಿಗಳಲ್ಲಿ ವಿಶ್ರಮಿಸುತ್ತಿದ್ದಾರೆ.

**2.** ವಿರಮಿಸಲು ಸಮಯ ಮಾಡಿಕೊಳ್ಳಿ. ಕೆಲವೊಮ್ಮೆ ಸುಮ್ಮನೆ ಕೂರುವುದು ಅಪರಾಧವೇನಲ್ಲ. ಚೂಡಾದೊಂದಿಗೆ ಚಹಾ ಸವಿಯುತ್ತ, ಪುಸ್ತಕ ಓದುತ್ತ, ಪಾಪ್‌ಕಾರ್ನ್ ಮಾಡಿಕೊಂಡು ತಿನ್ನುತ್ತ ಟೀವಿ ನೋಡುವುದೋ, ಆರಾಮವಾಗಿ ಓದುವೂದೊ ಯಾವುದೂ ತಪ್ಪಲ್ಲ. ಸಮಯ ಮಾಡಿಕೊಳ್ಳದೇ ಇರುವುದು ತಪ್ಪು. ನಮಗಾಗಿ ಸಮಯ ಮಾಡಿಕೊಳ್ಳದೇ ಇದ್ದಾಗ, ಉಳಿದವರಿಗಾಗಿಯೇ ಜೀವ ಸವೆಸುತ್ತಿದ್ದೇವೆ ಎಂಬ ಭಾವ ಬಂದರೆ ಮನಸು ತಪ್ತವಾಗುತ್ತದೆ. ಅದರ ಬದಲಿಗೆ ನಿಮಗಾಗಿ ಚೂರು ಆರಾಮ ಮಾಡಿ. ಖುಷಿಯಾಗಿರಿ.

**3.** ಒಂತುಸು ಕಣ್ಮುಚ್ಚಿ. ಆಗಾಗ ಕಾಡುವ ತಲೆನೋವು ಓಡಿಹೋಗುತ್ತದೆ. ಸಣ್ಣದಾಗಿ ತಲೆ ಸಿಡಿಯುವ, ಸಿಡಿಮಿಡಿಗೊಳ್ಳುವ ನಮಗೆ, ಸಣ್ಣದೊಂದು ನಿದ್ದೆಯ ಅಗತ್ಯವೂ ಇರುತ್ತದೆ. ಕಣ್ಮುಚ್ಚಬೇಕೆನಿಸಿದಾಗ ಸಣ್ಣದೊಂದು ನಿದ್ದೆ ಮಾಡಿ.

**4.** ನಿದ್ದೆಗೆಡುವವರು, ನಿದ್ದೆಗಾಗಿ ಮಾತ್ರೆ ತೆಗೆದುಕೊಳ್ಳುವುದನ್ನು ನಿಲ್ಲಿಸಿ. ಅವು ನಿಮ್ಮ ನೆನಪಿನ ಶಕ್ತಿಯನ್ನು, ತಾರ್ಕಿಕ ಶಕ್ತಿಯನ್ನು ಕ್ಷೀಣಗೊಳಿಸುತ್ತವೆ. ಕ್ರಮೇಣ ಮರೆವು ಉಂಟಾಗುತ್ತದೆ. ಸುಖ ನಿದ್ದೆಗಾಗಿ, ಮೆದುಳಿಗೆ ವಿಶ್ರಾಂತಿ ನೀಡಿ. ಚಿಂತೆ ಕಡಿಮೆ ಮಾಡಿ, ಹೆಚ್ಚು ಹೆಚ್ಚು ಮುಗುಳ್ನಗುತ್ತಿರಿ. ನಗುನಗುತ್ತಲಿರಿ. ಎಲ್ಲ ಸಮಸ್ಯೆಗಳೂ ಸಮಯದೊಂದಿಗೆ ಪರಿಹಾರ ಪಡೆಯುತ್ತಲೇ ಬರುತ್ತವೆ.

**5.** ಕೆಲವೊಮ್ಮೆ ಮನೆಯಿಂದಾಚೆ ಬನ್ನಿ. ತಾರಸಿ ಅಥವಾ ಬಾಲ್ಕನಿಯಲ್ಲಿ ಸುಮ್ಮನೆ ಕೂರಿ. ಸೃಷ್ಟಿಕರ್ತನ ಸೋಜಿಗವನ್ನು ಗಮನಿಸಿ. ಆಕಾಶವನ್ನು ನೋಡಿ, ಬಾಹ್ಯಜಗತ್ತಿನ ಧಾವಂತವನ್ನು ಗಮನಿಸಿ. ನೋಡುತ್ತಲಿರಿ. ತಾಜಾ ಗಾಳಿಯನ್ನು ನಿಧಾನವಾಗಿ ಉಸಿರಾಡುತ್ತ, ಜಗತ್ತಿನ ಆಗುಹೋಗುಗಳನ್ನು ನೋಡುತ್ತಲಿರಿ. ಆಗ ಉತ್ಸಾಹವನ್ನು ಒಳಗೆಳೆದುಕೊಳ್ಳುತ್ತ, ನಿರಾಸಕ್ತಿಯನ್ನು ನಿಶ್ವಾಸದೊಂದಿಗೆ ಆಚೆ ದಬ್ಬಬಹುದು.



**6.** ಕನ್ನಡಿಯ ಮುಂದೆ ನಿಮ್ಮ ಬಿಂಬ ನೋಡಿ, ನಿಮ್ಮ ನಗೆಯನ್ನು ಮೋಹಿಸಿ. ಕೆಲವು ಹೆಜ್ಜೆಗಳನ್ನು ಹಾಕಿ, ಹಾಡು ಹಾಡಿ. ಇವೆಲ್ಲವೂ ಸಂತಸವನ್ನು ಹುಟ್ಟುಹಾಕುತ್ತವೆ. ಜೊತೆಗೆ ನಿಮ್ಮ ಸುತ್ತಲೂ ಸಕಾರಾತ್ಮಕವಾದ ಪ್ರಭಾವಳಿಯನ್ನು ಸೃಷ್ಟಿಸುತ್ತವೆ.

**7.** ವಾರದಲ್ಲಿ ಒಮ್ಮೆಯಾದರೂ ನಿಮಗಿಷ್ಟದ ತಿಂಡಿಯನ್ನು ಮಾಡಿ ತಿನ್ನಿ. ನಿಮಗಿಷ್ಟದ ಪಾನೀಯವನ್ನು ಸೇವಿಸಿ. ನಿಮಗಾಗಿ ಏನಾದರೂ ಮಾಡಿ, ಇದು ತಲೆಭಾರವನ್ನು, ಭಾವನಾತ್ಮಕವಾದ ಭಾರವನ್ನು ಕಡಿಮೆಗೊಳಿಸುತ್ತದೆ.

**8.** ಬಲುಮುಖ್ಯವಾಗಿ ನಿಮಗೆ ಅಗತ್ಯವಿರುವ ಗ್ಯಾಡ್ಜೆಟ್ಸ್ ಗಳನ್ನು ಖರೀದಿಸಿ. ಮನೆ ಕೆಲಸ ಹಗುರವಾಗಿಸಿಕೊಳ್ಳಿ. ವಾಷಿಂಗ್ ಮಷಿನ್, ಡಿಷ್ ವಾಷರ್, ವ್ಯಾಕ್ಯುಮ್ ಕ್ಲೀನರ್ ಇಂಥವುಗಳನ್ನು ಖರೀದಿಸಿ. ನಿಮ್ಮ ಕೆಲಸ ಮುಗಿಸುವ ಧಾವಂತ ಮತ್ತು ಒತ್ತಡವನ್ನು ಇವು ಕಡಿಮೆ ಮಾಡುತ್ತವೆ. ಇವನ್ನೆಲ್ಲ ಬಳಸುವುದು ಮನೆಯ ಎಲ್ಲ ಸದಸ್ಯರೂ ಕಲಿತಿರಲಿ. ನೀವು ಖರೀದಿಸಿದ್ದು, ನಿಮ್ಮದೇ ಜವಾಬ್ದಾರಿ ಆಗದಿರಲಿ.

**9.** ಒಂದು ವೇಳೆ ನಿಮಗೆ ಹುಷಾರಿರದಿದ್ದಲ್ಲಿ, ಇರುಸು ಮುರುಸು ಆಗುತ್ತಿದ್ದಲ್ಲಿ, ಮನೆಯ ಸದಸ್ಯರೊಂದಿಗೆ ಮುಕ್ತವಾಗಿ ಮಾತಾಡಿ. ಅವರೇ ಅರ್ಥ ಮಾಡಿಕೊಳ್ಳಲಿ ಎಂದು ಕಾಯಬೇಡಿ. ನಿರೀಕ್ಷಿಸಬೇಡಿ. ಮಾತಾಡುವದರಿಂದ ಮನಸು ಹಗುರ ಆಗುವುದು ಅಷ್ಟೇ ಅಲ್ಲ, ಸಕಾಲದಲ್ಲಿ ಚಿಕಿತ್ಸೆ, ಸಹಾಯ ಎಲ್ಲವೂ ದೊರೆಯುತ್ತದೆ. ಈ ಜೀವ ನಿಮ್ಮದು. ದೇಹವೂ ನಿಮ್ಮದು. ನಿಮ್ಮ ನೋವನ್ನು ನೀವೇ ಅನುಭವಿಸಬೇಕೆ ಹೊರತು ಇನ್ನೊಬ್ಬರಿಗೆ ಎರವಲು ನೀಡಲು ಆಗದು. ಕೂಡಲೇ ಮನೆಯ ಸದಸ್ಯರಿಗೆ ಹೇಳಿ. ವೈದ್ಯರ ಬಳಿ ಹೋಗಲು ವಿಳಂಬ ಮಾಡಬೇಡಿ.

**10.** ಆಗಾಗ ರಕ್ತದ ಏರೊತ್ತಡ, ಮಧುಮೇಹ, ಥೈರಾಯ್ಡ್, ಬಿ 12, ವಿಟಾಮಿನ್ ಡಿ ಇವುಗಳನ್ನು ತಪಾಸಣೆ ಮಾಡಿಸಿಕೊಳ್ಳಿ. ಸಾಮಾನ್ಯವಾಗಿ ಮಹಿಳೆಯರು ಇಂಥ ತಪಾಸಣೆಗಳಿಂದ ದೂರ ಇರುತ್ತಾರೆ. ಹುಷಾರಿರಲಿ, ಬಿಡಲಿ ಆಗಾಗ ತಪಾಸಣೆಗೆ ಒಳಪಡುವುದರಿಂದ ದೊಡ್ಡ ದೊಡ್ಡ ಅಪಾಯಗಳಿಂದ ಮಹಿಳೆಯರು ಪಾರಾಗಿರುವ ಉದಾಹರಣೆಗಳು ಸಾಕಷ್ಟಿವೆ.

**11.** ಆಗಾಗ ರಜೆ ಹಾಕಿ. ಸ್ನೇಹಿತೆಯರನ್ನು ಭೇಟಿ ಮಾಡಿ. ನಿಮ್ಮ ದಿನನಿತ್ಯದ ಬದುಕಿನಿಂದ ಬಿಡುವು ಮಾಡಿಕೊಳ್ಳಿ. ಪ್ರವಾಸ ಕೈಗೊಳ್ಳಿ. ಮನೆಯವರು ನಿಮ್ಮನ್ನು ಮಿಸ್ ಮಾಡಿಕೊಂಡಾಗಲೇ ನಿಮ್ಮ ಕುರಿತು ಪ್ರೀತಿ, ಗೌರವವೂ ಹೆಚ್ಚುತ್ತದೆ. ಅವಲಂಬನೆಯೂ ಕಡಿಮೆ ಆಗುತ್ತದೆ.

**12.** ಉಳಿದೆಲ್ಲರಂತೆ ಮಹಿಳೆಯರದ್ದೂ ಒಂದು ಜೀವ. ಒಂದೇ ಜೀವನ. ನೆಮ್ಮದಿಯಾಗಿ ಕಳೆಯಲು ಜೀವನಪ್ರೀತಿ ಬೆಳೆಸಿಕೊಳ್ಳಲು, ಜೀವ ಖುಷಿಯಾಗಿರಲು, ಸದಾ ಸುಖಿಯಾಗಿರಲು ಈ ಹನ್ನೊಂದು ಸೂತ್ರಗಳನ್ನು ಮರೆಯಬೇಡಿ ಎಂಬುದೇ ಹನ್ನೆರಡನೆಯ ಸೂತ್ರವಾಗಿದೆ.

# ಹೃದಯದೊಳು ಇದೇನಿದು..

**ಮಮತೆ,** ವಾತ್ಸಲ್ಯ, ಪ್ರೀತಿ, ಪ್ರೇಮಗಳ ಒರತೆಹುಟ್ಟಿಸುವ ಮಹಿಳೆಯರ ಹೃದಯದಲ್ಲಿ ಅಸೂಯೆ ಸಹ ಮನೆ ಮಾಡಿರುತ್ತದೆ. ಪ್ರೀತಿಯ ಮತ್ತು ಪ್ರೀತಿಪಾತ್ರರ ವಿಷಯ ಬಂದಾಗಲಂತೂ ಈ ಮನೆಯಲ್ಲಿ ಎಲ್ಲಿಲ್ಲದ ಸದ್ದುಗದ್ದಲವೇಳುತ್ತದೆ.

ಇದು ಪಡೆಯುವ ಹಟ, ಪ್ರೀತಿಸುವ ವ್ಯಕ್ತಿಯ ಸಂಪೂರ್ಣ ಸಮಯ ತನಗೇ ದಕ್ಕಲಿ ಎಂಬ ಛಲ ಇವೆರಡೂ ಅಸೂಯೆಯ ಮೂಲ ಕಾರಣವಾಗಿರುತ್ತದೆ. ಇದನ್ನು ಮೀರಿ ಬೆಳೆಯುವುದು ಸುಲಭ. ಆದರೆ ಆ ಕ್ಷಣದಲ್ಲಿ ಪ್ರೀತಿಯ ಸಂಗಾತಿ ಮತ್ತು ಸಂಗಾತಿಯ ಪ್ರೀತಿ ಇವೆರಡರ ನಡುವೆ ಜೀಕುವ ಮನ ಆ ಕಡೆ ಗಮನಕೊಡದೆ, ವಿನಾಕಾರಣ ಕಿರಿಕಿರಿ, ಜಗಳ ಮಾಡಿಕೊಂಡು ಮನಸು ಕಹಿಯಾಗಿಸಿಕೊಳ್ಳುವುದೇ ಹೆಚ್ಚು.

ಅಸೂಯೆಯನ್ನು ಮೀರಲು, ಸಂಗಾತಿಯ ಆಯ್ಕೆ ಮತ್ತು ಆದ್ಯತೆಗಳನ್ನು ಅರ್ಥ ಮಾಡಿಕೊಳ್ಳಿ. ನಿಮ್ಮ ಆಯ್ಕೆ ಮತ್ತು ಆದ್ಯತೆಗಳನ್ನೂ ಅದರೊಟ್ಟಿಗೆ ಹೊಂದಿಸಿ ನೋಡಿ,



ಕೆಲವೊಮ್ಮೆ ಅಸೂಯೆ ಮೇಲುಗೈ ಸಾಧಿಸಿದಾಗ ಜಗಳಗಳಿಂದ, ಇರುವ ರಸನಿಮಿಷಗಳನ್ನೂ ವಿರಸಕ್ಕೆ ತಳ್ಳುವ ಸಾಧ್ಯತೆಗಳಿರುತ್ತವೆ. ಸಂಗಾತಿಯನ್ನು ಕಳೆದುಕೊಳ್ಳುವ ಸಣ್ಣದೊಂದು ಭೀತಿ, ಎಲ್ಲಿ ನಮ್ಮಿಂದ ವಿಮುಖರಾಗುವರೋ ಎಂಬ ಆತಂಕ, ನಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದ್ದೇವೆಯೇ ಎಂಬ ಅಸುರಕ್ಷಿತ ಭಾವವೂ ಈರ್ಷೆಯ ಮೂಲವಾಗಿರುತ್ತದೆ.

ಅಂಥ ಸಂದರ್ಭಗಳಲ್ಲಿ, ಈರ್ಷೆಯನ್ನು ಕಣ್ಣುಹಿಗ್ಗಲಿಸಿ, ಸುಮ್ಮನೆ ಕೂರಿಸಿ, ನಗುನಗುತ್ತ ಎಲ್ಲವನ್ನೂ ಎದುರಿಸುವಷ್ಟು ಧಾರಾಳವಾಗಿ ಪ್ರೀತಿ ಹಂಚಿ.

ನಿಮ್ಮ ಆತಂಕ, ಅಸುರಕ್ಷಿತ ಭಾವವನ್ನು ಸಂಗಾತಿಯೊಡನೆ ಚರ್ಚಿಸಿ. ಮೊದಲು ಸಿಲ್ಲಿ ಎನಿಸಿದರೂ ನಂತರ ನಿಮ್ಮ ಬಗ್ಗೆ ಆದರವೇ ಬೆಳೆಯುತ್ತದೆ. ಜೊತೆಗೆ ಪ್ರೀತಿಯೂ ಹೆಚ್ಚುತ್ತದೆ. ಇದು ಹೃದಯವನ್ನು ಸುರಕ್ಷಿತವಾಗಿಡುತ್ತದೆ. ಅಲ್ಲಿ ಭೀತಿ, ಆತಂಕ, ಕೋಪ, ರೋಷಗಳು ಮೂಡದಂತೆ ನೋಡಿಕೊಳ್ಳುತ್ತದೆ. ನಮ್ಮ ಪ್ರೀತಿಯನ್ನು ನಾವೇ ಕಳೆದುಕೊಳ್ಳದಂತಿರಲು, ನಮ್ಮ ಹೃದಯದಲ್ಲಿ ವೇದನೆಗೆ ತಾವು ಕೊಡದೇ ಇರಬೇಕೆಂದರೆ ಈರ್ಷೆಯನ್ನು ದೂರವಿಡಿ. ಮುಕ್ತವಾಗಿ ಪ್ರೀತಿ ಮಾಡಿ.

'ಗುಂಡಿಟ್ಟು ಕೊಲ್ಲುವ ಕಾನೂನು ಜಾರಿಗೆ ಒತ್ತಾಯಿಸಿದ್ದೇನೆ ಅಷ್ಟೇ': ಸ್ಪಷ್ಟನೆ

# ಈಶ್ವರಪ್ಪ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ದಾವಣಗೆರೆ: ದೇಶ ವಿಭಜನೆಯ ಹೇಳಿಕೆ ನೀಡುವವರನ್ನು ಗುಂಡಿಕ್ಕಿ ಕೊಲ್ಲುವ ಕಾನೂನು ತರಲು ಒತ್ತಾಯಿಸುತ್ತೇನೆ ಎಂದು ಹೇಳಿಕೆ ನೀಡಿರುವ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ವಿರುದ್ಧ ಇಲ್ಲಿನ ಬಡಾವಣೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಈ ವಿಷಯವನ್ನು ಖಚಿತ ಪಡಿಸಿದ್ದಾರೆ.

'ಕೆ.ಎಸ್.ಈಶ್ವರಪ್ಪ ಅವರು ದಾವಣಗೆರೆಯಲ್ಲಿ ಗುರುವಾರ ನಡೆದಿದ್ದ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ನೀಡಿದ್ದ ಹೇಳಿಕೆಯು ಜನ, ಸಮುದಾಯ, ಗುಂಪುಗಳ ನಡುವೆ ದ್ವೇಷ ಭಾವನೆ ಉಂಟು ಮಾಡುವಂತಿದೆ. ಗಲಭೆಗಳು ಜರುಗುವಂತೆ ಎಂದು ಗೊತ್ತಿದ್ದರೂ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ ಸಂಭವವಿದೆ.

**ಕೆ.ಎಸ್.ಈಶ್ವರಪ್ಪ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ**
**ಜಿ.ಪರಮೇಶ್ವರ**, ಗೃಹ ಸಚಿವ

ಆದ್ದರಿಂದ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದಾವಣಗೆರೆಯ ನಿಟುವಳ್ಳಿ ಬಡಾವಣೆಯ ಹನುಮಂತ ಎಂಬುವರು ದೂರು ನೀಡಿದ್ದಾರೆ.

**'ಕಾನೂನು ಜಾರಿಗೆ ಒತ್ತಾಯಿಸಿದ್ದೇನೆ ಅಷ್ಟೇ' (ಶಿವಮೊಗ್ಗ ವರದಿ):** 'ರಾಷ್ಟ್ರದ್ರೋಹಿಗಳನ್ನು ಗುಂಡಿಟ್ಟು ಕೊಲ್ಲುವ ಕಾನೂನು ಜಾರಿಗೆ ತರುವಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದೇನೆಯೇ ಹೊರತು ಯಾರನ್ನೋ ಗುಂಡಿಟ್ಟು ಕೊಲ್ಲುವಂತೆ ನಾನು ಹೇಳಿಲ್ಲ' ಎಂದು ಈಶ್ವರಪ್ಪ ಸ್ಪಷ್ಟಪಡಿಸಿದರು.

ದಾವಣಗೆರೆಯ ಬಡಾವಣೆ ಪೊಲೀಸ್ ಠಾಣೆಯಲ್ಲಿ ತಮ್ಮ ವಿರುದ್ಧ ಎಫ್‌ಐಆರ್ ದಾಖಲಾಗಿರುವ ಹಿನ್ನೆಲೆಯಲ್ಲಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ಗ್ಯಾರಂಟಿ ಯೋಜನೆಗಳಿಂದ ರಾಜ್ಯ ದಿವಾಳಿಯಾದ ಮೇಲೆ ಕಾಂಗ್ರೆಸ್‌ನವರಿಗೆ ವಿಷಯವೇ ಇಲ್ಲವಾಗಿದೆ. ಇಂತಹ ಏನೇನೋ ವಿಷಯಗಳನ್ನು ತೆಗೆಯುತ್ತಿದ್ದಾರೆ' ಎಂದು ಲೇವಡಿ ಮಾಡಿದರು.

'ವಿಚಾರಣೆ ನಡೆಯಲಿ. ನ್ಯಾಯಾಲಯ ದೇಶದ್ರೋಹಿಗಳಿಗೆ ಮನ್ನಣೆ ನೀಡುತ್ತದೆಯೋ, ರಾಷ್ಟ್ರ ಭಕ್ತರಿಗೆ ಮನ್ನಣೆ ನೀಡುತ್ತದೆ ಎಂಬುದು ಆಗ ಗೊತ್ತಾಗುತ್ತದೆ' ಎಂದು ತಿಳಿಸಿದರು.

## ಆರ್‌ಎಸ್‌ಎಸ್ ಬಾಗಿಲು ಮುಚ್ಚಬೇಕಾಗುತ್ತದೆ: ಪ್ರಿಯಾಂಕ್ ಖರ್ಗೆ ವ್ಯಂಗ್ಯ

ಕಲಬುರಗಿ: 'ದೇಶದ್ರೋಹಿಗಳನ್ನು ಗುಂಡಿಕ್ಕಿ ಕೊಲ್ಲಬೇಕು' ಎಂಬ ಕೆ.ಎಸ್. ಈಶ್ವರಪ್ಪ ಹೇಳಿಕೆಯನ್ನು ಅನುಷ್ಠಾನಕ್ಕೆ ತಂದರೆ ಆರ್‌ಎಸ್‌ಎಸ್ ಕಚೇರಿಗಳ ಬಾಗಿಲನ್ನು ಮುಚ್ಚಬೇಕಾಗುತ್ತದೆ. ಅದೇ ರೀತಿ ಬಿಜೆಪಿ ನಾಯಕರು ಜೈಲಿಗೆ ಹೋಗಬೇಕಾಗುತ್ತದೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ವ್ಯಂಗ್ಯವಾಡಿದರು. 'ಈಶ್ವರಪ್ಪ ಅವರಿಗೆ ಕಳೆದ ವಿಧಾನಸಭೆಯಲ್ಲಿ ಟಿಕೆಟ್ ಸಿಗದೇ ಇರುವುದರಿಂದ ನಿರುದ್ಯೋಗಿಯಾಗಿದ್ದಾರೆ. ಹೀಗಾಗಿ, ಏನೇನೋ ಹೇಳಿಕೆ ನೀಡುತ್ತಿದ್ದಾರೆ. ಹೇಗೂ ಅವರಿಗೆ ಪಕ್ಷದ ಕೆಲಸ ಇಲ್ಲದಿರುವುದರಿಂದ ಬೆಳಿಗ್ಗೆ ಭಜನೆ, ಸಂಜೆ ಹನುಮಾನ್ ಚಾಲೀಸಾ ಪಠಿಸುತ್ತಾ ಮನೆಯಲ್ಲಿ ಕುಳಿತುಕೊಳ್ಳಲಿ' ಎಂದರು.

## ಹೊಡಿ – ಬಡಿ ಭಾಷೆ: ಸಿ.ಎಂ

'ಕೆ.ಎಸ್.ಈಶ್ವರಪ್ಪ ಅವರಿಗೆ ಹೊಡಿ, ಬಡಿ, ಕಡಿ, ಕೊಲ್ಲು, ಕತ್ತರಿಸು, ತರಿ ಎಂಬ ಭಾಷೆ ಬಿಟ್ಟು ಬೇರೆ ಏನೂ ಬರುವುದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದಲ್ಲಿ ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, 'ಈಶ್ವರಪ್ಪ ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ (ಆರ್‌ಎಸ್‌ಎಸ್) ತರಬೇತಿ ಪಡೆದಿರುವುದರಿಂದ ಹೀಗೆಲ್ಲ ಹೇಳಿಕೊಳ್ಳುತ್ತಾರೆ. ಅಲ್ಲಿ ಇಂತಹ ತರಬೇತಿ ನೀಡುತ್ತಾರೆಯೇ' ಎಂದು ಕುಟುಕಿದರು.

## 'ರಾಜ್ಯ ಸರ್ಕಾರದ ಕಮಿಷನ್ ದಂಧೆ ಶೇ 80'

ಬೆಂಗಳೂರು: 'ರಾಜ್ಯದ ಕಾಂಗ್ರೆಸ್ ಸರ್ಕಾರದಲ್ಲಿ ಕಮಿಷನ್ ದಂಧೆ ಶೇ 40 ಅಲ್ಲ, ಶೇ 80ರವರೆಗೂ ತಲುಪಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರು ರಾಜ್ಯ ಸರ್ಕಾರದ ವಿರುದ್ಧ ಮಾಡಿರುವ ಶೇ 40 ಕಮಿಷನ್ ಆರೋಪಕ್ಕೆ 'ಎಕ್ಸ್' ಮೂಲಕ ಪ್ರತಿಕ್ರಿಯೆ ನೀಡಿರುವ ಅವರು, ಕಮಿಷನ್ ವಸೂಲಿಗೆ ನಿಯುಕ್ತಿ ಆಗಿರುವ ಅಧಿಕಾರಿಗಳ ವಿವರವನ್ನು ಧೈರ್ಯವಾಗಿ ಬಹಿರಂಗಪಡಿಸಲಿ. ಆಗ ಅದರ ಹಿಂದಿರುವ 'ಮುಖ್ಯ', 'ಉಪಮುಖ್ಯ' ಸೂತ್ರಧಾರಿಗಳ ನೈಜ ಮುಖವಾಡ ಕಳಚುತ್ತದೆ ಎಂದು ಹೇಳಿದ್ದಾರೆ.

# ಶೂ ನಿಷೇಧ; ಚಪ್ಪಲಿ ಧರಿಸಿದ ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶ

1,137 ಸಿವಿಲ್ ಕಾನ್‌ಸ್ಟೆಬಲ್ ಹುದ್ದೆಗಳ ನೇಮಕ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 1,137 ಸಿವಿಲ್ ಕಾನ್‌ಸ್ಟೆಬಲ್ (ಪುರುಷ, ಮಹಿಳೆ ಹಾಗೂ ತೃತೀಯ ಲಿಂಗಿ) ಹುದ್ದೆಗಳ ಭರ್ತಿಗಾಗಿ ಫೆ. 25ರಂದು ರಾಜ್ಯದಾದ್ಯಂತ ಲಿಖಿತ ಪರೀಕ್ಷೆ ನಡೆಸಲು ನೇಮಕಾತಿ ವಿಭಾಗ ಸಿದ್ಧತೆ ಮಾಡಿಕೊಳ್ಳುತ್ತಿದೆ.

ಅಭ್ಯರ್ಥಿಗಳು ಶೂ ಧರಿಸಿ ಪರೀಕ್ಷಾ ಕೇಂದ್ರದೊಳಗೆ ಹೋಗುವುದನ್ನು ನಿಷೇಧಿಸಲಾಗಿದೆ. ವಸ್ತ್ರ ಸಂಹಿತೆ ನಿಯಮವನ್ನೂ ವಿಧಿಸಲಾಗಿದೆ.

'ರಾಜ್ಯದ ವಿವಿಧ ಕೇಂದ್ರಗಳಲ್ಲಿ ಬೆಳಿಗ್ಗೆ 11 ಗಂಟೆಯಿಂದ 12.30 ಗಂಟೆಯವರೆಗೆ ಪರೀಕ್ಷೆ ನಡೆಯಲಿದೆ. ಪರೀಕ್ಷೆಯ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅನುಕೂಲವಾಗುವಂತೆ ಅರ್ಹ ಅಭ್ಯರ್ಥಿಗಳ ಮೊಬೈಲ್‌ಗೆ ಲಿಂಕ್ ಕಳುಹಿಸಲಾಗುವುದು. ಅಭ್ಯರ್ಥಿಗಳು ಪ್ರವೇಶ ಪತ್ರ ಪಡೆದುಕೊಂಡು, ನಿಗದಿತ ಕೇಂದ್ರಕ್ಕೆ ಹಾಜರಾಗಬೇಕು' ಎಂದು ನೇಮಕಾತಿ ವಿಭಾಗದ ಡಿಐಜಿ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಅವರು ತಿಳಿಸಿದ್ದಾರೆ.

ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ವಸ್ತ್ರ ಸಂಹಿತೆ ಪಾಲಿಸುವುದು ಕಡ್ಡಾಯವೆಂದು ಡಿಐಜಿ ಹೇಳಿದ್ದಾರೆ. ವಸ್ತ್ರ ಸಂಹಿತೆ ವಿವರ ಇಂತಿದೆ.

### ವಸ್ತ್ರಸಂಹಿತೆ

**ಪುರುಷ ಮತ್ತು ಲಿಂಗತ್ವ ಅಲ್ಪಸಂಖ್ಯಾತ ಪುರುಷ ಅಭ್ಯರ್ಥಿಗಳಿಗೆ:**
- ಅರ್ಧ ತೋಳಿನ ಅಂಗಿ ಧರಿಸಬೇಕು. ಸಾಧ್ಯವಾದಷ್ಟು ಕಾಲರ್ ರಹಿತ ಅಂಗಿ ಇರಬೇಕು. ಹೆಚ್ಚು ಜೇಬು ಇರುವ ಹಾಗೂ ದೊಡ್ಡ ಬಟನ್ ಇರುವ ಅಂಗಿ ಧರಿಸಬಾರದು
- ಜೀನ್ಸ್ ಪ್ಯಾಂಟ್ ಹಾಗೂ ಹೆಚ್ಚು ಜೇಬು ಇರುವ ಪ್ಯಾಂಟ್ ಧರಿಸುವಂತಿಲ್ಲ
- ಪರೀಕ್ಷಾ ಕೇಂದ್ರದೊಳಗೆ ಶೂಗಳನ್ನು ನಿಷೇಧಿಸಲಾಗಿದೆ. ತೆಳುವಾದ ಅಡಿಭಾಗವಿರುವ ಪಾದರಕ್ಷೆಗಳನ್ನು (ಚಪ್ಪಲಿ) ಧರಿಸಬೇಕು
- ಕುತ್ತಿಗೆ ಸುತ್ತ ಯಾವುದೇ ಲೋಹದ ಆಭರಣ, ಉಂಗುರ ಹಾಗೂ ಇತರೆ ಅನಾವಶ್ಯಕ ವಸ್ತುಗಳನ್ನು ಧರಿಸುವಂತಿಲ್ಲ

**ಮಹಿಳೆ ಮತ್ತು ಲಿಂಗತ್ವ ಅಲ್ಪಸಂಖ್ಯಾತ ಮಹಿಳಾ ಅಭ್ಯರ್ಥಿಗಳಿಗೆ:**
- ವಿಸ್ತಾರವಾದ ಕಸೂತಿ, ಹೂಗಳು, ಬ್ರೂಚ್‌ಗಳು ಅಥವಾ ಬಟನ್‌ಗಳು ಇರುವ ಬಟ್ಟೆಗಳನ್ನು ಧರಿಸಬಾರದು
- ಪೂರ್ಣ ತೋಳಿನ ಬಟ್ಟೆಗಳು ಹಾಗೂ ಜೀನ್ಸ್ ಪ್ಯಾಂಟ್ ಧರಿಸಬಾರದು. ಮುಜುಗರವಾಗದಂತೆ ಅರ್ಧ ತೋಳಿನ ಬಟ್ಟೆಗಳನ್ನು ಧರಿಸಲು ಅವಕಾಶವಿದೆ
- ಎತ್ತರವಾದ ಹಿಮ್ಮಡಿ ಇರುವ, ದಪ್ಪವಾದ ಅಡಿಭಾಗ ಹೊಂದಿರುವ ಶೂ/ಚಪ್ಪಲಿ ಧರಿಸಬಾರದು. ತೆಳುವಾದ ಅಡಿಭಾಗ ಹೊಂದಿರುವ ಚಪ್ಪಲಿ ಧರಿಸುವುದು ಕಡ್ಡಾಯ
- ಲೋಹದ ಆಭರಣಗಳನ್ನು ಧರಿಸುವುದು ನಿಷೇಧ (ಮಾಂಗಲ್ಯ ಸರ ಹಾಗೂ ಕಾಲುಂಗುರ ಬಿಟ್ಟು)

# ಅತ್ಯಾಚಾರ ಆರೋಪ: ಬಂಧನ

ಆಲ್ದೂರು: ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದಲ್ಲಿ ರುಮನ್(21) ಎಂಬ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ. ನೈತಿಕ ಪೊಲೀಸ್‌ಗಿರಿ ನಡೆಸಿದ ಆರೋಪದಲ್ಲಿ ಬಜರಂಗದಳದ ಏಳು ಕಾರ್ಯಕರ್ತರನ್ನೂ ಪೊಲೀಸರು ಬಂಧಿಸಿದ್ದಾರೆ.

'ಡ್ಯಾನ್ಸ್ ಮಾಸ್ಟರ್ ಆಗಿರುವ ರುಮನ್ 17 ವರ್ಷದ ಬಾಲಕಿಯೊಂದಿಗೆ ಪ್ರೀತಿಸುವ ನಾಟಕವಾಗಿ ಅತ್ಯಾಚಾರ ಎಸಗಿದ್ದಾನೆ. ವಿಡಿಯೊ ಮತ್ತು ಫೋಟೊಗಳನ್ನು ತೆಗೆದಿಟ್ಟುಕೊಂಡು ಬಾಲಕಿಗೆ ಬೆದರಿಸಿದ್ದಾನೆ' ಎಂದು ಆರೋಪಿಸಿ ಪೋಷಕರು ಆಲ್ದೂರು ಠಾಣೆಗೆ ದೂರು ನೀಡಿದ್ದರು. ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ವಶಕ್ಕೆ ಪಡೆದ ಪೊಲೀಸರು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ರುಮನ್ ನೀಡಿರುವ ದೂರು ಆಧರಿಸಿ ನೈತಿಕ ಪೊಲೀಸ್‌ಗಿರಿ ನಡೆಸಿದ ಆರೋಪದಲ್ಲಿ ಬಜರಂಗದಳದ 7 ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ. ವಿಶ್ವ ಹಿಂದೂ ಪರಿಷತ್ ಜಿಲ್ಲಾ ಸಹ ಸಂಚಾಲಕ ಸಿ.ಡಿ.ಶಿವಕುಮಾರ್, ಚಿಕ್ಕಮಾಗರವಳ್ಳಿ ಮಧು, ಸ್ವರೂಪ್ ಕಬ್ಬಿಣ ಸೇತುವೆ, ರಂಜಿತ್ ಅರೇನಹಳ್ಳಿ, ಪರೀಕ್ಷಿತ್ ಗಾಳಿಗಂಡಿ, ಕಾರ್ತಿಕ್ ಅರೇನಹಳ್ಳಿ, ಆದರ್ಶ್ ಬಂಧಿತ ಆರೋಪಿಗಳು.



**ಸುಭಾಷಿತ**

ನೀವು ಬೇರೆಯವರಿಗೆ ಒಳ್ಳೆಯದನ್ನು ಬಯಸಿದರೆ ನಿಮಗೆ ಒಳ್ಳೆಯದಾಗುತ್ತದೆ. ಇದು ನಿಸರ್ಗದ ನಿಯಮ.

–ಗೌತಮ ಬುದ್ಧ

# ಮತೀಯ ಗೂಂಡಾಗಿರಿಗೆ ಲಗಾಮು ಸರ್ಕಾರದ ವಿಳಂಬನೀತಿ ಸಲ್ಲದು

**ಧರ್ಮದ** ಹೆಸರಿನಲ್ಲಿ ಕಾನೂನನ್ನು ಕೈಗೆತ್ತಿಕೊಂಡು ನಡೆಸುವ ಗೂಂಡಾಗಿರಿಯ ಪ್ರಕರಣಗಳು ರಾಜ್ಯದ ವಿವಿಧ ಭಾಗಗಳಿಂದ ವರದಿಯಾಗಿವೆ. ಈ ಪ್ರಕರಣಗಳು, ಮತೀಯ ಶಕ್ತಿಗಳು ರಾಜ್ಯದಲ್ಲಿ ಎಗ್ಗಿಲ್ಲದೆ ಕಾರ್ಯನಿರ್ವಹಿಸುತ್ತಿರುವುದಕ್ಕೆ ನಿದರ್ಶನದಂತಿವೆ. ಮಂಗಳೂರಿನ ಪಣಂಬೂರು ಬೀಚ್‌ನಲ್ಲಿ ಮುಸ್ಲಿಂ ಯುವಕ ಹಾಗೂ ಹಿಂದೂ ಯುವತಿಗೆ ಕಿಡಿಗೇಡಿಗಳು ಕಿರುಕುಳ ನೀಡಿರುವ ಘಟನೆ ಇತ್ತೀಚೆಗೆ ನಡೆದಿದೆ. ವಿವಾಹಿತ ಮಹಿಳೆಯೊಬ್ಬರು ಬೇರೆ ಧರ್ಮದ ಸಂಗಾತಿಯೊಂದಿಗೆ ಹೋಟೆಲ್‌ನಲ್ಲಿದ್ದಾಗ ಗುಂಪೊಂದು ದಾಳಿ ಮಾಡಿ ಹಲ್ಲೆ ನಡೆಸಿದೆ; ಮಹಿಳೆಯನ್ನು ಎಳೆದೊಯ್ದು ಸಾಮೂಹಿಕ ಅತ್ಯಾಚಾರ ನಡೆಸಿದೆ. ಹಾವೇರಿಯಲ್ಲಿ ನಡೆದ ಈ ಪ್ರಕರಣದಲ್ಲಿ, ಹಲ್ಲೆಯ ಕೃತ್ಯವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುವ ಮೂಲಕ ಸಂತ್ರಸ್ತರನ್ನು ಅವಮಾನಿಸುವ ಹಾಗೂ ಸಮಾಜದಲ್ಲಿ ಭೀತಿ ಹುಟ್ಟಿಸುವ ಪ್ರಯತ್ನವನ್ನೂ ಹಲ್ಲೆಕೋರರು ಮಾಡಿದ್ದಾರೆ. ಪರಿಚಯದ ಯುವತಿಯನ್ನು ಮನೆಗೆ ತಲುಪಿಸಲು ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಹೋಗುತ್ತಿದ್ದ ಮುಸ್ಲಿಂ ಯುವಕನನ್ನು ದುಷ್ಕರ್ಮಿಗಳು ಅಡ್ಡಗಟ್ಟಿ ಹಲ್ಲೆ ನಡೆಸಿರುವ ಪ್ರಕರಣ ತುಮಕೂರಿನಲ್ಲಿ ಜರುಗಿದೆ. ಬೆಳಗಾವಿ ಜಿಲ್ಲೆಯ ಜಿನರಾಳ ಗ್ರಾಮದಲ್ಲಿ ಅನೈತಿಕ ಸಂಬಂಧದ ಶಂಕೆಯಿಂದ ಮನೆಯೊಂದನ್ನು ಧ್ವಂಸ ಮಾಡಲಾಗಿದೆ. ಈ ಎಲ್ಲ ಪ್ರಕರಣಗಳಲ್ಲಿ ಧರ್ಮ–ಜಾತಿಯ ಹೆಸರಿನಲ್ಲಿ, ನೈತಿಕತೆಯ ಹೆಸರಿನಲ್ಲಿ ಪುಂಡರು ಅಟ್ಟಹಾಸ ಮೆರೆದಿದ್ದಾರೆ. ಕಾನೂನು ಸುವ್ಯವಸ್ಥೆಗೆ ಕಿಡಿಗೇಡಿಗಳಿಂದ ಎದುರಾಗುವ ಇಂಥ ಸವಾಲುಗಳನ್ನು ಪೊಲೀಸ್ ಇಲಾಖೆ ಪರಿಣಾಮಕಾರಿಯಾಗಿ ನಿಭಾಯಿಸದಿರುವುದಕ್ಕೆ ಉದಾಹರಣೆಯ ರೂಪದಲ್ಲೂ ಈ ಪ್ರಕರಣಗಳನ್ನು ನೋಡಬಹುದು. ಕಾರಣ ಏನೇ ಆಗಿದ್ದರೂ ಒಬ್ಬರು ಮತ್ತೊಬ್ಬರ ಮೇಲೆ ಹಲ್ಲೆ ನಡೆಸುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ವೈಯಕ್ತಿಕ ನಿಲುವುಗಳನ್ನು ಮತ್ತೊಬ್ಬರ ಮೇಲೆ ಹೇರುವುದಕ್ಕೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶವಿಲ್ಲ. ಕಾನೂನುಬಾಹಿರ ಚಟುವಟಿಕೆಗಳು ನಡೆಯುತ್ತಿವೆ ಅನ್ನಿಸಿದಾಗ, ಅವುಗಳನ್ನು ಸಂವಿಧಾನಾತ್ಮಕ ಮಾರ್ಗದ ಮೂಲಕ ಎದುರಿಸಬೇಕೇ ಹೊರತು, ಸ್ವತಃ ಪೊಲೀಸರಂತೆ ಇಲ್ಲವೇ ನ್ಯಾಯಾಧೀಶರಂತೆ ವರ್ತಿಸುವ ಹಕ್ಕು ಯಾರಿಗೂ ಇಲ್ಲ.



ಗೂಂಡಾಗಿರಿ ಪ್ರಕರಣಗಳಲ್ಲಿ ನೈತಿಕತೆ ಹುಡುಕುವ ಹಾಗೂ ಮತೀಯ ಶಕ್ತಿಗಳ ದುಷ್ಕೃತ್ಯಗಳಿಗೆ ಕುಮ್ಮಕ್ಕು ನೀಡುವ ಜನಪ್ರತಿನಿಧಿಗಳ ವಿರುದ್ಧ ಪಕ್ಷಾತೀತವಾಗಿ ಕ್ರಮ ಕೈಗೊಳ್ಳಬೇಕು

ನೈತಿಕತೆಯ ಹೆಸರಿನಲ್ಲಿ ನಡೆಯುವ ಬಹುತೇಕ ಗೂಂಡಾಗಿರಿ ಪ್ರಕರಣಗಳು, ಧಾರ್ಮಿಕ ಅಸಹಿಷ್ಣುತೆ ಹಾಗೂ ಕೋಮುವಾದಿ ಮನೋಭಾವದ ಉಪ ಉತ್ಪನ್ನಗಳೇ ಆಗಿವೆ. ಭಿನ್ನ ಸಮುದಾಯಗಳ ಹುಡುಗ ಹುಡುಗಿಯರ ಸ್ನೇಹ ಅಥವಾ ಸಲಿಗೆಯನ್ನು ಸಹಿಸಲಾರದಷ್ಟು ಮಟ್ಟಿಗೆ ಸಾಮಾಜಿಕ ಅಸಹನೆ ರೂಪುಗೊಂಡಿದೆ. ಈ ಅಸಹನೆಯನ್ನು ಬೆಳೆಯಲು ಬಿಡುವುದರ ಮೂಲಕ, ತೀವ್ರ ಸ್ವರೂಪದ ಸಾಮಾಜಿಕ ವ್ಯಾಧಿ ರೂಪುಗೊಳ್ಳುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡಬಾರದು. ಸ್ನೇಹ ಮತ್ತು ಪ್ರೇಮದ ನಡುವೆ ಧರ್ಮವನ್ನು ಹುಡುಕುವುದು ಹಾಗೂ ಅಸಹನೆ ವ್ಯಕ್ತಪಡಿಸುವುದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ನಡವಳಿಕೆ ಆಗಿರುವಂತೆಯೇ, ಸಾಮಾಜಿಕ ಸೌಹಾರ್ದ ಮತ್ತು ಕಾನೂನು ವ್ಯವಸ್ಥೆಗೆ ಒಡ್ಡಿರುವ ಆತಂಕವೂ ಆಗಿದೆ. ಧರ್ಮದ ಹೆಸರಿನಲ್ಲಿ ಕಾನೂನು ಕೈಗೆತ್ತಿಕೊಳ್ಳುವುದಕ್ಕೆ ಅವಕಾಶವಿದೆ ಎನ್ನುವ ಭಾವನೆ ಬೆಳೆಯುವುದು ಸಮಾಜದಲ್ಲಿ ಭಯವನ್ನು ಉಂಟುಮಾಡುವಂತಹದ್ದು ಹಾಗೂ ದೇಶದ ಬಹುತ್ವದ ಪರಿಕಲ್ಪನೆಗೆ ಮಾರಕವಾದುದು. ಸಾಮಾಜಿಕ ಸೌಹಾರ್ದಕ್ಕೆ ಧಕ್ಕೆ ಉಂಟುಮಾಡುವ ಯಾವುದೇ ಕೃತ್ಯವನ್ನು ಸರ್ಕಾರ ಲಘುವಾಗಿ ಪರಿಗಣಿಸದೆ, ಗಂಭೀರ ಕ್ರಮ ಕೈಗೊಳ್ಳಬೇಕು. ಕೋಮುಸೌಹಾರ್ದವನ್ನು ರಕ್ಷಿಸುವ ಬದ್ಧತೆ ಬಾಯಿಮಾತಿಗೆ ಸೀಮಿತಗೊಳ್ಳಬಾರದು. ಅದು ಕಾರ್ಯರೂಪಕ್ಕೆ ಬಾರದೇ ಹೋದರೆ, ನೈತಿಕತೆಯ ಹೆಸರಿನ ಗೂಂಡಾಗಿರಿ ಪ್ರಕರಣಗಳ ಪ್ರಯೋಗಶಾಲೆಯಾಗಿ ಕರ್ನಾಟಕ ರೂಪುಗೊಳ್ಳುವುದಕ್ಕೆ ಸರ್ಕಾರವೇ ಅವಕಾಶ ಮಾಡಿಕೊಟ್ಟಂತಾಗುತ್ತದೆ. ರಾಜ್ಯದ ವರ್ಚಸ್ಸನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾಳುಮಾಡುವ ಮತೀಯ ಗೂಂಡಾಗಿರಿ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ದುಷ್ಕೃತ್ಯಗಳಿಗೆ ಧರ್ಮವನ್ನು ಗುರಾಣಿಯನ್ನಾಗಿ ಬಳಸಿಕೊಳ್ಳುವ ಗೂಂಡಾಗಳಿಗೆ ತಕ್ಕ ಶಾಸ್ತಿಯಾಗದೇ ಹೋದರೆ, ಈ ಪ್ರಕರಣಗಳಲ್ಲಿ ಸರ್ಕಾರವೂ ಪರೋಕ್ಷವಾಗಿ ಭಾಗಿಯಾದಂತಾಗುತ್ತದೆ. ಮತೀಯ ಗೂಂಡಾಗಿರಿಗೆ ಸಂಬಂಧಿಸಿದಂತೆ ಕ್ರಿಯೆ ಮತ್ತು ಪ್ರತಿಕ್ರಿಯೆ ಸಹಜ ಎಂದು ಹೇಳುವ ಮೂಲಕ, ಕಾನೂನುಬಾಹಿರ ದುಂಡಾವರ್ತನೆಗಳಿಗೆ ನೈತಿಕತೆಯ ಆಯಾಮ ಕಲ್ಪಿಸುವ ಪ್ರಯತ್ನವನ್ನು ನಿಕಟಪೂರ್ವ ಮುಖ್ಯಮಂತ್ರಿ ಮಾಡಿದ್ದರು. ಇಂತಹ ಪ್ರಮಾದ ಅಕ್ಷಮ್ಯ. ಈ ಬಗೆಯ ವರ್ತನೆಗಳಿಗೆ ಸಂಬಂಧಿಸಿದಂತೆ ಮೌನ ಅಥವಾ ನಿರ್ಲಕ್ಷ್ಯ ಮುಂದುವರಿದಂತೆಲ್ಲ ನಾಡಿನ ಸೌಹಾರ್ದ ಪರಂಪರೆ ಗಾಸಿಗೊಳ್ಳುತ್ತಲೇ ಇರುತ್ತದೆ ಹಾಗೂ ರಾಜ್ಯದ ವರ್ಚಸ್ಸು ಮುಕ್ಕಾಗುತ್ತಲೇ ಇರುತ್ತದೆ. ಗೂಂಡಾಗಿರಿ ಪ್ರಕರಣಗಳಲ್ಲಿ ನೈತಿಕತೆ ಹುಡುಕುವ ಹಾಗೂ ಮತೀಯ ಶಕ್ತಿಗಳ ದುಷ್ಕೃತ್ಯಗಳಿಗೆ ಕುಮ್ಮಕ್ಕು ನೀಡುವ ಜನಪ್ರತಿನಿಧಿಗಳು ಯಾವ ಪಕ್ಷಕ್ಕೆ ಸೇರಿದ್ದರೂ ಅವರ ಮೇಲೆಯೂ ಕ್ರಮ ಜರುಗುವಂತಾಗಬೇಕು. ಸಮಾಜದಲ್ಲಿ ಭಯ ಹುಟ್ಟಿಸುವ ಚಟುವಟಿಕೆಗಳನ್ನು ಪೊಲೀಸ್‌ಗಿರಿ ಹಾಗೂ ನೈತಿಕತೆ ಎಂದು ಬಿಂಬಿಸುವವರನ್ನೂ ಕಾನೂನುಕ್ರಮಕ್ಕೆ ಗುರಿಪಡಿಸಬೇಕು.

## ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ: ಅಂಬೇಡ್ಕರ್ ಪರಿಕಲ್ಪನೆ ಹೇಳುವುದೇನು?

# ಸಂವಿಧಾನ: ಇನ್ನಷ್ಟು ಅರಿಯೋಣ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

**ಕರ್ನಾಟಕ** ಸರ್ಕಾರವು 'ಸಂವಿಧಾನ ಜಾಗೃತಿ ಜಾಥಾ'ವನ್ನು ನಡೆಸುತ್ತಿದೆ. ಈ ಜಾಥಾದ ವಾಹನವು ಪ್ರತಿ ಗ್ರಾಮದಲ್ಲೂ ಸಂಚರಿಸಲಿದೆ. ಆಗ ನಡೆಯುವ ಸಭೆಗಳಲ್ಲಿ ಸಂವಿಧಾನದ ಪೀಠಿಕೆಯ ಬಗ್ಗೆ ಮತ್ತು ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯದ ಬಗ್ಗೆ ಅಂಬೇಡ್ಕರ್ ಅವರ ಪರಿಕಲ್ಪನೆಗಳ ಕುರಿತಾಗಿ ತಿಳಿವಳಿಕೆ ಮೂಡಿಸಬೇಕೆಂದು ಹೇಳಲಾಗಿದೆ. ಈ ಚೌಕಟ್ಟಿನ ಒಳಗೆ ಎರಡು ಪ್ರಧಾನ ಹಂತಗಳಿವೆ. ಮೊದಲನೆಯದು, ಸಂವಿಧಾನದ ಪ್ರಸ್ತಾವನೆಯ ಕುರಿತಾದ ತಿಳಿವಳಿಕೆ. ಎರಡನೆಯದು, ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯದ ಕುರಿತಾಗಿ ಅಂಬೇಡ್ಕರ್ ಅವರ ಪರಿಕಲ್ಪನೆಗಳ ಕುರಿತ ತಿಳಿವಳಿಕೆ.

ಜವಾಹರಲಾಲ್ ನೆಹರೂ ಅವರು ಮಂಡಿಸಿದ ಧ್ಯೇಯಗಳ ನಿರ್ಣಯದಿಂದ (ಆಬ್ಜೆಕ್ಟಿವ್ ರೆಸಲ್ಯೂಷನ್) ಆರಿಸಿಕೊಂಡ ಸಂವಿಧಾನದ ಪೀಠಿಕೆಯು 'ಭಾರತದ ಜನರಾದ ನಾವು' ಎಂದು ಪ್ರಾರಂಭವಾಗುತ್ತದೆ. ದೇಶದ ಅಂತಿಮ ಅಧಿಕಾರವು ಜನರ ಬಳಿಯೇ ಇದೆ ಎಂಬುದು ಇದರ ಅರ್ಥ. 'ಕಾನ್‌ಸ್ಟಿಟ್ಯೂಟ್ ಇಂಡಿಯಾ' ಎನ್ನುವ ವಿಚಾರವು ಬಲು ಮಹತ್ವದ್ದು. ಇನ್ನು ಮುಂದೆ ಭಾರತವನ್ನು ನಾವೆಲ್ಲ ಸೇರಿ ಹೀಗೆ ರೂಪಿಸಲಿದ್ದೇವೆ ಎನ್ನುವ ಭಾವವನ್ನು ಇದು ಧ್ವನಿಸುತ್ತದೆ. ಯಾವ ರೂಪದಲ್ಲಿ? ಪರಮಾಧಿಕಾರ ಇರುವ, ಸಮಾಜವಾದಿ, ಸೆಕ್ಯುಲರ್, ಪ್ರಜಾಸತ್ತಾತ್ಮಕ ಗಣರಾಜ್ಯ. ಅಂದರೆ, ದೇಶವು ಆಂತರಿಕವಾಗಿ ಮತ್ತು ಬಾಹ್ಯವಾಗಿ ಪರಮಾಧಿಕಾರ ಹೊಂದಿರುವಂತೆ ಮಾಡಬೇಕು. ಅದುವರೆಗೆ ಬ್ರಿಟಿಷರ ದಾಸ್ಯ ಇತ್ತು, ಇನ್ನು ಯಾವ ಅಧೀನತೆಯೂ ಇಲ್ಲ ಎಂಬುದನ್ನು ಇದು ಸೂಚಿಸುತ್ತದೆ.

ಸಮಾಜವಾದಿ, ಅಂದರೆ ಸಂಪತ್ತು ಸಮಾನವಾಗಿ ಹಂಚಿಕೆಯಾಗಿ, ತಾರತಮ್ಯ ಇಲ್ಲದಿರುವಂತಹ ದೇಶವಾಗಿ ಇರಬೇಕಾದದ್ದನ್ನು ಇದು ತಿಳಿಸುತ್ತದೆ. 'ಸೆಕ್ಯುಲರ್' ಎನ್ನುವುದಕ್ಕೆ 'ಲೌಕಿಕ, ಮತಧರ್ಮ ನಿರಪೇಕ್ಷ' ಎಂಬ ವ್ಯಾಖ್ಯಾನಗಳಿದ್ದರೂ, ಭಾರತೀಯ ಸಂದರ್ಭದಲ್ಲಿ ನೆಹರೂ ಅವರು ಹೇಳುವ 'ಸರ್ವಧರ್ಮ ಸಮಭಾವ' ಎಂಬ ಅರ್ಥವು ಸರಿ ಹೊಂದುತ್ತದೆ.

ಸ್ಥಾನಮಾನ ಮತ್ತು ಅವಕಾಶವನ್ನು ಪಡೆಯುವುದರಲ್ಲಿ ಸಮಾನತೆ ಇರುವ ರಾಷ್ಟ್ರವಾಗಿ ರೂಪಿಸಬೇಕು ಎಂಬುದು ಮುಂದಿನ ವಿಚಾರವಾಗಿದೆ. ಸ್ಥಾನಮಾನ ಸಮಾನತೆ ಎಂದರೆ ಯಾರೇ ವ್ಯಕ್ತಿ ಯಾವುದೇ ಉದ್ಯೋಗದಲ್ಲಿದ್ದರೂ, ಯಾವುದೇ ಪ್ರದೇಶ, ಸಮುದಾಯ, ಭಾಷೆಯಂತಹ ಭಿನ್ನ ಸ್ಥಿತಿಯಲ್ಲಿದ್ದರೂ ಸಮಾನ ಗೌರವಕ್ಕೆ ಪಾತ್ರನಾಗಬೇಕು ಎಂದು ಅರ್ಥ. ಸಂವಿಧಾನದ ಒಂದನೆಯ ವಿಧಿನಿಯಮದ ಪ್ರಕಾರ 'ಭಾರತವು ರಾಜ್ಯಗಳ ಒಕ್ಕೂಟವಾಗಿದೆ'. ಈ ಒಕ್ಕೂಟ ಅದೇ ರೀತಿಯಲ್ಲಿ ಉಳಿಯಬೇಕಾದರೆ ಒಗ್ಗಟ್ಟು ಇರಬೇಕು ಎಂಬ ಆಶಯವನ್ನು ಇದು ಸೂಚಿಸುತ್ತದೆ.

ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ ಕುರಿತ ಪರಿಕಲ್ಪನೆಗಳ ಬಗ್ಗೆ ಅಂಬೇಡ್ಕರ್ ಯಾವ ಚಿಂತನೆ ಹೊಂದಿದ್ದರು ಎಂಬುದು ಪ್ರಸ್ತುತವಾಗಿದೆ. ಸಾಮಾಜಿಕ ನ್ಯಾಯ ಎನ್ನುವುದು 'ಸಮಾನತೆ'ಯ ತತ್ವಕ್ಕಿಂತ ಹೆಚ್ಚಾಗಿ 'ಸಮತೆ'ಯ ತತ್ವವನ್ನು ಆಧರಿಸಿದೆ. ಒಬ್ಬ ತಾಯಿಗೆ ನಾಲ್ವರು ಮಕ್ಕಳಿದ್ದು, ಅವುಗಳಲ್ಲಿ ಒಂದು ಮಗು ರಕ್ತಹೀನತೆಯಿಂದ ದುರ್ಬಲವಾಗಿದೆ ಎಂದು ಭಾವಿಸಿ. ದುರ್ಬಲ ಮಗುವಿನ ಬಗ್ಗೆ ತಾಯಿ ಜಾಸ್ತಿ ಕಾಳಜಿ ವಹಿಸಿದಾಗ, ಉಳಿದ ಮಕ್ಕಳೆಲ್ಲ ಆಕ್ಷೇಪಿಸಿ ಗಲಾಟೆ ಮಾಡಿದರೆ ಹೇಗಾದೀತು? ಈ ನಡವಳಿಕೆಯೇ ಸಮತೆಯ ತತ್ವ.

ಸಾಮಾಜಿಕ ನ್ಯಾಯದ ಸಾಧನೆ ಆಗಬೇಕಾದರೆ ಸರ್ಕಾರವು ನಿರ್ಜೀವ ಕಾನೂನು ಜಾರಿ ಪ್ರಾಧಿಕಾರದ ಹಾಗೆ ವರ್ತಿಸಿದರೆ ಆಗುವುದಿಲ್ಲ. ಅದು ಮಾತೃಹೃದಯದಿಂದ ವರ್ತಿಸಬೇಕಾಗುತ್ತದೆ. ದುರ್ಬಲ ವರ್ಗಗಳಿಗೆ ಸ್ವಲ್ಪ ಜಾಸ್ತಿ ಪ್ರಾಮುಖ್ಯವನ್ನು ಕೊಡಬೇಕು. ಅದರ ಜೊತೆಗೇ, ಗಲಾಟೆ ಮಾಡಿದ ಸಮರ್ಥ ಮಕ್ಕಳಿಗೆ, 'ನಿಮಗೆ ಆ ಮಗುವಿನಷ್ಟು ನನ್ನ ಸಹಾಯದ ಅಗತ್ಯ ಇಲ್ಲ' ಎಂಬುದನ್ನು ಅರ್ಥ ಮಾಡಿಸುವ ಹಾಗೆ, ದುರ್ಬಲರನ್ನು ತಾನು ಜಾಸ್ತಿ ನಿರ್ವಹಿಸ ಬೇಕಾದ ಅಗತ್ಯವನ್ನು ಸಮರ್ಥ ಪೌರರಿಗೆ ಅರ್ಥ ಮಾಡಿಸಬೇಕಾಗುತ್ತದೆ.

ಅಂಬೇಡ್ಕರ್ ಮೂರು ಬಗೆಯ ನ್ಯಾಯದ ಸಮಗ್ರತೆಯನ್ನು ಪ್ರತಿಪಾದಿಸಿದ್ದಾರೆ. ಅವರ ಪ್ರಕಾರ, ನ್ಯಾಯದ ಸಮಗ್ರತೆಯು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ತತ್ವಗಳನ್ನು ಆಧರಿಸಿದೆ. ಸ್ವಾತಂತ್ರ್ಯವನ್ನು ಸಮಾನತೆಯಿಂದ, ಸಮಾನತೆಯನ್ನು ಭ್ರಾತೃತ್ವದಿಂದ ಪ್ರತ್ಯೇಕಿಸಲು ಆಗುವುದಿಲ್ಲ. ಅವರು ತನಗಿಂತ ಕೀಳು ಅಥವಾ ತಾನು ಅವರಿಗಿಂತ ಕೀಳು ಎಂಬ ಭಾವನೆಯನ್ನು ಹೊಂದಿಲ್ಲದೇ ಇರುವುದು ಭಾವನಾತ್ಮಕ ಸಮಾನತೆ. ಅದಿಲ್ಲದೆ ಬೇರೆ ಯಾವ ಸಮಾನತೆಯನ್ನೂ ಸಾಧಿಸಲಾಗದು. 'ದಾಸ್ಯ'ದ ಭಾವನೆ ಇಲ್ಲದಿರುವುದೇ ಸ್ವಾತಂತ್ರ್ಯ. ಅಂದರೆ ಸ್ವಾತಂತ್ರ್ಯವು ಸಮಾನತೆಯ ತತ್ವವನ್ನು ಆಧರಿಸಿದೆ. ಎಲ್ಲರೂ ನನ್ನವರು ಅಥವಾ ನನ್ನ ಸಹೋದರ, ಸಹೋದರಿ ಸಮಾನರು ಎಂಬ ಭಾವನೆ ಇದ್ದಾಗ ಮಾತ್ರ ಅಸೂಯೆ ಇಲ್ಲದೆ ಸಮಾನತೆಯ ಭಾವನೆಯನ್ನು ಹೊಂದಿರಲು ಸಾಧ್ಯ. ಅಂದರೆ, ಭ್ರಾತೃತ್ವದ ಪರಿಕಲ್ಪನೆಯು ದ್ವೇಷ ಭಾವನೆ ಮತ್ತು ದ್ವೇಷ ಪ್ರತಿಪಾದನೆಗೆ ವಿರುದ್ಧವಾಗಿದೆ.

ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಸಾಕ್ಷಿಯಾಗಿ, ಆಗ ಜಾರಿಗೆ ಬಾರದ, ಆದರೆ ಈಗ ಜಾರಿಗೆ ಬಂದಿರುವ ಅಂಶಗಳನ್ನು ಒಳಗೊಂಡ 'ಹಿಂದೂ ಕೋಡ್ ಬಿಲ್' ಅನ್ನು ಹೇಳಬಹುದು. ಅದರಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ನಾಲ್ಕು ಅಂಶಗಳಿವೆ: 1. ಪತಿಯ ಆಯ್ಕೆ ಹಕ್ಕು. 2. ವಿಚ್ಛೇದನದ ಹಕ್ಕು. 3. ಆಸ್ತಿಯ ಹಕ್ಕು. 4. ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣುಮಕ್ಕಳು ಮತ್ತು ವಿಧವೆ ಸೊಸೆಗೆ ಹಕ್ಕು ಇದೆ. ಈ ಅಂಶಗಳು, ಪಾರಂಪರಿಕವಾಗಿ ಅವಕಾಶ ವಂಚಿತರಾದವರಿಗೆ ಅವಕಾಶಗಳನ್ನು ಸೃಷ್ಟಿಸುವ ಪರಿಕಲ್ಪನೆಯ ಬಗ್ಗೆ ಹೇಳುತ್ತವೆ.




ಜಾತಿ ಆಧಾರಿತ ಮೀಸಲಾತಿಗೆ ಸಂಬಂಧಿಸಿದಂತೆ, ಅವಕಾಶವಂಚಿತ ವರ್ಗಗಳಿಗೆ ಅವಕಾಶದ ಸೃಷ್ಟಿಯ ಪರಿಕಲ್ಪನೆ ಇದೆ. ಅಂಬೇಡ್ಕರ್ ಪ್ರಕಾರ, ಸಾಮಾಜಿಕ ಸ್ವಾತಂತ್ರ್ಯವು ಜಾತಿ ಮೀರಿ ನಿಲ್ಲುವ ಮನೋಭಾವವನ್ನು ಅವಲಂಬಿಸಿದೆ. ಜಾತಿ ಎನ್ನುವುದು ಭಾರತದ ಸಾಮಾಜಿಕ ವಾಸ್ತವ. ಅದು ಅದರದೇ ಆದ ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸುತ್ತದೆ. ಅದು ಕೆಲವರಿಗೆ ವಿಕಾಸಕ್ಕೆ ಅನುಕೂಲಕರವಾಗಿಯೂ ಇನ್ನು ಕೆಲವರಿಗೆ ಪ್ರತಿಕೂಲಕರವಾಗಿಯೂ ಬಂದಿರುತ್ತದೆ. ಆದ್ದರಿಂದ ತನ್ನ ಜಾತಿಯಿಂದಾಗಿಯೇ ತಾನು ಸರ್ವ ಸಮರ್ಥ ಎಂಬ ಭಾವನೆಯನ್ನೂ, ತನ್ನ ಜಾತಿಯಿಂದಾಗಿ ತಾನು ಯಾವುದಕ್ಕೂ ಸಮರ್ಥನಲ್ಲ ಎಂಬ ಭಾವನೆಯನ್ನೂ ತೊರೆದಾಗ ಜಾತಿಯನ್ನು ಮೀರಿ ನಿಲ್ಲಲು ಆಗುತ್ತದೆ. ಆಗ ಅಲ್ಲಿ ಸಾಮಾಜಿಕ ನ್ಯಾಯಕ್ಕೆ ಪೂರಕವಾದ ಸ್ಥಿತಿ ನಿರ್ಮಾಣವಾಗುತ್ತದೆ.

ಅಂಬೇಡ್ಕರ್ ಅವರ ಆರ್ಥಿಕ ನ್ಯಾಯದ ಪರಿಕಲ್ಪನೆಯು ಕೈಗಾರಿಕೀಕರಣಕ್ಕೆ ಒತ್ತು ಕೊಟ್ಟ ಸಮಾಜವಾದಿ ಆಶಯವಾಗಿತ್ತು. ಕೃಷಿಯು ಸಾಮೂಹಿಕ ಒಡೆತನದಲ್ಲಿರಬೇಕು ಎಂದು ಪ್ರತಿಪಾದಿಸಿದ್ದ ಅಂಬೇಡ್ಕರ್, ಕೃಷಿ ಮತ್ತು ಕೈಗಾರಿಕೆಗಳ ರಾಷ್ಟ್ರೀಕರಣ ಆಗಬೇಕು ಎಂದಿದ್ದರು. ಆದರೆ ಅದನ್ನು ಮಾಡಲು ಆಗಲಿಲ್ಲ. ಮಿಶ್ರ ಆರ್ಥಿಕ ನೀತಿ ಜಾರಿಗೆ ಬಂದಿತು. ನಮ್ಮಲ್ಲಿ ಸಹಕಾರಿ ಬೇಸಾಯ ಪದ್ಧತಿಯು ಪಂಜಾಬ್‌ನಂತಹ ಕೆಲವು ರಾಜ್ಯಗಳಲ್ಲಿ ಯಶಸ್ವಿಯಾಗಿದೆ. ಈ ಪದ್ಧತಿಯು ಅಂಬೇಡ್ಕರ್ ಅವರ ಆಶಯವನ್ನು ಹೋಲುತ್ತದೆ.

ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಪಡೆಯಲು ರಾಜಕೀಯ ನ್ಯಾಯವೂ, ಸಾಮಾಜಿಕ ಮತ್ತು ಆರ್ಥಿಕ ನ್ಯಾಯದ ಮೂಲಕ ರಾಜಕೀಯ ನ್ಯಾಯವೂ ಪರಸ್ಪರ ಪೂರಕವಾಗಿವೆ. ದುರ್ಬಲ ಸಮುದಾಯಗಳಿಗೂ ರಾಜಕೀಯ ಪ್ರತಿನಿಧಿತ್ವ ಸಿಗಬೇಕು ಎನ್ನುವುದು ಇಲ್ಲಿನ ಆಶಯವಾಗಿದ್ದು, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಅದನ್ನು ಈಗಾಗಲೇ ಜಾರಿಗೊಳಿಸಲಾಗಿದೆ. ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ನಡುವೆ ನಡೆದ 'ಪೂನಾ ಒಪ್ಪಂದ'ದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಶಾಸನಸಭೆಗಳಿಗಾಗಿ ಮೀಸಲು ಕ್ಷೇತ್ರಗಳನ್ನು ಒದಗಿಸುವುದನ್ನು ಸಂವಿಧಾನವು ಅಳವಡಿಸಿಕೊಂಡಿದೆ. ಆ ಮೂಲಕ ಶಾಸನಸಭೆಗಳಲ್ಲೂ ರಾಜಕೀಯ ನ್ಯಾಯದ ಪರಿಕಲ್ಪನೆಯನ್ನು ಜಾರಿಗೊಳಿಸಲಾಗಿದೆ.

ಅಂಬೇಡ್ಕರ್ ಅವರ ಒಟ್ಟೂ ಚಿಂತನೆಗಳ ಆಶಯವನ್ನು ಅವರು ಪ್ರಕಟಿಸಿದ ನಾಲ್ಕು ಪತ್ರಿಕೆಗಳ ಹೆಸರುಗಳು ಸೂಚಿಸುವ ಭಾವಗಳ ಮೂಲಕ ಅರ್ಥ ಮಾಡಿಕೊಳ್ಳಬಹುದು. ಮೊದಲು, 'ಮೂಕನಾಯಕ'. ಮಾತೇ ಹೊರಡದ ಸ್ಥಿತಿಯ ಭಾವ. ನಂತರ, 'ಬಹಿಷ್ಕೃತ ಭಾರತ'. ಪ್ರತಿರೋಧದ ತೀಕ್ಷ್ಣತೆಯ ಭಾವ. ಆ ನಂತರ, 'ಜನತಾ'. ಎಲ್ಲರನ್ನೂ ಒಳಗೊಳಿಸಿಕೊಂಡ ಭಾವ. ಕೊನೆಯದು, 'ಪ್ರಬುದ್ಧ ಭಾರತ'. ಅದು ಸಂವಿಧಾನದ ಆಶಯವೂ ಹೌದು. ಆದರೆ ಸಂವಿಧಾನದ ಆಶಯಗಳು ಅಂತಿಮಗೊಂಡಿವೆ ಎಂದು ಭಾವಿಸುವುದಕ್ಕಿಂತ ಭಾರತದ ಜನರಾದ ನಾವು ಆ ಆಶಯಗಳನ್ನು ಸಾಧಿಸಬೇಕಾಗಿದೆ ಎಂಬ ಬದ್ಧತೆಯ ತಿಳಿವಳಿಕೆಯು ಇಂದಿನ ಅಗತ್ಯವಾಗಿದೆ.

## ಚುರುಮುರಿ



### ಬಿಸಿ ಬ್ರೇಕ್‌ಫಾಸ್ಟ್

• ಆನಂದ

'ಮಕ್ಕಳಿಗೂ ಶಾಸಕರಿಗೂ ಏಷ್ಟೊಂದು ಹೋಲಿಕೆಯಿದೆ ಅಲ್ಲವೇ?' ಎಂದು ಮಡದಿ ಕೇಳಿದಳು. ನಾನು ಹೌಹಾರಿದೆ. 'ಶಾಂತಂ ಪಾಪಂ. ಮಕ್ಕಳನ್ನು ದೇವರಿಗೆ ಹೋಲಿಸ್ತಾರೆ. ನೀನು ಅವರನ್ನು ಶಾಸಕರಿಗೆ ಹೋಲಿಸ್ತಿದೀಯಾ? ಅವರೇನು ತಪ್ಪು ಮಾಡಿದಾರೆ?' ಎಂದು ಕೇಳಿದೆ.

'ಅಯ್ಯೋ! ಬೇಜಾರು ಬೇಡ. ನಮ್ಮ ಖಾದರ್ ಸಾಹೇಬರ ಪ್ಲಾನ್ ಬಗ್ಗೆ ಓದಿದಾಗ ಆ ಪ್ರಶ್ನೆ ಹೊಳೀತು' ಎಂದಾಗ ನನಗೆ ಗೊಂದಲವಾಯಿತು.

'ಯಾವ ಖಾದರ್? ಏನು ಹೇಳ್ತಿದೀಯ?'

'ವಿಧಾನಸಭಾ ಅಧ್ಯಕ್ಷರು. ಅವರ ಪ್ಲಾನ್ ಬಗ್ಗೆ ಇಲ್ಲಿದೆ ನೋಡಿ' ಎಂದು ಪೇಪರ್ ಮುಂದೆ ಹಿಡಿದಳು.

ವಿಧಾನಸಭಾ ಅಧಿವೇಶನದ ಸಮಯದಲ್ಲಿ ಶಾಸಕರಿಗೆ ಭರ್ಜರಿ ಬ್ರೇಕ್‌ಫಾಸ್ಟ್ ಏರ್ಪಡಿಸಿರುವ ಬಗ್ಗೆ ಸುದ್ದಿ ಇತ್ತು. ವಿವಿಧ ಹೋಟೆಲ್‌ಗಳಿಂದ ವಿವಿಧ ಬಗೆಯ ತಿಂಡಿಗಳನ್ನು ತರಿಸುವ ಯೋಜನೆ ಅದು. ಅದನ್ನು ಓದಿ ನನ್ನ ಬಾಯಲ್ಲೂ ನೀರೂರಿ, ನಾನೂ ಶಾಸಕನಾಗಿದ್ದರೆ ಚೆನ್ನಿತ್ತು ಎಂದೆನಿಸಿತು. 'ಭರ್ಜರಿ ಭತ್ಯೆಯ ಜತೆಗೆ ಭರ್ಜರಿ ಬ್ರೇಕ್‌ಫಾಸ್ಟ್ ಅದೂ ಉಚಿತವಾಗಿ! ಅಧಿವೇಶನ ಕಮ್ಸ್ ಲೇಟರ್' ಎಂದೆ.

'ಅಧಿವೇಶನಕ್ಕೆ ಬರಲಿ ಅಂತಾನೇ ಈ ಪ್ಲಾನ್‌ರೀ' ಎಂದಾಗ ನಾನು ಹೌಹಾರಿದೆ.

'ಹೌದೂರಿ, ಇದೊಂದು ಅಟ್ರಾಕ್ಷನ್ ಅವರನ್ನು ಸೆಳೆಯಲು. ಅನೇಕರು ಸದನಕ್ಕೆ ಬರೋದನ್ನು ತಪ್ಪಿಸಿಕೊಳ್ತಾರಂತೆ. ಒಳ್ಳೆ ನಾಸ್ತಾ ಫ್ರೀ ಸಿಗುತ್ತೆ ಅಂತಿದ್ದರೆ ಎಲ್ಲರೂ ಬರಬಹುದು ಅಂತ ಖಾದರ್ ಸಾಹೇಬ್ರು ಪ್ಲಾನ್ ಮಾಡಿದ್ದಾರೆ' ಎಂದಳು.

'ಫ್ರೀ ಎಲ್ಲಿ ಬಂತು?'

'ಶಾಸಕರೇನು ಬಿಲ್ ಕೊಡಬೇಕಿಲ್ಲವಂತೆ…'

'ಆದರೆ ಅದನ್ನು ಸಪ್ಲೈ ಮಾಡಿದವರಿಗೆ ಕೊಡಬೇಕಲ್ಲವೆ. ಅದನ್ನು ನಾವು ಕೊಡ್ತೀವಿ. ನಮ್ಮ ತೆರಿಗೆ ಹಣದಿಂದ ತಾನೆ ಆ ಬಿಲ್ ಸಂದಾಯ ಆಗೋದು. ಅದಿರಲಿ ಇಲ್ಲಿ ಮಕ್ಕಳನ್ನು ಯಾಕೆ ಎಳೆದಿ ನೀನು?' ಎಂದು ಕೇಳಿದೆ ಅರ್ಥವಾಗದೆ.

'ಸಿಂಪಲ್, ಬಿಸಿಯೂಟ ಮಕ್ಕಳನ್ನು ಶಾಲೆಗೆ ಆಕರ್ಷಿಸೋದಿಲ್ಲವೇ?' ಎಂದಾಗ ನಾನು ಮತ್ತೊಮ್ಮೆ ಹೌಹಾರಿದೆ.

## ದಿನದ ಟ್ವೀಟ್

### ಅರಾಜಕ ಸ್ಥಿತಿ



ಪಾಕಿಸ್ತಾನದಲ್ಲಿ ಇಂದು ನ್ಯಾಯಾಂಗ, ಚುನಾವಣಾ ಆಯೋಗ, ಪೊಲೀಸ್, ಸೇನೆಯಂತಹ ಎಲ್ಲ ಸಂಸ್ಥೆಗಳೂ ಅಧೋಗತಿಗೆ ಇಳಿದಿರುವುದನ್ನು ಕಾಣುತ್ತಿದ್ದೇವೆ. ಆ ದೇಶವು ತನಗೆ ತಾನೇ ಮುಜುಗರದ ಸ್ಥಿತಿ ತಂದುಕೊಂಡಿದೆ ಎಂದು ಹೇಳಿದರೆ ಸಾಕಾಗಬಹುದು. ಅಬ್ಬಾ ಸದ್ಯ, ಕಾಶ್ಮೀರವು 1947ರಲ್ಲಿ ಭಾರತವನ್ನು ಆಯ್ಕೆ ಮಾಡಿಕೊಂಡಿತು!

**ಜುನೈದ್ ಅಜೀಂ ಮಟ್ಟು,** ಮಾಜಿ ಮೇಯರ್, ಶ್ರೀನಗರ

## ಕಿಡಿನುಡಿ



ಪ್ರೋಟೀನ್ ಅಗತ್ಯಗಳನ್ನು ಪೂರೈಸಿಕೊಳ್ಳಲು ಶ್ರೀಮಂತ ಸಸ್ಯಾಹಾರಿಗಳಷ್ಟೇ ಬೀನ್ಸ್, ಬೇಳೆಕಾಳು ಮತ್ತು ಪನ್ನೀರನ್ನು ಕೊಂಡುಕೊಳ್ಳಬಲ್ಲರು. ಬಡ ಮಕ್ಕಳಿಗೆ ಮೊಟ್ಟೆ, ಮಾಂಸ, ಮೀನು ವಿತರಣೆಗೆ ಅವರು ತಡೆಯೊಡ್ಡುತ್ತಾರೆ. ಭಾರತದಲ್ಲಿ ಶ್ರೀಮಂತ ಸಸ್ಯಾಹಾರಿಗಳು ಕಡುಬಡ ಮಕ್ಕಳ ಹಣೆಬರಹವನ್ನು ನಿರ್ಧರಿಸುತ್ತಾರೆ.

**ದೇವದತ್ತ ಪಟ್ಟನಾಯಕ,** ಲೇಖಕ

## 25 ವರ್ಷಗಳ ಹಿಂದೆ

ಬುಧವಾರ, 10-2-1999

• **ಒರಿಸ್ಸಾ: ನೈತಿಕ ಹೊಣೆ ಹೊತ್ತು ಜೆ.ಬಿ.ಪಟ್ನಾಯಕ್ ರಾಜೀನಾಮೆ**

**ಭುವನೇಶ್ವರ, ಫೆ. 9–** ಒರಿಸ್ಸಾದಲ್ಲಿ ಕ್ರೈಸ್ತರ ಮೇಲೆ ನಿರಂತರವಾಗಿ ನಡೆದ ದೌರ್ಜನ್ಯ ಪ್ರಕರಣಗಳ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಜಾನಕಿ ವಲ್ಲಭ್ ಪಟ್ನಾಯಕ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಆದಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಕುಂದಮಲ್ ಜಿಲ್ಲೆಯಲ್ಲಿ ಭಾನುವಾರ ಕ್ರೈಸ್ತ ತರುಣಿ ಮತ್ತು ಬಾಲಕನೊಬ್ಬ ಅಮಾನುಷವಾಗಿ ಹತ್ಯೆಯಾದ ಹಿನ್ನೆಲೆಯಲ್ಲಿ, ಸೋನಿಯಾ ಗಾಂಧಿ ಅವರು ಸೂಚನೆ ನೀಡಿದ್ದ ಮೇರೆಗೆ ಪಟ್ನಾಯಕ್ ಅವರು ದೆಹಲಿಗೆ ತೆರಳಿದ್ದರು.

## 50 ವರ್ಷಗಳ ಹಿಂದೆ

ಭಾನುವಾರ, 10-2-1974

• **ಕನ್ನಡ ಭಾಷೆಗೆ ತಕ್ಕಸ್ಥಾನ ದೊರೆಯಲೇಬೇಕು: ಮಾಸ್ತಿ**

**ಮಂಗಳೂರು, ಫೆ. 9–** ಕನ್ನಡ ದೇಶದಲ್ಲಿ ಕನ್ನಡ ಭಾಷೆಗೆ ಇಂದು ಯಾವ ಸ್ಥಾನ ಬೇಕು? ಇಂಗ್ಲೆಂಡಿನಲ್ಲಿ ಇಂಗ್ಲಿಷಿಗೆ, ಫ್ರಾನ್ಸಿನಲ್ಲಿ ಫ್ರೆಂಚಿಗೆ, ಜರ್ಮನಿಯಲ್ಲಿ ಜರ್ಮನ್ ಭಾಷೆಗೆ ಇರುವ ಸ್ಥಾನ. ಇದು ಕನ್ನಡದ ಹಿರಿಯಣ್ಣ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಖಚಿತ ಉತ್ತರ.

'ಹಿಂದಿ ನಮ್ಮ ರಾಷ್ಟ್ರಭಾಷೆ ಅಂದರೆ ನಾನು ಒಪ್ಪುವುದಿಲ್ಲ. ನಮ್ಮ ರಾಷ್ಟ್ರಭಾಷೆ ಆಯಾ ಪ್ರಾಂತದ್ದೇ ಆಗಬೇಕು. ನಾವು ಎಲ್ಲಾ ಭಾಷೆಗಳನ್ನು ಕಲಿಯೋಣ. ಇತರರೂ ಕಲಿಯುವ ಹಾಗೆ ಮಾಡೋಣ. ಕನ್ನಡಕ್ಕೆ ಇಂದು ಮಾನ್ಯತೆ ಬೇಕು. ಕನ್ನಡ ಭಾಷೆಯನ್ನು ಎಲ್ಲರೂ ಗುರುತಿಸಬೇಕು. ನಾವು ಕನ್ನಡದಲ್ಲಿ ಅರ್ಜಿ ಕೊಟ್ಟರೆ ಕೇಂದ್ರ ಸರ್ಕಾರ ಅದನ್ನು ಸ್ವೀಕರಿಸಬೇಕು. ಕನ್ನಡದಲ್ಲೇ ಉತ್ತರ ಕೊಡ ಬೇಕು. ಇದನ್ನು ಜನ ಕೇಳುವ ಕಾಲ ಬರಬೇಕು' ಎಂದು ಡಾ. ಮಾಸ್ತಿ ಇಂದು ಇಲ್ಲಿನ 'ಪಂಜೆ ಮಂಟಪ'ದಲ್ಲಿ ಪಂಜೆ ಶತಮಾನೋತ್ಸವ ಉದ್ಘಾಟಿಸುತ್ತಾ ಕರೆಯಿತ್ತರು. ಡಾ. ಕೆ. ಶಿವರಾಮ ಕಾರಂತರು ಅಧ್ಯಕ್ಷತೆ ವಹಿಸಿದ್ದರು.

ಪಂಜೆಯವರ ಸಮಗ್ರ ಕೃತಿಗಳ ಸಂಪುಟವನ್ನು ಮಾರಾಟಕ್ಕೆ ಬಿಡುಗಡೆಗೊಳಿಸಿದ ವಿ.ಸೀ. ಅವರು ಪಂಜೆ ಮಂಗೇಶರಾಯರು ಕನ್ನಡಕ್ಕೆ ಕೊಟ್ಟಿದ್ದು ಕೆನೆಹಾಲು. ಅವರನ್ನು 'ಕಚ್ಚಿದರೆ ಕಬ್ಬು–ಹಿಂಡಿದರೆ ಜೇನು' ಎಂದು ಕವಿಗಳು ವರ್ಣಿಸಿದುದರಲ್ಲಿ ಏನೂ ಉತ್ಪ್ರೇಕ್ಷೆ ಇಲ್ಲ' ಎಂದರು.

• **ಗುಜರಾತ್‌ನಲ್ಲಿ ರಾಷ್ಟ್ರಪತಿ ಆಡಳಿತ**

**ಅಹಮದಾಬಾದ್, ಫೆ. 9–** ಬೆಲೆ ಏರಿಕೆ ವಿರುದ್ಧ ಒಂದು ತಿಂಗಳ ಕಾಲ ರಾಜ್ಯದಾದ್ಯಂತ ನಡೆದ ಚಳವಳಿಯಿಂದ ತಲ್ಲಣಗೊಂಡ ಮುಖ್ಯಮಂತ್ರಿ ಚಿಮನ್‌ಭಾಯಿ ಪಟೇಲ್ ಅವರ ಸಂಪುಟ ರಾಜೀನಾಮೆ ನೀಡಿದ ನಂತರ, ಇಂದಿನಿಂದ ಗುಜರಾತ್‌ನಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ತರಲಾಯಿತು.

## ಚರ್ಚೆ

# ನೀತಿ ಶಿಕ್ಷಣ: ಗುರುವಿಗೂ ಇರಲಿ

### ಶಿಕ್ಷಕರಿಗೆ ತರಬೇತಿ ನೀಡುವಾಗ ಇದನ್ನು ಒಂದು ಬೋಧನಾ ವಿಷಯವಾಗಿ ಅಳವಡಿಸಬೇಕಾದ ಅಗತ್ಯ ಇದೆ

• ಪು.ಸೂ.ಲಕ್ಷ್ಮೀನಾರಾಯಣ ರಾವ್

**'ಗುರು,** ಗೌರವ, ಗುರುತರ ಹೊಣೆ' ಎಂಬ ಜ್ಯೋತಿ ಅವರ ವಿಶ್ಲೇಷಣಾತ್ಮಕ ಲೇಖನವು (ಪ್ರ.ವಾ., ಫೆ. 2) ಮಕ್ಕಳ ಬೆಳವಣಿಗೆಯಲ್ಲಿ ಸಮಾಜ ಹಾಗೂ ಪೋಷಕರ ಪಾತ್ರ ನಿರಾಶಾದಾಯಕವಾಗಿ ಇರುವುದನ್ನು ಗುರುತಿಸಿದೆ. ಆ ಕಾರಣದಿಂದಾಗಿ ಶಿಕ್ಷಕರ ಜವಾಬ್ದಾರಿ ಇಂದು ಇನ್ನೂ ಹೆಚ್ಚಾಗಿದೆ ಎಂಬ ಖಚಿತವಾದ ಅಭಿಪ್ರಾಯವನ್ನು ಸೂಕ್ತವಾಗಿಯೇ ತಿಳಿಸಿದೆ. ಇದರ ಜೊತೆಗೆ ಶಿಕ್ಷಣ ಇಲಾಖೆಯು ಮಕ್ಕಳ ಶೇಕಡಾವಾರು ಫಲಿತಾಂಶವನ್ನು ಹೆಚ್ಚಿಸುವುದರ ಮೂಲಕ ತನ್ನ ಸಾಧನೆಯನ್ನು ಬಿಂಬಿಸಿಕೊಳ್ಳುವ ಹಂತಕ್ಕೆ ಬಂದು ತಲುಪಿರುವುದು ಶಿಕ್ಷಣ ಕ್ಷೇತ್ರದ ದುಃಸ್ಥಿತಿಗೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು.

ಮೂರು, ನಾಲ್ಕು ಸಿದ್ಧತಾ ಪರೀಕ್ಷೆಗಳನ್ನು ಮಾಡಬೇಕೆಂದು ಇಲಾಖೆಯವರೇ ಸುತ್ತೋಲೆಗಳನ್ನು ಹೊರಡಿಸುತ್ತಾರೆ. ಎಸ್‌ಎಸ್‌ಎಲ್‌ಸಿ ಸಿದ್ಧತಾ ಪರೀಕ್ಷೆಯ ನಂತರ ಕ್ಷೇತ್ರಶಿಕ್ಷಣಾಧಿಕಾರಿ ಪ್ರತಿ ಶಾಲೆಗೆ ಭೇಟಿ ಕೊಟ್ಟು, ಎಲ್ಲ ಶಿಕ್ಷಕರನ್ನು ಕಲೆಹಾಕಿ, ಆಯಾ ವಿಷಯದಲ್ಲಿನ ಶೇಕಡಾವಾರು ತೇರ್ಗಡೆಯ ಬಗ್ಗೆ ವಿಚಾರಿಸುತ್ತಾರೆ. ನಂತರ, 'ನನಗೆ ಎಲ್ಲ ವಿಷಯಗಳಲ್ಲೂ ಶೇ 100ರಷ್ಟು ಫಲಿತಾಂಶ ಬರಬೇಕು!' ಎಂದು ಮೌಖಿಕ ಆದೇಶ ಹೊರಡಿಸುತ್ತಾರೆ.

ಕರ್ನಾಟಕದ ಉತ್ತರ ಭಾಗದ ಒಂದು ಜಿಲ್ಲೆಯಲ್ಲಿ ಕ್ಷೇತ್ರಶಿಕ್ಷಣಾಧಿಕಾರಿ ತಮ್ಮ ವಲಯದ ಶಾಲಾ ಶಿಕ್ಷಕರ ಸಮಾವೇಶವನ್ನು ಏರ್ಪಡಿಸಿ, 'ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಶೇಕಡಾವಾರು ಫಲಿತಾಂಶವನ್ನು ಹೆಚ್ಚಿಸುವುದರ' ಬಗ್ಗೆ ತರಬೇತಿ ಕೊಡಿಸಿದರು ಎಂದು ವರದಿಯಾಗಿತ್ತು. ಇದು ಶಿಕ್ಷಣದ ಗುರಿಯೇ? ಮಕ್ಕಳನ್ನು ಸುಶಿಕ್ಷಿತರನ್ನಾಗಿಸುವುದು ಎಂದರೆ ಪರೀಕ್ಷೆಯ ಶೇಕಡಾವಾರು ಫಲಿತಾಂಶವನ್ನು ಹೆಚ್ಚಿಸುವುದೇ? ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೇ ಶೈಕ್ಷಣಿಕ ಮೌಲ್ಯಗಳ ಬಗ್ಗೆ ಇಂತಹ ಒಂದು ಚಿಂತನೆ ಇದೆ ಎಂದಾದರೆ, ಶಿಕ್ಷಣ ಕ್ಷೇತ್ರವನ್ನು ಕಾಪಾಡುವವರು ಯಾರು? ಹೀಗಾಗಿ ಜ್ಯೋತಿಯವರು, 'ಸಂಸ್ಕಾರ ಎನ್ನುವುದು ಇಂದು 'ಔಟ್ ಆಫ್ ಸಿಲಬಸ್' ಎಂದು ಹೇಳಿರುವುದರಲ್ಲಿ ಆಶ್ಚರ್ಯವಿಲ್ಲ.

ಆದರೆ ಇವೆಲ್ಲ ಏನೇ ಇರಲಿ, ಶಿಕ್ಷಕರು ಇಂದು ಹೆತ್ತವರ ನಂತರದ ಸ್ಥಾನದಲ್ಲಿ ನಿಂತು ಮಾತೃವಾತ್ಸಲ್ಯದಿಂದ, ಜ್ಞಾನಾರ್ಜನೆಯೊಂದಿಗೆ ಪರಿಪೂರ್ಣವಾಗಿ ಬದುಕುವ ಕಲೆಯನ್ನು ಕೂಡ ಮಕ್ಕಳಿಗೆ ಹೇಳಿಕೊಡುತ್ತಾ, ಕೈಹಿಡಿದು ಮುನ್ನಡೆಸಬೇಕು. ಮೂಲತಃ ಇದೊಂದು ಸಮಾಜ ಸೇವೆ ಎಂದು ಭಾವಿಸಿ ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು.

ಶಿಕ್ಷಕರಾದವರು ಎರಡು ರೀತಿಯಲ್ಲಿ ತಮ್ಮನ್ನು ತಾವು ಸಜ್ಜುಗೊಳಿಸಿಕೊಂಡರೆ, ಆಗ ಮಕ್ಕಳು, ಪೋಷಕರು ಹಾಗೂ ಸಮಾಜದಿಂದ ಅವರಿಗೆ ತನಗೆ ತಾನೇ ಗೌರವ ಲಭಿಸುತ್ತದೆ. ಮೊದಲನೆಯದಾಗಿ, ಅವರು ತಾವು ಬೋಧಿಸಬೇಕಾಗಿರುವ ವಿಷಯಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿರಬೇಕು. ಶಿಕ್ಷಣ ಇಲಾಖೆಯು ಸಂಪನ್ಮೂಲ ವ್ಯಕ್ತಿಗಳ ಮೂಲಕ ಆಸರೆಯಾಗಿ ನಿಲ್ಲಬೇಕು. ಬೋಧಿಸಬೇಕಾಗಿರುವ ವಿಷಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಹೋಗಲಾಡಿಸಿಕೊಳ್ಳಲು ಶಿಕ್ಷಕರಿಗೆ ನೆರವಾಗಬೇಕು.

ಬೋಧನಾ ವಿಧಾನಕ್ಕಿಂತ ಮುಖ್ಯವಾಗಿ ವಿಷಯಜ್ಞಾನದ ಸ್ಪಷ್ಟ ಅರಿವು ಆದ್ಯತೆ ಆಗಬೇಕು. ಏಕೆಂದರೆ ತನಗೇ ಅರ್ಥವಾಗದ್ದನ್ನು ಮಕ್ಕಳಿಗೆ ಹೇಗೆ ತಾನೇ ಅರ್ಥೈಸಲು ಸಾಧ್ಯ?! ಉದಾಹರಣೆಗೆ, ಒಂದು ಕ್ಲಿಷ್ಟವಾದ ಗಣಿತ ಪ್ರಮೇಯವನ್ನು ವಿದ್ಯಾರ್ಥಿಗಳ ಮನಸ್ಸಿಗೆ ನಾಟುವಂತೆ ವಿವರಿಸಿದರೆ, ಆಗ ಆ ಮಗುವಿಗೆ ಆಗುವ ಜ್ಞಾನಾನಂದವೇ ಅದಕ್ಕೆ ಗುರುವಿನ ಬಗ್ಗೆ ಕೃತಜ್ಞತಾಭಾವವನ್ನು ಮೂಡಿಸುತ್ತದೆ. ಅಷ್ಟೇ ಅಲ್ಲದೆ ವಿದ್ಯಾರ್ಥಿಗಳಿಗೆ ಜ್ಞಾನದ ಬಗೆಗಿನ ಆಸೆ ಅಂಕುರಿಸತೊಡಗುತ್ತದೆ.

ಎರಡನೆಯದಾಗಿ, ಪಠ್ಯೇತರವಾದ ಜವಾಬ್ದಾರಿ. ಶಿಕ್ಷಕ ವೃತ್ತಿಯಲ್ಲಿ ತಾನು ಎದುರಿಸುತ್ತಿರುವ ಸಕಲೆಂಟು ಸಮಸ್ಯೆಗಳನ್ನೂ ಪಕ್ಕಕ್ಕೆ ಇಟ್ಟು, ಜೀವನಮೌಲ್ಯಗಳ ಬಗೆಗಿನ ತಿಳಿವಳಿಕೆಯನ್ನು ಮಕ್ಕಳಲ್ಲಿ ಪರೋಕ್ಷವಾಗಿ ಬಿತ್ತನೆ ಮಾಡುವುದು. ಅಂತಹ ಸಂದರ್ಭದಲ್ಲಿ ವ್ಯಷ್ಟಿಯ ಬದುಕಿಗೆ ಸಮಷ್ಟಿಪ್ರಜ್ಞೆಯೂ ಹೇಗೆ ಮುಖ್ಯವಾಗುತ್ತದೆ ಎಂಬ ಅರಿವನ್ನು ಮೂಡಿಸುವುದು. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ವಿವೇಕಾನಂದರಂತಹ ಮಹಾತ್ಮರ ವಿಚಾರಗಳನ್ನು ಅರಿತುಕೊಂಡು ಸಾಧ್ಯವಾದಷ್ಟು ತಮ್ಮ ಜೀವನದಲ್ಲಿ ಅನುಷ್ಠಾನಗೊಳಿಸಿಕೊಳ್ಳಲು ಪದೇಪದೇ ಪ್ರಯತ್ನಿಸುತ್ತಿರಬೇಕು.



ಮಕ್ಕಳನ್ನು ಪ್ರೀತಿ ಮತ್ತು ಗೌರವದಿಂದ ಕಾಣತೊಡಗಿದರೆ ಅವರೂ ಶಿಕ್ಷಕರನ್ನು ಗೌರವಿಸುತ್ತಾರೆ. 'ಆಸೆಯೆಂಬುದು ಅರಸಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ' ಎಂಬ, ಆಯ್ದಕ್ಕಿ ಲಕ್ಕಮ್ಮನ ವಚನದ ಪಾಠ ಮಾಡುವಾಗ ಅದು ತನಗೂ ಪಾಠವಾಗಬೇಕು. ಕನಿಷ್ಠ ಆ ಮಾತು ತನ್ನಲ್ಲಿರುವ ದುರಾಸೆಯನ್ನು ಕೆಣಕಬೇಕಲ್ಲವೇ? ಹಾಗಾದಾಗ ಮಾತ್ರ ಮಕ್ಕಳಿಗೂ ಆಸೆ, ದುರಾಸೆಯ ನಡುವಿನ ವ್ಯತ್ಯಾಸದ ಅರಿವು ಮನಸ್ಸಿಗೆ ಹೊಳೆಯಲು ಸಾಧ್ಯ. ಹೀಗಾಗಿ, ಶಿಕ್ಷಕರ ತರಬೇತಿಯಲ್ಲಿ 'ನೀತಿ ಶಿಕ್ಷಣ'ವೂ ಒಂದು ಬೋಧನಾ ವಿಷಯವಾದರೆ ಒಳಿತು.

ಪ್ರಸ್ತುತ ನಮ್ಮ ದೇಶದ ಎಲ್ಲ ಅಧಃಪತನಗಳಿಗೆ ಅನೈತಿಕತೆಯೇ ಕಾರಣ ಎಂದು ಅನ್ನಿಸಿದರೆ ಸಾಲದು. ಅದು ನಮ್ಮ ಪ್ರಜ್ಞೆಯ ಸ್ತರದಲ್ಲಿ ಕ್ರಿಯಾಶೀಲವಾಗಬೇಕು. 'ಅನೈತಿಕತೆ, ಅಜ್ಞಾನದ ವಿರುದ್ಧ ಹೋರಾಡಲು ಶಿಕ್ಷಕರ ಹುದ್ದೆಗೆ ಆರಿಸಲ್ಪಟ್ಟ ಸೈನಿಕರು ನಾವು' ಎಂದು ಕಂಕಣಬದ್ಧರಾಗಿ ದುಡಿಯಲು ನಿರಂತರ ಸ್ವವಿಮರ್ಶೆ ಮಾಡಿಕೊಳ್ಳುತ್ತ ಜೀವನ ಸಾಗಿಸಬೇಕು. ಆಗ ಶಿಕ್ಷಕನಿಗೆ ಧನಕನಕರಾಶಿ ನೀಡದ ಆನಂದವು ಪ್ರಾಪ್ತವಾಗುತ್ತದೆ.

## ವಾಚಕರ ವಾಣಿ

### ವಿವೇಚನಾರಹಿತ ಹೇಳಿಕೆಗೆ ಕಿಮ್ಮತ್ತಿರದು

'ಸಂಸದ ಡಿ.ಕೆ.ಸುರೇಶ್ ಹಾಗೂ ಶಾಸಕ ವಿನಯ್ ಕುಲಕರ್ಣಿ ಅವರಂತೆ ದೇಶ ವಿಭಜನೆಯ ಹೇಳಿಕೆ ನೀಡುವವರನ್ನು ಗುಂಡಿಕ್ಕಿ ಕೊಲ್ಲುವ ಕಾನೂನು ತನ್ನಿ' ಎಂಬ ಬಿಜೆಪಿ ಮುಖಂಡ ಕೆ.ಎಸ್.ಈಶ್ವರಪ್ಪ ಅವರ ಹೇಳಿಕೆ (ಪ್ರ.ವಾ., ಫೆ. 9) ಇಂದು ದೇಶದ ರಾಜಕೀಯ ತಲುಪಿರುವ ಅಸಹನೆಯ ದಿವಾಳಿತನಕ್ಕೆ ನಿದರ್ಶನದಂತಿದೆ. ಏಕೋ ಏನೋ ಈಶ್ವರಪ್ಪ ಮತ್ತು ಅವರ ಪಕ್ಷದ ಕೆಲವರಿಗೆ 'ನಾಲಿಗೆ ಸೀಳುತ್ತೇವೆ', 'ಗುಂಡಿಕ್ಕುತ್ತೇವೆ', 'ಜೆಸಿಬಿಯಿಂದ ಮನೆ ನೆಲಸಮಗೊಳಿಸುತ್ತೇವೆ', 'ಇ.ಡಿ. ದಾಳಿ ಮಾಡಿಸುತ್ತೇವೆ', 'ಕೆಡವುತ್ತೇವೆ', 'ಜಿನ್ನಾ ಸಂಸ್ಕೃತಿ' ಎಂಬಂತಹ ಮಾತುಗಳು ಬಲು ಆಪ್ಯಾಯಮಾನವಾಗಿ ಕಾಣುತ್ತವೆ ಎನಿಸುತ್ತದೆ. 'ಬೇಕಿದ್ದರೆ ಪಾಕಿಸ್ತಾನವನ್ನೇ ಭಾರತಕ್ಕೆ ಸೇರ್ಪಡೆ ಮಾಡುತ್ತೇವೆ' ಎಂಬ ಈಶ್ವರಪ್ಪ ಅವರ ಹೇಳಿಕೆ ಅತ್ಯಂತ ಬಾಲಿಶವಾಗಿದೆ. ಪಾಕಿಸ್ತಾನ ಸೇರ್ಪಡೆ ಅಷ್ಟು ಸುಲಭದ ಸಂಗತಿ ಎಂಬಂತೆ ಹೇಳುವುದು ಒಣಪೌರುಷದ ಪ್ರತೀಕ ಅಲ್ಲವೇ?

ಡಿ.ಕೆ.ಸುರೇಶ್ ಅವರ ಹೇಳಿಕೆಯನ್ನು ಈ ದೇಶದ ಕಟ್ಟಕಡೆಯ ವ್ಯಕ್ತಿ ಕೂಡ ಬೆಂಬಲಿಸಲಾರ. ಅದನ್ನು ಮಲ್ಲಿಕಾರ್ಜುನ ಖರ್ಗೆ ಅವರೂ ಸಮರ್ಥಿಸಿಲ್ಲ. ಬಿಜೆಪಿಯ ಕೆಲವು ಸಂಸದರು, ಶಾಸಕರು ಎಷ್ಟೆಲ್ಲ ಹಗರಣಗಳಲ್ಲಿ ಭಾಗಿಯಾಗಿರುವುದು ವರದಿಯಾಗುತ್ತಿರುತ್ತದೆ. ಇವರದೇ ಪಕ್ಷದ ಸಂಸದರ ವಿರುದ್ಧ ಮಹಿಳಾ ಕುಸ್ತಿಪಟುಗಳು ತಿಂಗಳಾನುಗಟ್ಟಲೆ ಧರಣಿ ನಡೆಸಿದಾಗ ಈಶ್ವರಪ್ಪ ಅವರ ಧ್ವನಿ ಸಂಪೂರ್ಣ ಅಡಗಿತ್ತು. ಅಮಾಯಕ ವ್ಯಕ್ತಿಯೊಬ್ಬನ ಮುಖಕ್ಕೆ ಬಿಜೆಪಿ ಮುಖಂಡನೊಬ್ಬ ಮೂತ್ರ ವಿಸರ್ಜನೆ ಮಾಡಿದಾಗ ಇವರು ಎಲ್ಲಿದ್ದರು? ಈಗ ಸಂಸತ್ ಚುನಾವಣೆ ಹಿನ್ನೆಲೆಯಲ್ಲಿ ಬಾಯಿಗೆ ಬಂದಂತೆ ಮಾತನಾಡುವುದು, ತಮ್ಮದೇ ಪಕ್ಷದವರಿಂದ ಮೂಲೆಗುಂಪಾಗಿರುವ ಈಶ್ವರಪ್ಪ ಅವರಿಗೆ ಶೋಭಿಸದು. ಸಂಸದೀಯ ಭಾಷೆಯಲ್ಲಿ ಖಂಡಿಸುವುದು ಸಂಸದೀಯ ವ್ಯವಸ್ಥೆಯಲ್ಲಿ ವಿಶ್ವಾಸವುಳ್ಳ ಹಿರಿಯ ರಾಜಕಾರಣಿ ಮಾಡಬಹುದಾದ ಕೆಲಸ. ರಾಜಕಾರಣಿ ಆದವರು ಮಾತನಾಡುವ ಮುನ್ನ ತಮ್ಮ ಭಾಷೆ, ಸ್ಥಾನಮಾನ, ನಾಳಿನ ಸಾರ್ವಜನಿಕ ಬದುಕು, ಯುವಜನರ ಭವಿಷ್ಯ ಎಲ್ಲವನ್ನೂ ನೆನಪಿನಲ್ಲಿ ಇಡಬೇಕು. ತಪ್ಪಿದರೆ ಅವರ ಹೇಳಿಕೆಗೆ ಕವಡೆ ಕಾಸಿನ ಕಿಮ್ಮತ್ತೂ ಇರುವುದಿಲ್ಲ.

**ಎಂ.ಜಿ.ರಂಗಸ್ವಾಮಿ,** ಹಿರಿಯೂರು

### ಸಣ್ಣಪುಟ್ಟ ಆಮಿಷಕ್ಕೆ ಒಲಿಯುವರೇ?

ಬಜೆಟ್ ಅಧಿವೇಶನದ ಕಲಾಪಕ್ಕೆ ಗೈರುಹಾಜರಾಗದೆ ಸಮಯಕ್ಕೆ ಸರಿಯಾಗಿ ಬರುವಂತೆ ಶಾಸಕರನ್ನು ಪ್ರೋತ್ಸಾಹಿಸಲು ಬಗೆಬಗೆಯ ರುಚಿಕಟ್ಟಾದ ಉಪಾಹಾರದ ವ್ಯವಸ್ಥೆಯನ್ನು ವಿಧಾನಸೌಧದಲ್ಲಿಯೇ ಮಾಡಲು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಮುಂದಾಗಿರುವುದಾಗಿ ವರದಿಯಾಗಿದೆ. ಕಲಾಪಕ್ಕೆ ಶಾಸಕರನ್ನು ಸೆಳೆಯಲು ಸಭಾಧ್ಯಕ್ಷರು ಹೊಸ ಹೊಸ ಮಾರ್ಗಗಳ ಬಗ್ಗೆ ಯೋಚಿಸುತ್ತಿರುವುದು ಮೆಚ್ಚತಕ್ಕ ಸಂಗತಿ. ಆದರೆ ಜನಪ್ರತಿನಿಧಿಗಳು ಇಂತಹ ಸಣ್ಣಪುಟ್ಟ ಆಮಿಷಗಳಿಗೆ ಒಲಿಯುವವರಲ್ಲ. ಬಹಳಷ್ಟು ಹಣ ಹಂಚಿ, ಮತದಾರರ ಕಾಲು ಹಿಡಿದು, ನೂರಾರು ತಂತ್ರಗಳನ್ನು ಹೆಣೆದು ಗೆದ್ದುಬಂದಿರುವ ಅವರಿಗೆ ಸದನದ ಹೊರಗೆ ಲಾಭದಾಯಕ ಕೆಲಸಗಳು ಇರುತ್ತವೆ!

**ಕಲರ್‌ಫುಲ್ ಆಗಿದೆ!**

ಯುಪಿಎ, ಎನ್‌ಡಿಎ ಆಡಳಿತಾವಧಿಯ
ವೈಫಲ್ಯಗಳ 'ಕಪ್ಪು-ಬಿಳುಪು'
ಪತ್ರ ಸಮರ ಸಾಗಿದೆ.
ಆದರೆ… ಇವರ ಮಾತು,
ಕೆಸರೆರಚಾಟ, ಸಮರ್ಥನೆಗಳು
ದಿನವೂ ಮಂದಿಗೆ
ಕಲರ್‌ಫುಲ್ ಆಗೇ ಇವೆ!

**ನಗರ ಗುರುದೇವ್ ಭಂಡಾರ್ಕರ್**
ಹೊಸನಗರ

ಕಲಾಪದಲ್ಲಿ ಶಾಸಕರು, ಸಚಿವರು ಭಾಗವಹಿಸದೇ ಇರುವುದು ನಿಜಕ್ಕೂ ಗಂಭೀರವಾದ ಸಮಸ್ಯೆ. ಬೆಳಗಾವಿಯಲ್ಲಿ ಈ ಬಾರಿ ನಡೆದ ಅಧಿವೇಶನದಲ್ಲಿ ಈ ಸಮಸ್ಯೆ ಹೆಚ್ಚು ದೊಡ್ಡದಾಗಿ ಕಾಣುತ್ತಿತ್ತು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಗಾಲಿ ಕುರ್ಚಿಯಲ್ಲಿ ಕುಳಿತು ನಿಯಮಿತವಾಗಿ ಸದನಕ್ಕೆ ಬರುತ್ತಿದ್ದ ಬದ್ಧತೆಯು ಈ ಸಂದರ್ಭದಲ್ಲಿ ನೆನಪಾಗುತ್ತದೆ. 60- 80ರ ಅವಧಿಯಲ್ಲಿ ಶಾಸಕರಾಗಿದ್ದವರು ಅಧಿವೇಶನ ಮುಗಿದ ನಂತರ ತಮ್ಮ ತಮ್ಮ ಮತಕ್ಷೇತ್ರಗಳಲ್ಲಿ ಸಭೆ ನಡೆಸಿ, ಸದನದಲ್ಲಿ ಚರ್ಚೆಯಾದ ವಿಷಯಗಳನ್ನು ನಾಗರಿಕರಿಗೆ ತಿಳಿಸುತ್ತಿದ್ದರು. ಅವರ ಪ್ರತಿಕ್ರಿಯೆಗಳನ್ನು ಸಂಗ್ರಹಿಸುತ್ತಿದ್ದರು. ಈಗ ಅದೆಲ್ಲ ಮಾಯವಾಗಿದೆ. ಪ್ರತಿದಿನ ಕಲಾಪದ ಕೊನೆಯಲ್ಲಿ, ಅಂದು ಗೈರುಹಾಜರಾದ, ಸಮಯಕ್ಕೆ ಸರಿಯಾಗಿ ಬಾರದ ಶಾಸಕರ ಹೆಸರುಗಳನ್ನು ಪ್ರಕಟಿಸಬೇಕು. ಆ ಹೆಸರುಗಳು ಮಾಧ್ಯಮಗಳಲ್ಲಿ ಪ್ರಕಟವಾಗುವಂತೆಯೂ ವ್ಯವಸ್ಥೆ ಮಾಡಬೇಕು. ಇದರಿಂದ ಉತ್ತಮ ಪರಿಣಾಮ ದೊರೆಯಬಹುದು.

**ಮಲ್ಲಿಕಾರ್ಜುನ ಹೆಗ್ಗಳಗಿ,** ಮುಧೋಳ

### ಪ್ರಶಸ್ತಿಗೆ ಆಯ್ಕೆ: ಮಾನದಂಡ ಬಹಿರಂಗವಾಗಲಿ

ಲಾಲ್‌ಕೃಷ್ಣ ಅಡ್ವಾಣಿ ಅವರಿಗೆ 'ಭಾರತರತ್ನ' ಪ್ರಶಸ್ತಿ ಘೋಷಣೆಯಾದಾಗ, ಅವರ ಬಗೆಗೆ ವಿವಿಧ ರಾಜಕೀಯ ನಾಯಕರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು (ಪ್ರ.ವಾ., ಫೆ. 4) ಗಮನಿಸಿದರೆ, ಅವರು ಕೆಲವು ಅಂಶಗಳನ್ನು ಬೇಕೆಂದೇ ಮರೆಮಾಚಿದ್ದಾರೆ ಅನಿಸುತ್ತದೆ. 'ಸಾರ್ವಜನಿಕ ಬದುಕು ಕಳಂಕರಹಿತವಾಗಿತ್ತು' ಎಂಬ ದೇವೇಂದ್ರ ಫಡಣವೀಸ್ ಅವರ ಹೇಳಿಕೆ ಸರಿಯಲ್ಲ. ಬಾಬರಿ ಮಸೀದಿಯನ್ನು ಕೆಡವಿದ್ದು ತಮ್ಮ ವೈಫಲ್ಯ ಎಂದು ಅಡ್ವಾಣಿ ಒಪ್ಪಿಕೊಂಡಿದ್ದರು. 'ನಾನು ಮೊದಲು ಉಮಾಭಾರತಿ, ನಂತರ ಪ್ರಮೋದ್ ಮಹಾಜನ್ ಅವರನ್ನು ಕಳುಹಿಸಿ, (ಗುಂಬಜ್) ಮೇಲೆ ಹತ್ತಿದ್ದವರನ್ನು ಇಳಿಸುವಂತೆ ಸೂಚಿಸಿದೆ. ಅವರು ಯಶಸ್ವಿಯಾಗಲಿಲ್ಲ. ನಾನೇ ಹೋಗುತ್ತೇನೆ ಎಂದಾಗ ಪೊಲೀಸರು ಬಿಡಲಿಲ್ಲ' ಎಂದು ಟಿ.ವಿ. ಚಾನೆಲ್‌ವೊಂದರ ಸಂದರ್ಶನದಲ್ಲಿ ಹೇಳಿದ್ದರು. 'ಅದು ನಮ್ಮ ಸಂಸ್ಕಾರಕ್ಕೆ ವಿರುದ್ಧ, ಖಂಡನೀಯ' ಎಂಬ ಆರ್‌ಎಸ್‌ಎಸ್ ನಾಯಕ ರಜ್ಜೂ ಭೈಯಾ ಅವರ ಮಾತನ್ನು ಅನುಮೋದಿಸಿದ್ದರು. ಅಂತಿಮವಾಗಿ, ಆ ಅತಿರೇಕದ ನಡತೆಗೆ ಯಾರಿಗೂ ಶಿಕ್ಷೆಯಾಗಲಿಲ್ಲ. ಪರೋಕ್ಷವಾಗಿಯಾದರೂ ಅಡ್ವಾಣಿ ಇದಕ್ಕೆ ಹೊಣೆಗಾರರಲ್ಲವೇ?

'ಪದ್ಮ' ಪ್ರಶಸ್ತಿಗಳಲ್ಲೂ ತಮ್ಮವರ ಕೆಲವು ಹೆಸರುಗಳನ್ನು ಸಾರ್ವಜನಿಕ ವಲಯ ವರ್ಗದಡಿ ಸೇರಿಸಿಬಿಡಲಾಗುತ್ತದೆ. ಉದಾಹರಣೆಗೆ, ಕೇರಳದ ಓ.ರಾಜಗೋಪಾಲ್ (94). ಜನಸಂಘದ ಕೆಲಸ, ಶಾಸಕ, ರಾಜ್ಯಸಭಾ ಸದಸ್ಯ ಎಂಬುದನ್ನು ಬಿಟ್ಟರೆ ಅವರ ಸೇವೆಯ ಬಗ್ಗೆ ಮಾಹಿತಿ ಇಲ್ಲ, ಪದ್ಮವಿಭೂಷಣ ನೀಡಲಾಗಿದೆ. ಆಯ್ಕೆ ಸಮಿತಿಯಲ್ಲಿ ಯಾರಿದ್ದರು, ಯಾವ ಮಹತ್ವದ ಕಾರ್ಯ, ಸಾಧನೆಯನ್ನು ಪರಿಗಣಿಸಲಾಗಿದೆ ಎಂಬುದನ್ನು ಕೇಂದ್ರ ಸರ್ಕಾರವು ಪ್ರಶಸ್ತಿ ಪ್ರಕಟಣೆ ಸಂದರ್ಭದಲ್ಲಿ ಬಹಿರಂಗಪಡಿಸಲಿ. ಅಡ್ವಾಣಿ ಅವರನ್ನು ಮುತ್ಸದ್ದಿ ಎಂದ ನಿತೀಶ್ ಕುಮಾರ್ ಈಚೆಗೆ ಮಾಡಿದ್ದೇನು? ಒಟ್ಟಿನಲ್ಲಿ ಈ ಭಾರತರತ್ನ ಘೋಷಣೆ ಒಂದು 'ರಾಜಕೀಯ'ಪ್ರೇರಿತ ನಿರ್ಧಾರ.

**ಎಚ್.ಎಸ್.ಮಂಜುನಾಥ,** ಗೌರಿಬಿದನೂರು


Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ತೀವ್ರ ಬರದ ಸ್ಥಿತಿಯಲ್ಲಿ ರೈತರಿಗಾಗುವ ಆರ್ಥಿಕ ನಷ್ಟವನ್ನು ತುಂಬಿಕೊಡುವುದರಲ್ಲಿ ಬೆಳೆ ವಿಮೆ ಯೋಜನೆಯದ್ದು ಪ್ರಮುಖ ಪಾತ್ರ. ಈ ಯೋಜನೆಯ ಅನುಷ್ಠಾನದಲ್ಲಿ ಕೇಂದ್ರ ಸರ್ಕಾರದ ಪಾಲೇ ಹೆಚ್ಚು ಇತ್ತು. ರೈತರಿಗೆ ಬೆಳೆ ವಿಮೆ ಭದ್ರತೆಯನ್ನು ಒದಗಿಸುವಲ್ಲಿ ರೈತರಿಗೆ ಹೆಚ್ಚು ಹೊರೆಯಾಗದಂತೆ ಯುಪಿಎ ಸರ್ಕಾರವು ಈ ಯೋಜನೆಯ ನಿಯಮಗಳನ್ನು ರೂಪಿಸಿತ್ತು. ಆದರೆ ಈ ಯೋಜನೆಯ ನಿಯಮಗಳನ್ನು ಬದಲಿಸಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು, ತನ್ನ ಆರ್ಥಿಕ ಹೊಣೆಗಾರಿಕೆಯನ್ನು ಕಡಿಮೆ ಮಾಡಿಕೊಂಡಿದೆ. ರೈತರ ಮೇಲಿನ ಹೊರೆ ಹೆಚ್ಚಾಗುತ್ತಿದೆ

**ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆ**

# ಇಳಿಯುತ್ತಿದೆ ಕೇಂದ್ರದ ವೆಚ್ಚ...

ಪ್ರಜಾವಾಣಿ ವಾರ್ತೆ

**ಪ್ರಾಕೃತಿಕ ವಿಕೋಪಗಳ** ಸಂದರ್ಭದಲ್ಲಿ ರೈತರಿಗೆ ಬೆಳೆ ನಷ್ಟವಾದರೆ, ಅದರ ಆರ್ಥಿಕ ನಷ್ಟವನ್ನು ತುಂಬಿಕೊಡುವ ವಿಮೆ ಯೋಜನೆಗಳು ಭಾರತದಲ್ಲಿ 1970ರ ದಶಕದಲ್ಲೇ ಆರಂಭವಾಗಿದ್ದವು. 2010ರವರೆಗೆ ಪ್ರಾಯೋಗಿಕವಾಗಿ ಅಂತಹ ಹಲವು ಯೋಜನೆಗಳನ್ನು ಜಾರಿಗೆ ತರಲಾಗಿತ್ತು. 1999–2000ನೇ ಆರ್ಥಿಕ ವರ್ಷದಲ್ಲಿ ಪ್ರಾಯೋಗಿಕ ಯೋಜನೆಯನ್ನೇ ದೊಡ್ಡ ಪ್ರಮಾಣದಲ್ಲಿ ಜಾರಿಗೆ ತರಲಾಗಿತ್ತು. 2013–14ನೇ ಆರ್ಥಿಕ ವರ್ಷದಲ್ಲಿ ಈ ಎಲ್ಲಾ ಯೋಜನೆಗಳನ್ನು ಒಗ್ಗೂಡಿಸಿದ ಯುಪಿಎ ಸರ್ಕಾರವು 'ರಾಷ್ಟ್ರೀಯ ಬೆಳೆ ವಿಮೆ ಯೋಜನೆ'ಯನ್ನು ಜಾರಿಗೆ ತಂದಿತು. 2016ರಲ್ಲಿ ಈ ಯೋಜನೆಯನ್ನು ಮತ್ತಷ್ಟು ಸುಧಾರಿಸಿದ ಕೇಂದ್ರದ ಎನ್‌ಡಿಎ ಸರ್ಕಾರವು, 'ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆ' ಎಂದು ಮರುನಾಮಕರಣ ಮಾಡಿತು. ರೈತರಿಗೆ ಅನುಕೂಲ ತಂದುಕೊಟ್ಟಿದ್ದ ಈ ಯೋಜನೆಯಿಂದ ಕೇಂದ್ರ ಸರ್ಕಾರದ ಮೇಲಿನ ಹೊಣೆಗಾರಿಕೆಯೂ ಏರಿಕೆಯಾಗುತ್ತಿತ್ತು. 2020ರಲ್ಲಿ ಯೋಜನೆಯ ನಿಯಮಗಳಿಗೆ ಬಿಜೆಪಿ ಸರ್ಕಾರವು ಬದಲಾವಣೆ ತಂದಿತು. ಅಲ್ಲಿಂದ ಕೇಂದ್ರ ಸರ್ಕಾರದ ಆರ್ಥಿಕ ಹೊಣೆಗಾರಿಕೆ ಇಳಿಯುತ್ತಲೇ ಇದೆ.




ಯುಪಿಎ ಜಾರಿಗೆ ತಂದಿದ್ದ ರಾಷ್ಟ್ರೀಯ ಬೆಳೆ ವಿಮೆ ಯೋಜನೆಯಲ್ಲಿ ಮತ್ತು ಎನ್‌ಡಿಎ ಜಾರಿಗೆ ತಂದಿದ್ದ ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆಯಲ್ಲಿ ಬೆಳೆ ಸಾಲ ಪಡೆದ ರೈತರು ಬೆಳೆ ವಿಮೆ ಮಾಡಿಸುವುದು ಕಡ್ಡಾಯವಾಗಿತ್ತು. ಮುಂಗಾರು ಬೆಳೆಗೆ ವಿಮೆ ಮಾಡಿಸಿದರೆ, ವಿಮೆ ಮಾಡಿಸಿದ ಮೊತ್ತದ ಶೇ 2ರಷ್ಟನ್ನು ಮಾತ್ರ ಪ್ರೀಮಿಯಂ ಎಂದು ರೈತರು ಕಟ್ಟಬೇಕಿತ್ತು. ಉಳಿದ ಪ್ರೀಮಿಯಂ ಮೊತ್ತವನ್ನು ಕೇಂದ್ರ ಸರ್ಕಾರವು ಶೇ 50ರಷ್ಟು ಮತ್ತು ರಾಜ್ಯ ಸರ್ಕಾರವು ಶೇ 50ರಷ್ಟು ಕಟ್ಟುತ್ತಿದ್ದವು. ಕೇಂದ್ರ ಸರ್ಕಾರವು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ರೈತರಿಗೂ ಈ ಪ್ರೀಮಿಯಂ ಕಟ್ಟಬೇಕಿದ್ದರಿಂದ ಅದು ದೊಡ್ಡ ಮೊತ್ತವಾಗುತ್ತಿತ್ತು. 2018–19ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಹೀಗೆ ₹8,903 ಕೋಟಿಯನ್ನು ವೆಚ್ಚ ಮಾಡಿತ್ತು. 2019–20ನೇ ಸಾಲಿನಲ್ಲಿ ಈ ಮೊತ್ತ ₹10,062 ಕೋಟಿಗೆ ಏರಿಕೆಯಾಗಿತ್ತು. ಆನಂತರವೇ ಕೇಂದ್ರದ ಬಿಜೆಪಿ ಸರ್ಕಾರವು ಯೋಜನೆಯ ನಿಯಮಗಳನ್ನು ಬದಲಿಸಿದ್ದು.


2020ರಲ್ಲಿ ಕೇಂದ್ರ ಸರ್ಕಾರವು 'ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆ ಕಾರ್ಯಾಚರಣಾ ಮಾರ್ಗಸೂಚಿಗಳು' ಎಂಬ ಕೈಪಿಡಿಯನ್ನು ಜಾರಿಗೆ ತಂದಿತು. 2020–21ನೇ ಸಾಲಿನಿಂದಲೇ ಅದನ್ನು ಜಾರಿಗೆ ತರಬೇಕು ಎಂದು ರಾಜ್ಯ ಸರ್ಕಾರಗಳಿಗೆ ಸೂಚಿಸಿತು. ಈ ಮಾರ್ಗಸೂಚಿಗಳಲ್ಲಿ ಹಲವು ಬದಲಾವಣೆಗಳಿದ್ದರೂ, ಪ್ರಮುಖ ಬದಲಾವಣೆ ಬೆಳೆ ಸಾಲಕ್ಕೆ ಸಂಬಂಧಿಸಿದ್ದು. ಈ ಹಿಂದೆ ಜಾರಿಯಲ್ಲಿದ್ದ ನಿಯಮದ ಪ್ರಕಾರ, ಬೆಳೆ ಸಾಲ ಪಡೆದ ರೈತ ಕಡ್ಡಾಯವಾಗಿ ಬೆಳೆ ವಿಮೆ ಮಾಡಿಸಬೇಕಿತ್ತು. ಆ ಬೆಳೆ ವಿಮೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕಡ್ಡಾಯವಾಗಿ ಬೆಳೆ ವಿಮೆ ಪ್ರೀಮಿಯಂ ಸಹಾಯಧನ ಒದಗಿಸಬೇಕಿತ್ತು. ತಿದ್ದುಪಡಿ ತರಲಾದ ನಿಯಮದಲ್ಲಿ, ಬೆಳೆ ಸಾಲ ಪಡೆದ ರೈತರು ಕಡ್ಡಾಯವಾಗಿ ಬೆಳೆ ವಿಮೆ ಮಾಡಿಸಬೇಕಿಲ್ಲ ಎಂದು ಹೇಳಲಾಯಿತು. ಬೆಳೆ ಸಾಲ ಪಡೆದ ಮತ್ತು ಬೆಳೆ ಸಾಲ ಪಡೆಯದೇ ಇರುವ ರೈತರೆಲ್ಲರಿಗೂ ಬೆಳೆ ವಿಮೆ ಮಾಡಿಸುವುದು ಐಚ್ಛಿಕ ಎಂದು ಹೊಸ ನಿಯಮವನ್ನು ಸೇರಿಸಲಾಯಿತು.


ಇದರ ಜತೆಯಲ್ಲಿ ಬೆಳೆ ವಿಮೆ ಮೇಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುತ್ತಿದ್ದ ವಿಮೆ ಪ್ರೀಮಿಯಂ ಸಹಾಯಧನದ ಪ್ರಮಾಣಕ್ಕೂ ಮಿತಿ ಹೇರಲಾಯಿತು. ಕೇಂದ್ರ ಸರ್ಕಾರವು ವಿಮೆ ಪ್ರೀಮಿಯಂ ಸಹಾಯಧನದ ರೂಪದಲ್ಲಿ ನೀಡಬೇಕಿದ್ದ ಮೊತ್ತಕ್ಕೆ ಒಟ್ಟು ವಿಮೆ ಪ್ರೀಮಿಯಂನ ಶೇ 25ರಷ್ಟರ ಮಿತಿ (ಮಳೆಯಾಶ್ರಿತ ಬೆಳೆಗೆ ಶೇ 30ರ ಮಿತಿ) ಹೇರಿತು. ಕೆಲವು ರಾಜ್ಯ ಸರ್ಕಾರಗಳು ತಾವೂ ಅಷ್ಟೇ ಮಿತಿಯನ್ನು ಅನುಸರಿಸಿದವು. ಕೆಲವು ರಾಜ್ಯಗಳು ಈ ಮಿತಿಯನ್ನು ಹೆಚ್ಚಿಸಿಕೊಂಡವು. ಹೀಗೆ ಮಿತಿಯನ್ನು ಸಡಿಲಿಸಿ ರೈತರಿಗೆ ಹೆಚ್ಚಿನ ಪ್ರಮಾಣದ ವಿಮೆ ಪ್ರೀಮಿಯಂ ಸಹಾಯಧನ ನೀಡಿದ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಕರ್ನಾಟಕವು ಈ ಮಿತಿಯನ್ನು ನೀರಾವರಿ ಜಿಲ್ಲೆಗಳಿಗೆ ಶೇ 35ಕ್ಕೆ ಮತ್ತು ಮಳೆಯಾಶ್ರಿತ ಜಿಲ್ಲೆಗಳಿಗೆ ಶೇ 40ಕ್ಕೆ ಏರಿಕೆ ಮಾಡಿತು. ಕರ್ನಾಟಕದಂತಹ ರಾಜ್ಯ ಸರ್ಕಾರಗಳ ಹೊರೆ ಸ್ವಲ್ಪ ಕಡಿಮೆಯಾದರೂ, ಅವು ಕೇಂದ್ರ ಸರ್ಕಾರಕ್ಕಿಂತ ಹೆಚ್ಚನ್ನು ವೆಚ್ಚ ಮಾಡಬೇಕಾಯಿತು. ಕೇಂದ್ರ, ರಾಜ್ಯ ಸರ್ಕಾರಗಳು ನೀಡಿದ ಸಹಾಯಧನ ಮತ್ತು ರೈತರು ಕಡ್ಡಾಯವಾಗಿ ಕಟ್ಟಬೇಕಿದ್ದ ಶೇ 2ರಷ್ಟು ಮೊತ್ತವನ್ನು ಹೊರತುಪಡಿಸಿ, ಉಳಿದ ಪ್ರೀಮಿಯಂ ಮೊತ್ತವನ್ನು ರೈತರೇ ಭರಿಸಬೇಕು ಎಂದು ಕೇಂದ್ರ ಸರ್ಕಾರ ಹೇಳಿತು. ಇದರಿಂದ ರೈತರ ಮೇಲಿನ ಹೊರೆ ಹೆಚ್ಚಾಯಿತು.

ಈ ಬದಲಾವಣೆಗಳಿಂದ ಕೇಂದ್ರ ಸರ್ಕಾರದ ಹೊರೆ ಭಾರಿ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂಬುದನ್ನು ಕೇಂದ್ರ ಸರ್ಕಾರದ ದಾಖಲೆಗಳೇ ಹೇಳುತ್ತವೆ. ಕೇಂದ್ರದ ಬಜೆಟ್ ವೆಚ್ಚ ಶೀರ್ಷಿಕೆಗಳು, ರಾಜ್ಯಸಭೆ ಮತ್ತು ಲೋಕಸಭೆಗೆ ಕೇಂದ್ರ ಸರ್ಕಾರ ನೀಡಿದ ಮಾಹಿತಿಗಳು ಇದನ್ನೇ ಸೂಚಿಸುತ್ತವೆ. 2019–20ರಲ್ಲಿ ಈ ಯೋಜನೆಗೆ ವಿಮೆ ಪ್ರೀಮಿಯಂ ಸಹಾಯಧನ ಎಂದು ಕೇಂದ್ರ ಸರ್ಕಾರವು ₹10,062 ಕೋಟಿಯನ್ನು ವೆಚ್ಚ ಮಾಡಿತ್ತು. ಆದರೆ ಬದಲಾದ ನಿಯಮಗಳು ಜಾರಿಗೆ ಬಂದ ಮರುವರ್ಷವೇ ಈ ವೆಚ್ಚವು ₹ 8,734 ಕೋಟಿಗಳಿಗೆ ಇಳಿಕೆಯಾಯಿತು. ನಂತರದ ವರ್ಷಗಳಲ್ಲಿ ಈ ವೆಚ್ಚ ಇನ್ನಷ್ಟು ಇಳಿಕೆಯಾಗಿದೆ. ಈ ಹಿಂದಿನ ಐದು ಆರ್ಥಿಕ ವರ್ಷಗಳಲ್ಲಿ ದೇಶದ ಹಲವೆಡೆ ತೀವ್ರ ಪ್ರವಾಹ ಮತ್ತು ತೀವ್ರ ಬರ ತಲೆದೋರಿತ್ತು. ಹೀಗಾಗಿ ಹೆಚ್ಚಿನ ರೈತರು ಬೆಳೆ ವಿಮೆಯ ಮೊರೆ ಹೋಗಿದ್ದಾರೆ. ಆದರೆ, ಈ ಯೋಜನೆ ಮೇಲೆ ಕೇಂದ್ರ ಸರ್ಕಾರವು ಮಾಡುತ್ತಿರುವ ವೆಚ್ಚ ಮಾತ್ರ ಇಳಿಕೆಯಾಗುತ್ತಿದೆ.


ಈ ಬಗ್ಗೆಯೂ ರಾಜ್ಯಸಭೆಯಲ್ಲಿ ಕೇಂದ್ರ ಕೃಷಿ ಸಚಿವಾಲಯವನ್ನು ಪ್ರಶ್ನಿಸಲಾಗಿದೆ. ನಿಯಮ ಬದಲಾವಣೆ ಮಾಡಿದ್ದರಿಂದ ಮತ್ತು ಪ್ರೀಮಿಯಂ ಸಹಾಯಧನ ಹಂಚಿಕೆಯನ್ನು ಕಡಿಮೆ ಮಾಡಿದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೇಲೆ ಆದ ಆರ್ಥಿಕ ಪರಿಣಾಮಗಳೇನು ಎಂದು ಪ್ರಶ್ನಿಸಲಾಗಿದೆ. ಇದಕ್ಕೆ ಉತ್ತರ ನೀಡಿರುವ ಕೃಷಿ ಸಚಿವಾಲಯವು, ರಾಜ್ಯಗಳ ಮೇಲಿನ ಪರಿಣಾಮದ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳಿದೆ. ಜತೆಗೆ, ತಾನು ಈ ಯೋಜನೆ ಮೇಲೆ ಮಾಡುತ್ತಿರುವ ವಿಮೆ ಪ್ರೀಮಿಯಂ ಸಹಾಯಧನ ಮತ್ತು ಆಡಳಿತಾತ್ಮಕ ವೆಚ್ಚದ ವಿವರವನ್ನೂ ನೀಡಿದೆ. ಆ ವೆಚ್ಚವು ಇಳಿಕೆಯಾಗುತ್ತಲೇ ಇದೆ ಎಂಬುದನ್ನು ಆ ದತ್ತಾಂಶಗಳು ಹೇಳುತ್ತವೆ.


## ಕೇಂದ್ರ ಸರ್ಕಾರದ ಪ್ರೀಮಿಯಂ ಸಹಾಯಧನ ಕುಸಿತ





ಬೆಳೆ ವಿಮೆ ಯೋಜನೆ ಮೇಲಿನ ಕೇಂದ್ರ ಸರ್ಕಾರದ ವೆಚ್ಚ ಕಡಿತ










### ಬೆಳೆ ವಿಮೆ ಕ್ಲೇಮುಗಳಿಗೆ ಪರಿಹಾರ ಪಾವತಿಯಾದ ವಿವರ

(ಆಯಾ ಆರ್ಥಿಕ ವರ್ಷದ ಮುಂಗಾರು ಬೆಳೆಗಳಿಗೆ ಸಂಬಂಧಿಸಿದ ವಿವರ)

(ಕೋಟಿಗಳಲ್ಲಿ)




**ಆಧಾರ:** ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆ ಪರಿಷ್ಕೃತ ಮಾರ್ಗಸೂಚಿಗಳು, ಬೆಳೆ ವಿಮೆ ಯೋಜನೆಯನ್ನು ಅನುಷ್ಠಾನ ಮಾಡಲು ಕರ್ನಾಟಕ ಸರ್ಕಾರವು ಹೊರಡಿಸಿದ ಅಧಿಸೂಚನೆಗಳು, ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಕೃಷಿ ಸಚಿವಾಲಯ ನೀಡಿದ ಉತ್ತರಗಳು

# ಪುಟಾಣಿಗಳಲ್ಲಿ ಪೌರ ಪ್ರಜ್ಞೆ ಮೂಡಿಸುವ ಸಿಎಂಸಿಎ

ಪ್ರಜಾವಾಣಿ ವಾರ್ತೆ

**ಸಂಸ್ಥೆ ಪರಿಚಯ**

**ಪ್ರಜಾಪ್ರಭುತ್ವ**, ಸರ್ಕಾರ, ಸಾಮಾಜಿಕ ಸಮಾನತೆ, ಲಿಂಗ ಸಮಾನತೆ, ಬಹುತ್ವ ಇವೆಲ್ಲವೂ ಹಿರೀಕರ ಚರ್ಚೆ. 18 ವರ್ಷ ತುಂಬಿ, ಹಲವು ಬಾರಿ ಮತ ಚಲಾಯಿಸಿದ ಮೇಲೂ ಯುವಕರಿಗೆ ಈ ಬಗ್ಗೆ ಆಸಕ್ತಿಯಾಗಲೀ, ಜಾಗೃತಿಯಾಗಲೀ ಇರುವುದಿಲ್ಲ. ಇನ್ನು ಪುಟ್ಟ ಮಕ್ಕಳಂತೂ ಈ ವಿಷಯಗಳಿಂದ ದೂರ ಇರಬೇಕು ಎಂದೇ ಪೋಷಕರು ಬಯಸುತ್ತಾರೆ. ಪಾಠ ಕಲಿಯಬೇಕು, ಅಂಕ ಗಳಿಸಬೇಕು. ಇವಷ್ಟೇ ಮಕ್ಕಳ ಜವಾಬ್ದಾರಿ ಎನ್ನುವುದು ಸಾಮಾನ್ಯ ಕಲ್ಪನೆ. ಆದರೆ, ಪ್ರಜಾಪ್ರಭುತ್ವ, ಸಾಮಾಜಿಕ ಸಮಾನತೆ, ಬಹುತ್ವ, ಸೌಹಾರ್ದ– ಇವು ಯಾವುವೂ ಮಕ್ಕಳಿಂದ ದೂರ ತಳ್ಳಬೇಕಾದ ವಿಷಯವಲ್ಲ. ಮುಂದೆ ಜವಾಬ್ದಾರಿಯುತ ಪ್ರಜೆಯಾಗಲು ಇವುಗಳ ಕುರಿತ ಸ್ಪಷ್ಟ ಚಿತ್ರಣ ಅಗತ್ಯ. ಈ ಅಗತ್ಯವನ್ನು ಮನಗಂಡು ಬೆಂಗಳೂರಿನ ಚಿಲ್ಡ್ರನ್ಸ್ ಮೂವ್‌ಮೆಂಟ್ ಫಾರ್ ಸಿವಿಕ್ ಅವೇರ್‌ನೆಸ್ ಸಂಸ್ಥೆಯು (ಸಿಎಂಸಿಎ) ಎರಡು ದಶಕಕ್ಕೂ ಹೆಚ್ಚಿನ ಅವಧಿಯಿಂದ ಕೆಲಸ ಮಾಡುತ್ತಿದೆ.

'ಪಬ್ಲಿಕ್ ಅಫೇರ್ಸ್ ಸೆಂಟರ್' ಸಂಸ್ಥೆಯ ಯೋಜನೆಯಾಗಿ 'ಚಿಲ್ಡ್ರನ್ಸ್ ಮೂವ್‌ಮೆಂಟ್ ಫಾರ್ ಸಿವಿಕ್ ಅವೇರ್‌ನೆಸ್' ಹುಟ್ಟುಪಡೆಯಿತು. ನಂತರದ ದಿನಗಳಲ್ಲಿ ಈ ಯೋಜನೆಯೇ ಸಂಸ್ಥೆಯ ರೂಪ ಪಡೆದುಕೊಂಡಿತು. ಮಂಜುನಾಥ ಸದಾಶಿವ, ವೃಂದಾ ಭಾಸ್ಕರ್ ಹಾಗೂ ಪ್ರಿಯಾ ಕೃಷ್ಣಮೂರ್ತಿ ಅವರು ಸೇರಿ ಈ ಸಂಸ್ಥೆಯನ್ನು 2000ನೇ ಇಸ್ವಿಯಲ್ಲಿ ಹುಟ್ಟುಹಾಕಿದರು.

ಮಕ್ಕಳನ್ನು ಜವಾಬ್ದಾರಿಯುತ ಪ್ರಜೆಯಾಗಿಸಲು, ಅವರಲ್ಲಿ ಜೀವನ ಕೌಶಲಗಳನ್ನು ತುಂಬಲು ಈ ಸಂಸ್ಥೆ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಸಂಸ್ಥೆಯ ಕಾರ್ಯಕರ್ತರು ಶಾಲೆ-ಶಾಲೆಗಳಿಗೆ ತೆರಳಿ ಸಂಸ್ಥೆಯ ಕುರಿತು, ಅವರ ಯೋಜನೆಯ ಕುರಿತು ವಿವರಿಸುತ್ತಾರೆ. ಅದು, ಸರ್ಕಾರಿ ಶಾಲೆ ಇರಬಹುದು, ಖಾಸಗಿ ಶಾಲೆ ಇರಬಹುದು. ಶಾಲೆಯು ಒಪ್ಪಿಗೆ ನೀಡಿದರೆ, ಸಂಸ್ಥೆಯು ತನ್ನ ಕಾರ್ಯಚಟುವಟಿಕೆಗಳನ್ನು ಆರಂಭಿಸುತ್ತದೆ. ಶಾಲೆಗಳೂ ಖುದ್ದಾಗಿ ಸಂಸ್ಥೆಯನ್ನು ಸಂಪರ್ಕಿಸಬಹುದು.

6ನೇ ತರಗತಿಯಿಂದ 10ನೇ ತರಗತಿಯ ವರೆಗಿನ ಮಕ್ಕಳನ್ನು ಸಂಸ್ಥೆಯು ಮುಖ್ಯ ಗುರಿಯನ್ನಾಗಿಸಿಕೊಂಡಿದೆ. 6ನೇ ತರಗತಿಯ ಒಬ್ಬ ಮಗುವು ಈ ಯೋಜನೆಯ ಭಾಗವಾದರೆ, ಆ ಮಗುವು 10ನೇ ತರಗತಿಗೆ ಬರುವವರೆಗೂ ಸಂಸ್ಥೆಯ ಯೋಜನೆಗಳ ಭಾಗವಾಗಿಯೇ ಇರುತ್ತದೆ. ಶಾಲೆಯೊಂದರಲ್ಲಿ ವಾರಕ್ಕೆ ಒಂದು ತರಗತಿಯನ್ನು ಪ್ರತಿ ತರಗತಿಯ ಮಕ್ಕಳಿಗೆ ಸಂಸ್ಥೆಯು ನಡೆಸುತ್ತದೆ. ತಜ್ಞರ ಮೂಲಕ ಸಂಸ್ಥೆಯು ತನ್ನದೇ ಪಠ್ಯಕ್ರಮವನ್ನೂ ರೂಪಿಸಿಕೊಂಡಿದೆ. ಸಹಾನುಭೂತಿ, ಒಂದು ವಿಷಯದ ಕುರಿತು ವಿಮರ್ಶೆ ಮಾಡುವುದು, ಕ್ರಿಯಾಶೀಲ ವಿಚಾರವಂತಿಕೆಯನ್ನು ಬೆಳೆಸಿಕೊಳ್ಳುವುದು, ಉತ್ತಮ ಸಂವಹನ ಹೀಗೆ ಅನೇಕ ಜೀವನ ಕೌಶಲಗಳನ್ನೂ ಸಂಸ್ಥೆ ಕಲಿಸಿಕೊಡುತ್ತದೆ.

ಪ್ರಾಯೋಗಿಕ ಚಟುವಟಿಕೆಗಳೇ ಸಂಸ್ಥೆಯ ಪಠ್ಯಕ್ರಮ. ಕರ್ನಾಟಕವಲ್ಲದೆ, ತಮಿಳುನಾಡು, ಮಹಾರಾಷ್ಟ್ರ ಮತ್ತು ಒಡಿಶಾದಲ್ಲಿಯೂ ತನ್ನ ಕಾರ್ಯ ಚಟುವಟಿಕೆಗಳನ್ನು ಸಂಸ್ಥೆ ವಿಸ್ತರಿಸಿಕೊಂಡಿದೆ. ತನ್ನೆಲ್ಲಾ ಕಾರ್ಯಚಟುವಟಿಕೆಗಳನ್ನು ಸಂಸ್ಥೆ ಉಚಿತವಾಗಿ ಮಾಡುತ್ತದೆ. ದಾನಿಗಳ ದೇಣಿಗೆಯೇ ಸಂಸ್ಥೆಯ ಆರ್ಥಿಕ ಬೆನ್ನೆಲುಬು.

> **ಸಮಸ್ಯೆ ಎದುರಾದರೆ, ಇದು ನಮಗೆ ಯಾಕೆ ಎದುರಾಯಿತು ಎಂದು ಮಕ್ಕಳು ಭಾವಿಸಬಾರದು. ಆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಮೂಲಕ ಜವಾಬ್ದಾರಿಯುತ ನಾಗರಿಕರಾಗುವ ದಿಸೆಯಲ್ಲಿ ಮಕ್ಕಳಿಗೆ ನಾವು ಮಾರ್ಗದರ್ಶನ ನೀಡುತ್ತೇವೆ**
> **ಮರಳಪ್ಪ ಸಿ.ಆರ್., ಸಹಾಯಕ ನಿರ್ದೇಶಕ,** ಸಿಎಂಸಿಎ ಸಂಸ್ಥೆ

ಪ್ರಜಾಪ್ರಭುತ್ವ ಮೌಲ್ಯಗಳು ಹಾಗೂ ನಾಗರಿಕ ಸಮಸ್ಯೆಗಳ ಕುರಿತು ತಿಳಿಸಿಕೊಡಲು 'ಸಿಎಂಸಿಎ ಕ್ಲಬ್' ಯೋಜನೆಯನ್ನು ಸಂಸ್ಥೆ ರೂಪಿಸಿದೆ. ಜೊತೆಗೆ, ಸರ್ಕಾರದೊಂದಿಗೆ ಕೈಜೋಡಿಸಿ, ಮಕ್ಕಳ ಗ್ರಾಮ ಸಭೆಗಳನ್ನೂ ಸಂಸ್ಥೆ ಆಯೋಜಿಸುತ್ತದೆ. 'ನನ್ನ ಒಳಿತಿಗಾಗಿ ಗ್ರಂಥಾಲಯ' ಎನ್ನುವ ಯೋಜನೆಯಡಿ, ಗ್ರಾಮದಲ್ಲಿನ ಗ್ರಂಥಾಲಯಕ್ಕೆ ಬರುವಂತೆ ಮಕ್ಕಳನ್ನು ಹುರಿದುಂಬಿಸುತ್ತದೆ. ನಾಗರಿಕ ವಿಷಯಗಳ ಕುರಿತು ಜಾಗೃತಿ ಮೂಡಿಸಲು, ಮಕ್ಕಳಿಂದ ಹಲವು ಚಟುವಟಿಕೆಗಳನ್ನು ಮಾಡಿಸುತ್ತದೆ.

**ಕಾರ್ಯಚಟುವಟಿಕೆ:** ಶಾಲೆಯಲ್ಲಿ ಶೌಚಾಲಯ ಇಲ್ಲದಿದ್ದರೆ, ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇಲ್ಲದಿದ್ದರೆ, ತಮ್ಮ ಮನೆಯ ಎದುರು ಕಸ ಸುರಿಯುತ್ತಿದ್ದರೆ, ಬಾಲ ಕಾರ್ಮಿಕ ಪದ್ಧತಿ ನಡೆಯುತ್ತಿದ್ದರೆ... ಹೀಗೆ ಅನೇಕ ಸಾಮಾಜಿಕ ಸಮಸ್ಯೆಗಳ ಕುರಿತು, ಪರಿಸರ ಸಂರಕ್ಷಣೆ ಕುರಿತು ಮಕ್ಕಳಲ್ಲಿ ಜಾಗೃತಿ ಮೂಡಿಸಲಾಗುತ್ತದೆ. ಜೊತೆಗೆ, ಸಮಸ್ಯೆಗಳು ಎದುರಾದಾಗ ಅವುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ, ಇಲಾಖೆಗೆ ತಿಳಿಸುವ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವಂತೆ ಮಕ್ಕಳನ್ನು ಪ್ರೇರೇಪಿಸಲಾಗುತ್ತದೆ.

**ಸಂಪರ್ಕ:** 97427 54372



ವಿನಯ್ ರಾಜ್‌ಕುಮಾರ್, ಸ್ವಾತಿಷ್ಠ

**ನಾವು ನೋಡಿದ ಸಿನಿಮಾ**

# ಸಂಗೀತದ ಸುತ್ತಲಿನ ಪ್ರೇಮಕಥೆ

**ಸಂಗೀತದಲ್ಲಿ ಸಾಧನೆ** ಮಾಡಬೇಕು, ದೊಡ್ಡ ಸಂಗೀತ ನಿರ್ದೇಶಕನಾಗಬೇಕು ಎಂದು ಕನಸು ಕಾಣುವ ಚಿತ್ರದ ನಾಯಕ ಅತಿಶಯ್. ಹಿನ್ನೆಲೆ ಗಾಯಕಿಯಾಗಬೇಕು ಎಂಬ ಕನಸಿನಲ್ಲಿರುವ ನಾಯಕಿ ಮಧುರ. ಬಾಲ್ಯದಿಂದಲೂ ಅತಿಶಯನೊಂದಿಗೆ ಬೆಳೆದು, ಆತನನ್ನು ಪ್ರೀತಿಸುವ ಅನುರಾಗ. ಈ ಮೂವರ ನಡುವಿನ ಸರಳವೆನಿಸಿದರೂ ವಿರಳವಾಗಿರುವ ಪ್ರೇಮವೇ ಚಿತ್ರದ ಒಟ್ಟಾರೆ ಕಥೆ. ಸುದ್ದಿವಾಹಿನಿ ನಿರೂಪಕಿ ಅನುರಾಗಳಾಗಿ ನಾಯಕಿ ಸ್ವಾತಿಷ್ಟ ಸಿನಿಮಾ ಮುಗಿದ ಮೇಲೆಯೂ ನೆನಪಿನಲ್ಲಿ ಉಳಿಯುತ್ತಾರೆ. ತಾನು ಇರುವುದೇ ಹೀಗೆ ಎನ್ನಿಸುವಷ್ಟು ಸಹಜವಾದ ಅವರ ನಟನೆಯೇ ಸಿನಿಮಾಕ್ಕೆ ದೊಡ್ಡ ಬಲ.

ನಿರ್ದೇಶಕ ಸಿಂಪಲ್ ಸುನಿ ಸರಳವಾದ ಕಥೆಯನ್ನು ನಗಿಸುತ್ತ ಹೇಳುತ್ತಾರೆ. ಅವರ ಹಿಂದಿನ ಸಿನಿಮಾಗಳ ಸೂತ್ರವೇ ಇಲ್ಲಿಯೂ ಇದೆ. ಕೆಲವಷ್ಟು ಕಡೆ ಮಾತು, ಸನ್ನಿವೇಶಗಳಿಂದ ನಗಿಸುವಲ್ಲಿ ಸುನಿ ಯಶಸ್ವಿಯಾಗಿದ್ದಾರೆ. ಆದರೆ ಸರಳ ಪ್ರೇಮವನ್ನು ವಿರಳ ಪ್ರೇಮವೆಂದು ಸಾಬೀತುಪಡಿಸಲಿಕ್ಕಾಗಿಯೇ ಹೆಣೆದ ಕೆಲವಷ್ಟು ದೃಶ್ಯಗಳು ನವಿರಾದ ಪ್ರೇಮದ ಸ್ವಾದಕ್ಕೆ ಅಡ್ಡಿಯುಂಟು ಮಾಡಿವೆ. ಉದಾಹರಣೆಗೆ ನಾಯಕನ ಅಜ್ಜಿಯ ಕೊನೆಯ ಆಸೆ ತೀರಿಸಲೆಂದು ಆಸ್ಪತ್ರೆಯಲ್ಲಿಯೇ ನಾಯಕ-ನಾಯಕಿಯನ್ನು ಬಲವಂತವಾಗಿ ಮದುವೆ ಮಾಡಿಸುವ ದೃಶ್ಯ ನಾಟಕೀಯ ಧಾರಾವಾಹಿಗಳ ಸನ್ನಿವೇಶದ ಅನುಭವ ನೀಡುತ್ತದೆ. ನಾಯಕಿ ಅನುವಿಗೆ ಸಹಾಯ ಮಾಡಿದ್ದು ನಾಯಕನೇ ಎಂದು ಸುತ್ತಿ ಬಳಸಿಕೊಂಡು ಹೇಳಿರುವ ದೃಶ್ಯ ಕೂಡ ಅದೇ ಅನುಭವ ನೀಡುತ್ತದೆ.

ನಾಯಕ ಅತಿಶಯನಾಗಿ ವಿನಯ್ ರಾಜ್‌ಕುಮಾರ್ ಅಚ್ಚುಕಟ್ಟಾಗಿ ನಟಿಸಿದ್ದಾರೆ. ಪರದಾಡುತ್ತಿರುವ ತಂತ್ರಜ್ಞನ ಪಾತ್ರ ಎಂಬ ಕಾರಣಕ್ಕೆ ಬಹುಶಃ ಅವರ ಲುಕ್ ಅನ್ನು ಉದ್ದನೆಯ ಗಡ್ಡದೊಂದಿಗೆ ರಗಡ್ ಆಗಿಸಿರಬೇಕು. ಆದರೆ ಇಬ್ಬರು ನಾಯಕಿಯರ ಮುದ್ದಾದ ಲುಕ್‌ಗೆ ಇವರ ರಗಡ್ ಲುಕ್ ತಾಳೆ ಆಗುವುದಿಲ್ಲ. ಹಿನ್ನೆಲೆ ಗಾಯಕಿ ಮಧುರಾ ಆಗಿ ಮಲ್ಲಿಕಾ ಸಿಂಗ್ ಇಷ್ಟವಾಗುತ್ತಾರೆ. ನಾಯಕನ ತಂದೆಯಾಗಿ ರಾಜೇಶ್ ನಟರಂಗ, ತಾಯಿಯಾಗಿ ಅರುಣಾ ಬಾಲರಾಜ್ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

ಚಿತ್ರದುದ್ದಕ್ಕೂ ಹಾಡಿನ ಬಿಟ್‌ಗಳಿವೆ. ಸನ್ನಿವೇಶಕ್ಕೆ ತಕ್ಕ ಹಾಡುಗಳನ್ನು ನೀಡುವಲ್ಲಿ ವೀರ್ ಸಮರ್ಥ್ ಯಶಸ್ವಿಯಾಗಿದ್ದಾರೆ. ಆದರೆ ಪೂರ್ಣಪ್ರಮಾಣದಲ್ಲಿ ಬಳಕೆಯಾದ ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಕಾರ್ತಿಕ್ ಶರ್ಮಾ ಸಾಧ್ಯವಿರುವೆಡೆಯೆಲ್ಲ ಛಾಯಾಚಿತ್ರಗ್ರಹಣದಿಂದ ಫ್ರೇಮ್‌ಗಳನ್ನು ವರ್ಣಮಯವಾಗಿಸಿದ್ದಾರೆ. ಥಟ್ ಎಂದು ನಗಿಸುವ ಮೊನಚಾದ ಸಂಭಾಷಣೆ ಚಿತ್ರಕ್ಕೊಂದು ಬಲ ನೀಡುತ್ತದೆ.

**ವಿನಾಯಕ ಕೆ.ಎಸ್.**

**ಒಂದು ಸರಳ ಪ್ರೇಮಕಥೆ (ಕನ್ನಡ)**
- **ನಿರ್ದೇಶನ:** ಸಿಂಪಲ್ ಸುನಿ
- **ನಿರ್ಮಾಣ:** ಮೈಸೂರು ರಮೇಶ್
- **ತಾರಾಗಣ:** ವಿನಯ್ ರಾಜ್‌ಕುಮಾರ್, ಸ್ವಾತಿಷ್ಠ, ಮಲ್ಲಿಕಾ ಸಿಂಗ್, ರಾಜೇಶ್ ನಟರಂಗ ಮತ್ತಿತರರು


ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ
https://www.prajavani.net

## ಪದಬಂಧ 5587

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ವಿಭಜಿಸಲಾಗದ ಚಿಕ್ಕ ಕಣ (4)
4.ಸಪೂರವಾದ ಸೊಂಟ (4)
6.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
8.ಮಣ ಭಾರದ ಹೆಣವನ್ನು ಸಾಗಿಸಿದ ಜಾಗ (3)
9.ದಾಯಾದಿ ಜಗಳವಿದು (5)
10.ಪರಿಶುದ್ಧವಾದುದು ಕಾಡಿನ ಕೊನೆಗೆ ಕಂಡಿದೆ (3)
11.ವೇಗ ಅಥವಾ ಶೀಘ್ರತೆ (3)
13.ಕೆಲಸಕ್ಕೆ ಬಾರದವ (4)
15.ಆಣೆಯಿಟ್ಟು ತಪ್ಪನ್ನು ಹೊರಿಸುವುದು! (4))

**ಮೇಲಿಂದ ಕೆಳಕ್ಕೆ**
1.ಅತಿಯಾದ ದುಃಖ (4)
2.ಸಾಮರ್ಥ್ಯವಿಲ್ಲಿ ಉಲ್ಟಾ ಪಲ್ಟಾ ಆಗಿದೆ (2)
3.ಈತ ಅತ್ಯಂತ ಬುದ್ಧಿವಂತ (4)
5.ಎಲ್ಲರನ್ನೂ ಒಂದುಗೂಡಿಸುವುದು (5)
7.ವಿಶೇಷವಾದ ಜ್ಞಾನ (3)
8.ಹಿರಿಮೆಯನ್ನು ಹೇಳುವ ಘನತೆ (3)
10.ಪಾರು ವಹಿಸಿಕೊಂಡಿರುವ ಮೇಲ್ವಿಚಾರಣೆ (4)
12.ಕೂಲಂಕಷವಾದ ವಿಚಾರಣೆ (4)
14.ಹಣ್ಣು ಕಾಯಿ ಇತ್ಯಾದಿಗಳ ಮೇಲಿನ ಪದರ (2)




**5586ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ:**
1.ಹಣಾಹಣಿ 3.ತಪರಾಕು 5.ವಿಷಯ 6.ಕರ್ಮಾಂತರ 7.ನದೀಮುಖಜಭೂಮಿ 10.ತಳವಾರ 11.ಅವನಿ 13.ಗುಪ್ತದ್ವಾರ 14.ಗೆದ್ದಲು

**ಮೇಲಿಂದ ಕೆಳಕ್ಕೆ:**
1.ಹತ್ತಿ 2.ಹರುಷ 4.ಕುಟೀರ 5.ವಿಧಾನ 6.ಕಣಜ 8.ಮುಷ್ಕರ 9.ಮಿಸುನಿ 10.ತರಗು 12.ವಶನ 13.ಧ್ಯೇಯ

## ಸುಡೊಕು 5972

| | | | | | | | | |
|---|---|---|---|---|---|---|---|---|
| 2 | | 9 | | | 7 | 1 | | 4 |
| | | | | 3 | | | | |
| 5 | | 7 | 4 | | 6 | 2 | | 3 |
| | | | | | 5 | | 3 | 1 |
| | 5 | 1 | | 8 | | | 2 | |
| 3 | | | 9 | | | | | 8 |
| | | 2 | | 1 | | 8 | | 5 |
| 9 | | | 7 | | 8 | | 1 | 2 |
| | 8 | | | 2 | | 4 | | 6 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

**5971 ಸುಡೊಕು**

| | | | | | | | | |
|---|---|---|---|---|---|---|---|---|
| 2 | 1 | 6 | 3 | 7 | 4 | 8 | 5 | 9 |
| 9 | 4 | 7 | 5 | 8 | 6 | 3 | 1 | 2 |
| 3 | 8 | 5 | 9 | 2 | 1 | 4 | 6 | 7 |
| 1 | 2 | 3 | 8 | 6 | 5 | 9 | 7 | 4 |
| 5 | 9 | 8 | 2 | 4 | 7 | 1 | 3 | 6 |
| 6 | 7 | 4 | 1 | 9 | 3 | 5 | 2 | 8 |
| 7 | 3 | 9 | 6 | 1 | 8 | 2 | 4 | 5 |
| 4 | 5 | 2 | 7 | 3 | 9 | 6 | 8 | 1 |
| 8 | 6 | 1 | 4 | 5 | 2 | 7 | 9 | 3 |

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಫೆಬ್ರುವರಿ 10, 2024

**ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ:** ಮಾಘ ಶುಕ್ಲ ಪ್ರತಿಪದ್ ಗಂ. 24-48 **ನಕ್ಷತ್ರ:** ಧನಿಷ್ಠ ಗಂ. 20-34 **ಯೋಗ:** ವರಿಯಾನ್ ಗಂ. 14-53
**ಕರಣ:** ಕಿಸ್ತುಂಘ್ನ ಗಂ. 14-39, ಮಕರ ಮಾಸದ 27 ನೇ ದಿನ, **ಮಳೆನಕ್ಷತ್ರ:** ಧನಿಷ್ಠಾ 2
**ರಾಹುಕಾಲ :** ಬೆಳಿಗ್ಗೆ 09-00 – 10-30
**ಸೂರ್ಯೋದಯ :** 06-59 **ಸೂರ್ಯಾಸ್ತ :** 06-31
**ಮುಸ್ಲಿಂ ದಿನಾಂಕ :** 29 ರಜಬ್
**ಅದೃಷ್ಟ ಸಂಖ್ಯೆ :** 4, 2

**ಮೇಷ:** ರೇಷ್ಮೆ ವ್ಯಾಪಾರಿಗಳಿಗೆ ಸಗಟು ಮಾರಾಟದಿಂದ ಅಧಿಕ ಮಟ್ಟದ ಲಾಭ ಉಂಟಾಗಲಿದೆ. ಮಂಜುನಾಥನ ಸೇವೆಯನ್ನು ಮಾಡುವುದರಿಂದ ಕೋರ್ಟು-ವ್ಯವಹಾರಗಳಲ್ಲಿ ಸುಲಭವಾಗಿ ಜಯ ಸಿಗಲಿದೆ. ಪ್ರಯಾಣದಲ್ಲಿ ಎಚ್ಚರವಹಿಸಿ.

**ವೃಷಭ:** ಚಂಚಲ ಸ್ವಭಾವದಿಂದ ಇಂದಿನ ಕಾರ್ಯದಲ್ಲಿ ವಿಫಲರಾಗುವ ಸನ್ನಿವೇಶಗಳಿರುವುದು. ಇಂದಿನ ಕೆಲಸದಲ್ಲಿ ಹತ್ತು ಬಾರಿ ಯೋಚಿಸಿ ನಂತರದಲ್ಲಿ ದೂರದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವುದು ಉತ್ತಮ.

**ಮಿಥುನ:** ಗುರಿ ಮುಟ್ಟುವತ್ತ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡಲ್ಲಿ ನಿಮ್ಮ ಯೋಜನೆಗಳು ನೀವು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿ ನೆರವೇರುವುದು. ಸರಳ ವ್ಯಕ್ತಿತ್ವದಿಂದ ಹೆಚ್ಚಿನ ಮೆಚ್ಚುಗೆ ಗಳಿಸುವಿರಿ.

**ಕರ್ಕಾಟಕ:** ಸಮಾಜದಲ್ಲಿ ಹೆಸರು ಸಂಪಾದಿಸಲು ಪೂರಕವಾದ ವಾತಾವರಣ ಮೂಡಿಬರಲಿದೆ. ಜಟಿಲ ಸಮಸ್ಯೆಗಳು ಬಗೆ ಹರಿದು ಮನೆಯವರಿಗೆ ನೆಮ್ಮದಿ ಉಂಟಾಗುವುದು. ಬಂಧುಗಳಿಂದ ಯಾವುದೇ ಸಹಾಯ ನಿರೀಕ್ಷಿಸಬೇಡಿ.

**ಸಿಂಹ:** ಹಂತ ಹಂತವಾಗಿ ನಿಧಾನಗತಿಯಲ್ಲಿ ನಿಮ್ಮ ಆಸೆಗಳು ಈಡೇರಲಿವೆ. ವಿದ್ಯಾರ್ಥಿಗಳು ಉದ್ಯೋಗದ, ಹಣದ ಆಸೆಯನ್ನು ಬಿಟ್ಟು ಓದು ಮುಂದುವರಿಸುವುದನ್ನು ನಿರ್ಧರಿಸಿ. ಮನೆಯಲ್ಲಿ ಹಿತಕರ ವಾತಾವರಣ ಇರುತ್ತದೆ.

**ಕನ್ಯಾ:** ದಾಂಪತ್ಯದಲ್ಲಿ ಕಲಹ, ಕುಟುಂಬ ವರ್ಗದವರಲ್ಲಿ ಭಿನ್ನಾಭಿಪ್ರಾಯದಂಥ ಸನ್ನಿವೇಶಗಳು ಕಂಡುಬಂದು ಮನಸ್ಸಿಗೆ ನೋವಾಗಲಿದೆ. ನಿಮ್ಮ ಕರ್ಮನಿಷ್ಠೆ ಮತ್ತು ಪ್ರಾಮಾಣಿಕತೆಗೆ ತಕ್ಕಂತಹ ಫಲವನ್ನು ಪಡೆಯುತ್ತೀರಿ.

**ತುಲಾ:** ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಯಿಂದಾಗಿ ಈ ದಿನ ನಿರುತ್ಸಾಹಿಯಾಗಿರುತ್ತೀರಿ. ಮಕ್ಕಳ ವಿಷಯದಲ್ಲಿ ಕಾಳಜಿಯನ್ನು ತೋರಿ ವ್ಯವಸ್ಥಿತವಾದ ತೀರ್ಮಾನವನ್ನು ತೆಗೆದುಕೊಂಡಲ್ಲಿ ಅವರ ಭವಿಷ್ಯ ಉತ್ತಮವಾಗುವುದು.

**ವೃಶ್ಚಿಕ:** ಹೆಚ್ಚಿನ ಬುದ್ಧಿ ಶಕ್ತಿಯ ಬಲದಿಂದ ಮತ್ತು ಸ್ವಂತ ಅನುಭವದ ಜೊತೆಗೆ ವಿವಿಧ ಕಾರ್ಯಗಳು ಫಲಿತಗೊಂಡು, ಅನಿರೀಕ್ಷಿತವೆಂಬಂತೆಯೇ ಉತ್ತಮ ಅಭಿವೃದ್ಧಿಯನ್ನು ಅನುಭವಿಸುವ ಯೋಗ ನಿಮ್ಮದಾಗಲಿದೆ.

**ಧನು:** ವೃತ್ತಿಯಲ್ಲಿ ರಾತ್ರಿ ಪಾಳಿ ತಪ್ಪಿದ ಕಾರಣದಿಂದ ಮನಸ್ಸಿಗೆ ಸಮಾಧಾನವಾಗುವುದು. ನಿಮ್ಮ ನಡವಳಿಕೆಯಿಂದ ಬೇರೆಯವರ ಮನಸ್ಸಿಗೆ ನೋವುಂಟಾಗದಂತೆ ನೋಡಿಕೊಳ್ಳಿ. ಸಗಟು ಧಾನ್ಯ ವ್ಯಾಪಾರಿಗಳಿಗೆ ಲಾಭ.

**ಮಕರ:** ರಸಗೊಬ್ಬರ ಮತ್ತು ಕೀಟ ನಾಶಕಗಳನ್ನು ವ್ಯಾಪಾರ ಮಾಡುವವರಿಗೆ ಲಾಭದ ಜೊತೆ ಆಯಾಸವೂ ಕಾಡಲಿದೆ. ಮಾನಸಿಕ ನೆಮ್ಮದಿಗಾಗಿ ದೇವತಾ ಕಾರ್ಯಗಳನ್ನು ಅಥವಾ ಪುಣ್ಯಕ್ಷೇತ್ರಗಳ ದರ್ಶನವನ್ನು ಮಾಡಿ.

**ಕುಂಭ:** ನಿಮ್ಮ ಕೆಲಸಗಳ ಬಗ್ಗೆ ಅಧಿಕಾರಿ ವರ್ಗದವರಲ್ಲಿ ಯಾವುದೇ ಚರ್ಚೆಗಳು, ವಾದ ವಿವಾದಗಳು ನಡೆದರೂ, ನಿಮ್ಮ ಕಾರ್ಯ ಸಾಧನೆಗೆ ಅಡ್ಡಿಯಾಗದು. ನೆಂಟಸ್ತಿಕೆಯಲ್ಲಿ ವಿವಾಹಕ್ಕೆ ಸಂಬಂಧಗಳು ಕೂಡಿ ಬರಲಿವೆ.

**ಮೀನ:** ಮಾತಿನ ಕುಶಲತೆಯಿಂದ ಇತರರನ್ನು ಗೆಲ್ಲುವ ಅಥವಾ ಎದುರಾಳಿಯನ್ನು ಕಟ್ಟಿಹಾಕುವ ಸಾಮರ್ಥ್ಯ ನಿಮ್ಮಲ್ಲಿದೆ. ಆಂಜನೇಯನ ಸೇವೆ ಮಾಡುವುದರಿಂದ ಗೊಂದಲ ನಿವಾರಣೆಯಾಗುತ್ತದೆ. ದೇಹಾಯಾಸ ಉಂಟಾಗಲಿದೆ.

# ‘ಹಸಿರು ಕ್ರಾಂತಿ’ಯ ‘ಸ್ವಾಮಿ’

ಚೆನ್ನೈ(ಪಿಟಿಐ): ಸ್ನೇಹಿತರು ಮತ್ತು ಸಹೋದ್ಯೋಗಿಗಳು ಪ್ರೀತಿಯಿಂದ ‘ಎಂಎಸ್’ ಎಂದೇ ಕರೆಯುತ್ತಿದ್ದ ಎಂ.ಎಸ್. ಸ್ವಾಮಿನಾಥನ್ ಅವರ ಮುಂದಾಳತ್ವದಲ್ಲಿ ಆರು ದಶಕಗಳ ಹಿಂದೆ ನಡೆದ ‘ಹಸಿರು ಕ್ರಾಂತಿ’, ದೇಶವು ಆಹಾರ ಕ್ಷಾಮವನ್ನು ಮೆಟ್ಟಿ ನಿಲ್ಲಲು ನೆರವಾಯಿತು. ಗೋಧಿ ಉತ್ಪಾದನೆಯಲ್ಲಿ ದೇಶವು ವಿಶ್ವದ ಮುಂಚೂಣಿ ಸ್ಥಾನಕ್ಕೆ ಬಂದು ನಿಂತಿದಲ್ಲದೆ, ಅಮೆರಿಕದ ಮೇಲಿನ ಅವಲಂಬನೆಯನ್ನು ಕೊನೆಗೊಳಿಸಿತು.

ಮರಣೋತ್ತರವಾಗಿ ‘ಭಾರತ ರತ್ನ’ ಗೌರವಕ್ಕೆ ಪಾತ್ರರಾಗಿರುವ ಅವರು ಸುಸ್ಥಿರ ಕೃಷಿಯ ಪ್ರತಿಪಾದಕರಾಗಿದ್ದರು. ಸ್ವಾಮಿನಾಥನ್ ಅವರು ಜಾಗತಿಕ ಆಹಾರ ವ್ಯವಸ್ಥೆಗಳ ಸುಸ್ಥಿರತೆಯ ಜೊತೆಗೆ ಎಲ್ಲರಿಗೂ ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆಯನ್ನು ಖಾತರಿಪಡಿಸಿಕೊಳ್ಳಲು ‘ಹಸಿರು ಕ್ರಾಂತಿ'ಯ ಪರವಾಗಿ ನಿಂತರು.

ರೈತರು ಹಳೆಯ ಕಾಲದ ಕೃಷಿ ತಂತ್ರಗಳನ್ನು ಅವಲಂಬಿಸಿದ್ದ ಕಾಲದಲ್ಲಿ ಅವರು ಹೊಸ ತಂತ್ರಜ್ಞಾನವನ್ನು ಪರಿಚಯಿಸಿ ದೇಶದ ಕೃಷಿ ಕ್ಷೇತ್ರದ ಪಥ ಬದಲಾಯಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

### ಹಲವು ಪ್ರಶಸ್ತಿ

ಸ್ವಾಮಿನಾಥನ್ ಅವರಿಗೆ ಏಷ್ಯಾದ ನೊಬೆಲ್ ಎಂದೇ ಪ್ರಸಿದ್ಧವಾಗಿರುವ ‘ರೇಮನ್ ಮ್ಯಾಗ್ಸೆಸೆ ಪ್ರಶಸ್ತಿ’ 1971ರಲ್ಲಿ ದೊರೆತಿತ್ತು. ಭಾರತ ಸರ್ಕಾರ ಅವರಿಗೆ 1989ರಲ್ಲಿ ಪದ್ಮ ವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತ್ತು.

ಹೆಚ್ಚು ಇಳುವರಿ ನೀಡುವ ಗೋಧಿ ಮತ್ತು ಭತ್ತದ ತಳಿಗಳ ಅಭಿವೃದ್ಧಿ ಮತ್ತು ಅವುಗಳ ಬಳಕೆಗೆ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದ್ದಕ್ಕಾಗಿ 1987ರಲ್ಲಿ ಮೊದಲ ‘ವಿಶ್ವ ಆಹಾರ ಪ್ರಶಸ್ತಿ’ಯನ್ನು ಸ್ವಾಮಿನಾಥನ್ ಅವರಿಗೆ ಪ್ರದಾನ ಮಾಡಲಾಯಿತು. 2007ರಿಂದ 2013ರವರೆಗೆ ರಾಜ್ಯಸಭಾ ಸದಸ್ಯರಾಗಿಯೂ ಅವರು ಕಾರ್ಯನಿರ್ವಹಿಸಿದ್ದರು.

**ಈ ಅತ್ಯುನ್ನತ ಗೌರವ ದೊರೆತಿದ್ದಕ್ಕೆ ನನ್ನ ತಂದೆ ಸಂತಸಪಡುತ್ತಿದ್ದರು. ಆದರೆ ಅವರು ಎಂದಿಗೂ ಪ್ರಶಸ್ತಿಗಳಿಗಾಗಿ ಕೆಲಸ ಮಾಡಲಿಲ್ಲ.**

**ಡಾ.ಸೌಮ್ಯಾ ಸ್ವಾಮಿನಾಥನ್**
ಎಂ.ಎಸ್.ಸ್ವಾಮಿನಾಥನ್ ಪುತ್ರಿ

ತಮಿಳುನಾಡಿನ ಕುಂಬಕೋಣಂನಲ್ಲಿ ಡಾ.ಎಂ.ಕೆ.ಸಾಂಬಶಿವನ್– ಪಾರ್ವತಿ ತಂಗಮ್ಮ ದಂಪತಿಗೆ 1925ರ ಆಗಸ್ಟ್ 7 ರಂದು ಜನಿಸಿದ ಅವರು 2023ರ ಸೆಪ್ಟೆಂಬರ್ 28 ರಂದು ತಮ್ಮ 98ನೇ ವಯಸ್ಸಿನಲ್ಲಿ ಚೆನ್ನೈನಲ್ಲಿ ನಿಧನರಾದರು. ಕೃಷಿ ಕ್ಷೇತ್ರದಲ್ಲಿ ಸುಧಾರಣೆ ಮತ್ತು ರೈತರ ಆದಾಯ ಹೆಚ್ಚಿಸುವುದಕ್ಕಾಗಿ ತಮ್ಮ ಇಡೀ ಜೀವನವನ್ನು ಮುಡುಪಾಗಿಟ್ಟರು.

ನೆದರ್ಲೆಂಡ್ಸ್‌ನ ವಾಹೆನಿಂಗನ್ ಕೃಷಿ ವಿಶ್ವವಿದ್ಯಾಲಯದಲ್ಲಿ 1949 ರಲ್ಲಿ ಕೃಷಿ ಸಂಶೋಧನೆಯಲ್ಲಿ ವೃತ್ತಿ ಜೀವನ ಆರಂಭಿಸಿದ ಅವರು ಬಳಿಕ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮುಂದುವರಿಸಿದರು. 1952 ರಲ್ಲಿ ಕೇಂಬ್ರಿಜ್ ವಿ.ವಿ ಡಾಕ್ಟರೇಟ್ ನೀಡಿತು.

1966ರಲ್ಲಿ ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರದಲ್ಲಿ ಸ್ವಾಮಿನಾಥನ್ ಅವರಿಗೆ ತಮ್ಮ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಮುಕ್ತ ಸ್ವಾತಂತ್ರ್ಯ ನೀಡಲಾಗಿತ್ತು. ಗೋಧಿಯ ಮಿಶ್ರ ತಳಿಗಳ ಅಭಿವೃದ್ಧಿಯಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡರು. ಈ ತಳಿಗಳ ಕಾರಣದಿಂದಾಗಿ 15 ವರ್ಷಗಳ ಅವಧಿಯಲ್ಲಿ ಭಾರತಕ್ಕೆ ಗೋಧಿ ಉತ್ಪಾದನೆಯನ್ನು ಮೂರು ಪಟ್ಟು ಹೆಚ್ಚಿಸಲು ಸಾಧ್ಯವಾಯಿತು.

ಹೆಚ್ಚು ಇಳುವರಿ ನೀಡುವ ಭತ್ತ, ಗೋಧಿಯ ತಳಿಗಳನ್ನು ಬೆಳೆಯುವುದಕ್ಕೆ ರೈತರಿಗೆ ತರಬೇತಿ ನೀಡುವಲ್ಲಿ ಕೂಡ ಕೆಲಸ ಮಾಡಿದರು. ಇದರಿಂದಾಗಿ ಆಹಾರದ ಕೊರತೆ ಎದುರಿಸುತ್ತಿದ್ದ ದೇಶವು ಆಹಾರ ರಫ್ತುದಾರ ಆಗಿ ಪರಿವರ್ತನೆ ಕಂಡಿತು.

1979ರಿಂದ 1980ರ ನಡುವೆ ಕೇಂದ್ರ ಕೃಷಿ ಸಚಿವಾಲಯದ ಪ್ರಧಾನ ಕಾರ್ಯದರ್ಶಿಯಾಗಿದ್ದ ಅವರು 1988 ರಲ್ಲಿ ಎಂ.ಎಸ್.ಸ್ವಾಮಿನಾಥನ್ ರಿಸರ್ಚ್ ಫೌಂಡೇಷನ್ (ಎಂಎಸ್‌ಎಸ್‌ಆರ್‌ಎಫ್) ಸ್ಥಾಪಿಸಿದರು.

# ರೈತರ ಚಾಂಪಿಯನ್ ಚರಣ್ ಸಿಂಗ್

ನವದೆಹಲಿ (ಪಿಟಿಐ): ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಸಮಾಜವಾದಿ ಆರ್ಥಿಕತೆಯನ್ನು ವಿರೋಧಿಸಿದ್ದ ಚೌಧರಿ ಚರಣ್ ಸಿಂಗ್, ರೈತರ ಮಾಲೀಕತ್ವದ ಹಕ್ಕುಗಳ ಪ್ರಬಲ ಪ್ರತಿಪಾದಕರಾಗಿದ್ದರು. ರೈತರ ಅಭ್ಯುದಯಕ್ಕಾಗಿಯೇ ಹಲವಾರು ಯೋಜನೆ, ಕಾರ್ಯಕ್ರಮಗಳನ್ನು ಜಾರಿಗೊಳಿಸಿದವರು.

ಅಲ್ಪಾವಧಿ ಪ್ರಧಾನಿ ಆಗಿದ್ದರೂ, ಕೃಷಿಕರ ಜೀವನ ಮಟ್ಟ ಸುಧಾರಣೆಗಾಗಿ ಶ್ರಮಿಸಿದ್ದರಿಂದ ‘ಭಾರತದ ರೈತರ ಚಾಂಪಿಯನ್’ ಎಂದೇ ಅವರು ಹೆಸರುವಾಸಿ. ಪ್ರತಿ ವರ್ಷ ಅವರ ಜನ್ಮ ದಿನವಾದ ಡಿಸೆಂಬರ್ 23 ಅನ್ನು ಅವರ ಗೌರವಾರ್ಥ ‘ರಾಷ್ಟ್ರೀಯ ರೈತ ದಿನ’ವನ್ನಾಗಿ ಆಚರಿಸಲಾಗುತ್ತದೆ.

ಕಾಂಗ್ರೆಸ್ ಪಕ್ಷದ ಮೂಲಕ ರಾಜಕೀಯ ಜೀವನ ಆರಂಭಿಸಿದ ಅವರು, 1960ರ ದಶಕದಲ್ಲಿ ಕಾಂಗ್ರೆಸ್ ತೊರೆದರು. ಉತ್ತರ ಪ್ರದೇಶದಲ್ಲಿಯೇ ಅಲ್ಲದೆ ಇಡೀ ಉತ್ತರ ಭಾರತದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರ ರಚಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

**ದೇಶದ ಆರನೇ ಪ್ರಧಾನಿ:** ತಮ್ಮ ಸುದೀರ್ಘ ರಾಜಕೀಯ ಪಯಣದಲ್ಲಿ ಅವರು ದೇಶದ ಆರನೇ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದರು. ಮೊರಾರ್ಜಿ ದೇಸಾಯಿ ಅವರ ಬಳಿಕ ಕಾಂಗ್ರೆಸ್ಸೇತರ ಸರ್ಕಾರದ ಎರಡನೇ ಪ್ರಧಾನಿಯಾಗಿ ಸಿಂಗ್ ಆಡಳಿತ ನಡೆಸಿದರು. ಎರಡು ಬಾರಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರು.

ಉತ್ತರ ಪ್ರದೇಶದ ಮೀರತ್ ಜಿಲ್ಲೆಯ ನೂರ್‌ಪುರ್ ಗ್ರಾಮದಲ್ಲಿ ರೈತ ಕುಟುಂಬದ ನೇತ್ರಾ ಕೌರ್ ಮತ್ತು ಚೌಧರಿ ಮೀರ್ ಸಿಂಗ್ ದಂಪತಿಗೆ 1902ರ ಡಿಸೆಂಬರ್ 23ರಂದು ಜನಿಸಿದರು. ಹುಟ್ಟೂರು ಜಾನಿ ಖುರ್ದ್‌ನಲ್ಲಿ ಪ್ರಾಥಮಿಕ ಶಿಕ್ಷಣ, ಮೀರತ್‌ನ ಸರ್ಕಾರಿ ಪ್ರೌಢಶಾಲೆಯಲ್ಲಿ ಮೆಟ್ರಿಕ್ ಶಿಕ್ಷಣ ಪೂರೈಸಿದರು. ಆಗ್ರಾ ವಿಶ್ವವಿದ್ಯಾಲಯದಿಂದ ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1927ರಲ್ಲಿ ಎಲ್‌ಎಲ್‌ಬಿ ಪದವಿ ಪಡೆದು, ಗಾಜಿಯಾಬಾದ್‌ನಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದರು.

**ಸ್ವಾತಂತ್ರ್ಯ ಚಳವಳಿ:** ಆರ್ಯ ಸಮಾಜದ ಸ್ಥಾಪಕರಾದ ಸ್ವಾಮಿ ದಯಾನಂದ ಸರಸ್ವತಿ ಅವರ ವಿಚಾರಗಳಿಂದ ಪ್ರಭಾವಿತರಾಗಿದ್ದ ಅವರು, ಮಹಾತ್ಮ ಗಾಂಧಿ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಚಳವಳಿಗೆ ಸೇರಿದರು. ಸ್ವಾತಂತ್ರ್ಯ ಚಳವಳಿ ಸಂದರ್ಭದಲ್ಲಿ ಹಲವು ಬಾರಿ ಜೈಲು ಶಿಕ್ಷೆಗೆ ಗುರಿಯಾಗಿದ್ದರು.

ಸ್ವಾತಂತ್ರ್ಯ ಚಳವಳಿಯ ಜತೆಗೆ ಅವರು ಪ್ರಾಂತೀಯ ಚುನಾವಣೆಗಳಲ್ಲೂ ಸಕ್ರಿಯರಾಗಿದ್ದರು. 1937ರಲ್ಲಿ ಮೀರತ್ ಜಿಲ್ಲೆಯ ಚಪ್ರೌಲಿಯಿಂದ ‘ಯುನೈಟೆಡ್ ಪ್ರಾವಿನ್ಸ್’ ಅಸೆಂಬ್ಲಿಗೆ ಆಯ್ಕೆಯಾದರು. ನಂತರ ಅವರು 1946, 1952, 1962 ಮತ್ತು 1967ರಲ್ಲೂ ಆ ಕ್ಷೇತ್ರವನ್ನು ಪ್ರತಿನಿಧಿಸಿದ್ದರು.

1946ರಲ್ಲಿ ಪಂಡಿತ್ ಗೋವಿಂದ್ ವಲ್ಲಬ್ ಪಂತ್ ಅವರ ‘ಯುನೈಟೆಡ್ ಪ್ರಾವಿನ್ಸ್’ ಸರ್ಕಾರದಲ್ಲಿ ಸಂಸದೀಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಅವರು, ನಂತರ ಕಂದಾಯ, ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ, ನ್ಯಾಯ ಮತ್ತು ಮಾಹಿತಿ ಸೇರಿದಂತೆ ಹಲವು ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸಿದರು. 1951ರಲ್ಲಿ ನ್ಯಾಯ ಮತ್ತು ಮಾಹಿತಿ ಖಾತೆಗಳೊಂದಿಗೆ ಅವರು ಮೊದಲ ಬಾರಿಗೆ ಸಂಪುಟ ಸಚಿವರಾದರು.ಮುಂದೆ ಗೃಹ, ಅರಣ್ಯ ಖಾತೆಯ ಸಚಿವರೂ ಆದರು.

**ಮಹತ್ವದ ತಿರುವು:** 1967ರ ಏಪ್ರಿಲ್ 1ರಂದು ಕಾಂಗ್ರೆಸ್ ಪಕ್ಷ ತೊರೆದರು. ಎರಡು ದಿನಗಳ ನಂತರ ಅವರು ಸಂಯುಕ್ತ ವಿಧಾಯಕ್ ದಳದ ನಾಯಕರಾಗಿ, ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಈ ಮೂಲಕ ಅವರು ಇಡೀ ಉತ್ತರ ಭಾರತದಲ್ಲಿಯೇ ಮೊದಲ ಕಾಂಗ್ರೆಸ್ಸೇತರ ಸರ್ಕಾರ ರಚಿಸಿದರು. 1970ರ ಫೆಬ್ರುವರಿಯಲ್ಲಿ ಕಾಂಗ್ರೆಸ್ ವಿಭಜನೆಯ ಬಳಿಕ ಅವರು ಎರಡನೇ ಬಾರಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿಯಾದರು. ಆದರೆ 1970ರ ಅಕ್ಟೋಬರ್ 2ರಂದು ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿದ್ದರಿಂದ ಸಿಂಗ್ ಅವರ ಸರ್ಕಾರ ಹೆಚ್ಚು ಕಾಲ ಉಳಿಯಲಿಲ್ಲ.

**ತುರ್ತು ಪರಿಸ್ಥಿತಿಯಲ್ಲಿ ಬಂಧನ:** ತುರ್ತು ಪರಿಸ್ಥಿತಿ ವಿರೋಧಿ ಆಂದೋಲನದಲ್ಲಿ ಸಕ್ರಿಯರಾಗಿದ್ದ ಅವರನ್ನು 1975ರಲ್ಲಿ ಬಂಧಿಸಲಾಯಿತು. ತಮ್ಮ ಭಾರತೀಯ ಲೋಕದಳ ಪಕ್ಷವನ್ನು ಜನತಾ ಪಕ್ಷದ ಜತೆ ವಿಲೀನಗೊಳಿಸಿದ ಅವರು ಜನತಾ ಪಕ್ಷದ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದರು. 1977ರ ಸಾರ್ವತ್ರಿಕ ಚುನಾವಣೆಯಲ್ಲಿ ಅವರು ಮೊದಲ ಬಾರಿಗೆ ಲೋಕಸಭೆಗೆ ಆಯ್ಕೆಯಾದರು. ಜನತಾ ಪಕ್ಷದ ಸರ್ಕಾರದಲ್ಲಿ ಕೇಂದ್ರ ಗೃಹ ಸಚಿವರಾಗಿದ್ದ ಅವರು, 1979ರಲ್ಲಿ ಹಣಕಾಸು ಸಚಿವರಾಗಿ, ನಂತರ ಉಪ ಪ್ರಧಾನಿ ಆಗಿ ಕಾರ್ಯನಿರ್ವಹಿಸಿದರು.

ಜನತಾ ಪಕ್ಷ ವಿಭಜನೆಯಾದಾಗ ಅವರಿಗೆ ಪ್ರಧಾನಿಯಾಗುವ ಅವಕಾಶ ಒದಗಿಬಂದಿತು. ಅವರು ಕಾಂಗ್ರೆಸ್ ಪಕ್ಷದ ಬೆಂಬಲದೊಂದಿಗೆ 1979ರ ಜುಲೈ 28ರಂದು ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇದಕ್ಕೂ ಮುನ್ನ 1967ರಲ್ಲಿ ಅವರು ಕಾಂಗ್ರೆಸ್ ಅನ್ನು ಬಲವಾಗಿ ವಿರೋಧಿಸಿದ್ದರು.

ಕಾಂಗ್ರೆಸ್ ಬೆಂಬಲ ಹಿಂಪಡೆದ ಕಾರಣ ಅವರು 1979ರ ಆಗಸ್ಟ್ 20ರಲ್ಲಿ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ನಂತರ 1980ರ ಜನವರಿ 14ರವರೆಗೆ ಹಂಗಾಮಿ ಪ್ರಧಾನಿಯಾಗಿದ್ದರು.

**ಸಿಂಗ್ ಸಾಧನೆಗಳು:** 1953ರಲ್ಲಿ ಭೂ ಹಿಡುವಳಿಗಳ ಬಲವರ್ಧನೆ ಕಾಯ್ದೆ, ಉತ್ತರ ಪ್ರದೇಶ ಜಮೀನ್ದಾರಿ ಮತ್ತು ಭೂ ಸುಧಾರಣಾ ಕಾಯ್ದೆಗಳನ್ನು ಜಾರಿಗೊಳಿಸಿದರು. ಇವು ರಾಜ್ಯದಲ್ಲಿ ಜಮೀನ್ದಾರಿ ವ್ಯವಸ್ಥೆಯನ್ನು ರದ್ದುಗೊಳಿಸಲು ಕಾರಣವಾದವು. 1964ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಮಸೂದೆಯನ್ನು ಅಂಗೀಕರಿಸುವ ಮೂಲಕ ಮಾರುಕಟ್ಟೆ ವ್ಯವಸ್ಥೆ ಸುಧಾರಿಸಿದರು. ಸಿಂಗ್ ಜಾರಿಗೊಳಿಸಿದ ಭೂ ಸುಧಾರಣಾ ಕಾಯ್ದೆಗಳಿಂದ ಅನೇಕ ಕೃಷಿಕರು ಸಶಕ್ತರಾದರು.

ಗ್ರಾಮೀಣ ವಿದ್ಯುದೀಕರಣ, ನಬಾರ್ಡ್‌ನಂತಹ ಸಂಸ್ಥೆಗಳ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಅವರು, ದೇಶದ ಪ್ರಮುಖ ಆರ್ಥಿಕ ತಜ್ಞರೂ ಆಗಿದ್ದರು. ‘ಇಂಡಿಯನ್ ಎಕನಾಮಿಕ್ ಪಾಲಿಸಿ– ದಿ ಗಾಂಧಿಯನ್ ಬ್ಲೂ ಪ್ರಿಂಟ್’, ‘ಎಕಾನಿಮಿಕ್ ನೈಟ್‌ಮೇರ್ ಆಫ್ ಇಂಡಿಯಾ– ಇಟ್ಸ್ ಕಾಸ್ ಆ್ಯಂಡ್ ಕ್ಯೂರ್’ ಸೇರಿದಂತೆ ಹಲವು ಪುಸ್ತಕಗಳನ್ನು ಬರೆದಿದ್ದಾರೆ.

ಚೌಧರಿ ಚರಣ್ ಸಿಂಗ್ ಅವರು 1987ರ ಮೇ 29ರಂದು ತಮ್ಮ 84ನೇ ವಯಸ್ಸಿನಲ್ಲಿ ನಿಧನರಾದರು. ಅವರಿಗೆ ಮರಣೋತ್ತರವಾಗಿ ‘ಭಾರತ ರತ್ನ’ ಒಲಿದುಬಂದಿದೆ.

# ರಾಜಕೀಯ ‘ಚಾಣಕ್ಯ’ ಪಿವಿಎನ್

ನವದೆಹಲಿ (ಪಿಟಿಐ): ಬಹುಭಾಷಾ ಪಂಡಿತ, ರಾಜಕೀಯ ಮುತ್ಸದ್ದಿ, ವಿದ್ವಾಂಸ, ಭಾರತದ ರಾಜಕಾರಣದ ಚಾಣಕ್ಯ... ಹೀಗೆ ವಿಶೇಷಣಗಳಿಂದ ಗುರುತಿಸಲ್ಪಡುವ ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರೀಗ ಭಾರತರತ್ನ.

ರಾಜಕೀಯ ವಲಯದಲ್ಲಿ ಪಿವಿಎನ್ ಎಂದೇ ಹೆಸರಾಗಿದ್ದ ಅವರಿಗೆ ಈ ಎಲ್ಲ ವಿಶೇಷಣಗಳು ಸಲ್ಲುತ್ತಿದ್ದವು. ಅವರು 1991–1996ರ ಅವಧಿಯಲ್ಲಿ ಪ್ರಧಾನಿಯಾಗಿದ್ದರು. ನಿಧನವಾದ 19 ವರ್ಷದ ಬಳಿಕ ದೇಶದ ಅತ್ಯುನ್ನತ ಪ್ರಶಸ್ತಿಗೆ ಅವರು ಭಾಜನರಾಗಿದ್ದಾರೆ.

ಪಿವಿಎನ್ ಅವರು ದಕ್ಷಿಣ ಭಾರತದಿಂದ ಪ್ರಧಾನಿ ಸ್ಥಾನಕ್ಕೇರಿದ ಮೊದಲಿಗರು. ಹಾಗೆಯೇ, ನೆಹರೂ–ಗಾಂಧಿ ಕುಟುಂಬಕ್ಕೆ ಹೊರತಾಗಿ ಆ ಸ್ಥಾನಕ್ಕೇರಿದ ಹಾಗೂ ಐದು ವರ್ಷ ಅಧಿಕಾರ ಅವಧಿ ಪೂರ್ಣಗೊಳಿಸಿದ ಪ್ರಥಮ ಕಾಂಗ್ರೆಸ್ ನಾಯಕರು ಹೌದು.

1990ರ ದಶಕ ದೇಶವನ್ನು ಪ್ರಕ್ಷುಬ್ಧ ಸ್ಥಿತಿ ಆವರಿಸಿದ್ದ ಕಾಲ. ಕಠಿಣ ಸಂದರ್ಭಗಳನ್ನು ನಿಭಾಯಿಸುವ ರಾಜಕೀಯ ಜಾಣ್ಮೆಯನ್ನು ತೋರುತ್ತಲೇ, ಆರ್ಥಿಕ ಸುಧಾರಣೆ ಕಾರ್ಯಕ್ರಮಗಳಿಗೂ ಒತ್ತು ನೀಡಿದರು. ಬಾಬರಿ ಮಸೀದಿ ನೆಲಸಮ ಕೃತ್ಯ, ಕೇಸರಿ ಪಡೆಗಳು ಬೇರೂರಿದ ಬೆಳವಣಿಗೆಗಳು 5 ವರ್ಷಗಳಲ್ಲಿ ಘಟಿಸಿದವು. ದೇಶ ಆರ್ಥಿಕ ಪ್ರಗತಿಯ ಹೊಸ ಹಾದಿ ಕಂಡುಕೊಂಡ ಅವಧಿಯೂ ಹೌದು.

ಕುಶಾಗ್ರಮತಿ, ರಾಜಕೀಯ ವಿದ್ವತ್ತಿಗೆ ಹೆಸರಾಗಿದ್ದ ಪಿವಿಎನ್ ಅವರಿಗೆ ಒಂಬತ್ತು ಭಾಷೆ ಬರುತ್ತಿದ್ದವು. 1992ರ ಬಾಬರಿ ಮಸೀದಿ ನೆಲಸಮದ ಬಳಿಕ, ಉರ್ದುವಿನಲ್ಲಿಯೇ ಮುಸ್ಲಿಂ ಮೌಲ್ವಿಗಳನ್ನು ಸರಳವಾಗಿ ಮನವೊಲಿಸಿದ್ದರು. ಅದೇ ವಾರದಲ್ಲಿ ತಮ್ಮ ನಿವಾಸದಲ್ಲಿ ಐಎಎಸ್ ಪ್ರೊಬೇಷನರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಭಗವದ್ಗೀತೆಯ ಶ್ಲೋಕಗಳನ್ನೂ ಉಲ್ಲೇಖಿಸಿದ್ದರು. ಪ್ರಧಾನಿ ಸ್ಥಾನ ಅಲಂಕರಿಸುವ ಮುನ್ನಾ ದಿನ ಭಾವುಕರಾಗಿದ್ದರು. ತುಂಬಾ ಖುಷಿಯಾಗುತ್ತಿದೆ. ಅದೇ ಸಮಯದಲ್ಲಿ ದೈತ್ಯದೇಹಿಯಾಗಿರುವ ಅನುಭವವೂ ಆಗುತ್ತಿದೆ ಎಂದು ಹೇಳಿದ್ದರು. ಪಿವಿಎನ್ ಅವರ ಅನಿಶ್ಚಿತ ಸೈದ್ಧಾಂತಿಕ ನಿಲುವು ಉಲ್ಲೇಖಿಸಿ ಮಣಿಶಂಕರ್ ಅಯ್ಯರ್ ಒಮ್ಮೆ ಪಿವಿಎನ್ ಅವರನ್ನು ‘ದೇಶದ ಮೊದಲ ಬಿಜೆಪಿ ಪ್ರಧಾನಿ’ ಎಂದೂ ಬಣ್ಣಿಸಿದ್ದರು.

ಅವಿಭಜಿತ ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ವಂಗರ ಗ್ರಾಮದ ಕೃಷಿಕ ಕುಟುಂಬದಲ್ಲಿ ಜೂನ್ 28, 1921ರಲ್ಲಿ ಜನಿಸಿದರು. ಒಸ್ಮಾನಿಯಾ, ಬಾಂಬೆ ಮತ್ತು ನಾಗ್ಪುರ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದರು. ಓದಿದ್ದು ಬಿ.ಎಸ್ಸಿ, ಕಾನೂನು ಪದವಿ.

ಕಾಲೇಜಿನಲ್ಲಿ ‘ವಂದೇ ಮಾತರಂ’ ಹಾಡದಂತೆ ನಿರ್ಬಂಧಿಸಿದ್ದ ನಿಜಾಂ ಸರ್ಕಾರದ ವಿರುದ್ಧ ಪ್ರತಿಭಟಿಸುವ ಮೂಲಕ 1938ರಲ್ಲಿ ಸಾರ್ವಜನಿಕ ಜೀವನ ಆರಂಭಿಸಿದರು. ನೆಹರೂ–ಗಾಂಧಿ ಕುಟುಂಬಕ್ಕೆ ನಿಷ್ಠರಾಗಿದ್ದರು.

1980ರ ದಶಕದ ವಿವಿಧ ಸಂದರ್ಭದಲ್ಲಿ ಕೇಂದ್ರದಲ್ಲಿ ವಿದೇಶಾಂಗ ವ್ಯವಹಾರ, ರಕ್ಷಣೆ, ಗೃಹ ಸಚಿವರಾಗಿ ಹೊಣೆಗಾರಿಕೆ ನಿಭಾಯಿಸಿದ್ದರು. ರಾಜೀವ್‌ಗಾಂಧಿ ಅವರ ಹತ್ಯೆಯ ಬಳಿಕ ಸರ್ವಾನುಮತದ ಅಭ್ಯರ್ಥಿಯಾಗಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದರು. ಈ ಹೊಣೆಗಾರಿಕೆಯೇ ಚುನಾವಣೆಯ ಬಳಿಕ ಅವರನ್ನು ಪ್ರಧಾನಿ ಸ್ಥಾನಕ್ಕೂ ಒಯ್ದಿತು.

ಆರಂಭದಲ್ಲಿ ಅಲ್ಪಮತದ ಸರ್ಕಾರ ಮುನ್ನಡೆಸಿದ್ದರು. ಚರ್ಚಾಸ್ಪದವಾದ ಕೆಲ ಸಂದರ್ಭಗಳ ಲಾಭ ಪಡೆದು ಬಹುಮತ ಗಳಿಸಿಕೊಂಡರು. ಕ್ರಿಮಿನಲ್ ಆರೋಪಕ್ಕೆ ಗುರಿಯಾದ ಮೊದಲ ಪ್ರಧಾನಿ ಎಂದು ಇತಿಹಾಸ ಪಿವಿಎನ್ ಅವರನ್ನು ಗುರುತಿಸುತ್ತದೆ. ಜಾರ್ಖಂಡ್ ಮುಕ್ತಿ ಮೋರ್ಚಾ ಸಂಸದರ ಲಂಚ ಪ್ರಕರಣ, ಸೇಂಟ್ ಕಿಟ್ಸ್ ನಕಲು ಪ್ರಕರಣ, ‘ದೇವಮಾನವ’ ಚಂದ್ರಸ್ವಾಮಿ ಭಾಗಿಯಾಗಿದ್ದ ಲಖುಭಾಯ್ ಪಾಠಕ್ ವಂಚನೆ ಪ್ರಕರಣದ ಆರೋಪ ಎದುರಿಸಿದ ಅವರು, ನಂತರದ ವರ್ಷಗಳಲ್ಲಿ ಆರೋಪಮುಕ್ತರಾದರು.

ವಯಸ್ಸು, ಆರೋಗ್ಯದ ಕಾರಣದಿಂದ ಪಿವಿಎನ್ ಪ್ರಧಾನಿಯಾಗಿ ಪೂರ್ಣಾವಧಿ ಪೂರೈಸುವ ನಿರೀಕ್ಷೆ ಹೆಚ್ಚಿನವರಿಗೆ ಇರಲಿಲ್ಲ. ಆದರೆ, ಅವಧಿ ಪೂರೈಸಿದರು. ಅವರ ಅವಧಿಯಲ್ಲಿ ಚರ್ಚಾಸ್ಪದವಾದ ಹಗರಣಗಳ ಪರಿಣಾಮ 1996ರ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿತು. ನಂತರದ ದಿನಗಳಲ್ಲಿ ಸೋನಿಯಾಗಾಂಧಿ ಕಾಂಗ್ರೆಸ್ ಅಧ್ಯಕ್ಷರಾದರು. ಇನ್ನೊಂದೆಡೆ, ಪಿವಿಎನ್ ಇತ್ತ ನೇಪಥ್ಯಕ್ಕೆ ಸರಿದರು. 2004ರ ಡಿಸೆಂಬರ್ 23ರಂದು (83 ವರ್ಷ) ನಿಧನರಾದರು.

# ಮತ್ತೆ ಮೂವರು ‘ಭಾರತ ರತ್ನ’

ಒಂದನೇ ಪುಟದಿಂದ...

ಅವಿಭಜಿತ ಆಂಧ್ರ ಪ್ರದೇಶಕ್ಕೆ ಸೇರಿರುವ ನರಸಿಂಹ ರಾವ್ ಅವರಿಗೆ ಗೌರವ ನೀಡಲು ತೀರ್ಮಾನಿಸಿರುವುದರ ಹಿಂದೆ ತೆಲುಗು ಮತಗಳನ್ನು ಸೆಳೆಯುವ ಉದ್ದೇಶ ಅಡಗಿದೆ ಎನ್ನಲಾಗುತ್ತಿದೆ. ಮೋದಿ ಅವರು ರಾವ್ ಅವರನ್ನು ಈ ಹಿಂದೆ ಹಲವು ಸಲ ಶ್ಲಾಘಿಸಿದ್ದರು. ಕಾಂಗ್ರೆಸ್ ಪಕ್ಷವು ಅವರನ್ನು ಮೂಲೆಗುಂಪು ಮಾಡಿದೆ ಎಂದು ಬಿಜೆಪಿ ಆರೋಪಿಸುತ್ತಾ ಬಂದಿತ್ತು. ಗಾಂಧಿ ಕುಟುಂಬದೊಂದಿಗೆ ರಾವ್ ಅವರ ಸಂಬಂಧವೂ ಚೆನ್ನಾಗಿರಲಿಲ್ಲ.

ತಮಿಳುನಾಡು ಮೂಲದ ಖ್ಯಾತ ಕೃಷಿ ವಿಜ್ಞಾನಿ ಸ್ವಾಮಿನಾಥನ್ ಅವರ ಆಯ್ಕೆಯ ಹಿಂದೆ ತಮಿಳು ಮತದಾರರನ್ನು ಸೆಳೆಯುವ ಗುರಿ ಇರುವುದು ಸ್ಪಷ್ಟ.

‘ಮಾಜಿ ಪ್ರಧಾನಿ ಚರಣ್ ಸಿಂಗ್ ಅವರು ರೈತರ ಹಕ್ಕುಗಳು ಮತ್ತು ಕಲ್ಯಾಣಕ್ಕಾಗಿ ತಮ್ಮ ಇಡೀ ಜೀವನ ಮುಡುಪಾಗಿಟ್ಟಿದ್ದಾರೆ. ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ, ಕೇಂದ್ರ ಗೃಹ ಸಚಿವರಾಗಿ ಮತ್ತು ಒಬ್ಬ ಶಾಸಕರಾಗಿದ್ದಾಗಲೂ ಅವರು ರಾಷ್ಟ್ರ ನಿರ್ಮಾಣಕ್ಕೆ ಚಾಲಕ ಶಕ್ತಿಯಾಗಿದ್ದರು. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಪ್ರಜಾಪ್ರಭುತ್ವಕ್ಕೆ ಅವರು ತೋರಿದ್ದ ಬದ್ಧತೆ ಇಡೀ ದೇಶಕ್ಕೆ ಸ್ಫೂರ್ತಿದಾಯಕವಾಗಿದೆ’ ಎಂದು ಪ್ರಧಾನಿ ಬಣ್ಣಿಸಿದ್ದಾರೆ.

‘ನರಸಿಂಹರಾವ್ ಅವರ ದೂರದೃಷ್ಟಿಯ ನಾಯಕತ್ವವು ಭಾರತವನ್ನು ಆರ್ಥಿಕವಾಗಿ ಮುನ್ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿತಲ್ಲದೆ, ದೇಶದ ಸಮೃದ್ಧಿ ಮತ್ತು ಬೆಳವಣಿಗೆಗೆ ಭದ್ರ ಬುನಾದಿ ಹಾಕಿಕೊಟ್ಟಿತು’ ಎಂದು ಶ್ಲಾಘಿಸಿದರು. ‘ಸವಾಲಿನ ಸಮಯದಲ್ಲಿ ಭಾರತವು ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸಲು ಸ್ವಾಮಿನಾಥನ್ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ದೇಶದ ಕೃಷಿ ಕ್ಷೇತ್ರವನ್ನು ಆಧುನೀಕರಣಗೊಳಿಸಲು ಮಹೋನ್ನತ ಪ್ರಯತ್ನ ಮಾಡಿದ್ದಾರೆ’ ಎಂದು ಪ್ರಧಾನಿ ಹೇಳಿದರು.

**ಕೇಂದ್ರವು ಒಂದೆಡೆ ರಾವ್ ಅವರಿಗೆ ಭಾರತ ರತ್ನ ಘೋಷಣೆ ಮಾಡುತ್ತದೆ. ಇನ್ನೊಂದೆಡೆ ರಾವ್ ಅವರ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದ ಮನಮೋಹನ್ ಸರ್ಕಾರದ ಕುರಿತ ‘ಶ್ವೇತ ಪತ್ರ’ ಬಿಡುಗಡೆ ಮಾಡುತ್ತದೆ**

**ರಾಜೀವ್ ಶುಕ್ಲಾ,** ಕಾಂಗ್ರೆಸ್ ನಾಯಕ

**ನರಸಿಂಹರಾವ್ ಅವರಿಗೆ ಭಾರತ ರತ್ನ ನೀಡಿರುವುದನ್ನು ಸ್ವಾಗತಿಸುತ್ತೇನೆ**

**ಸೋನಿಯಾ ಗಾಂಧಿ,** ಕಾಂಗ್ರೆಸ್ ನಾಯಕಿ

## ಜಾಟರು, ರೈತರು ಗುರಿ?

ಚರಣ್ ಸಿಂಗ್ ಅವರ ಮೊಮ್ಮಗ, ರಾಜ್ಯಸಭಾ ಸದಸ್ಯ ಜಯಂತ್ ಸಿಂಗ್ ನೇತೃತ್ವದ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಪಕ್ಷವು ‘ಇಂಡಿಯಾ’ ಮೈತ್ರಿಕೂಟ ತೊರೆದು ಎನ್‌ಡಿಎ ಜತೆ ಸೇರುವ ತಯಾರಿಯಲ್ಲಿದೆ. ಕರ್ಪೂರಿ ಠಾಕೂರ್ ಅವರಿಗೆ ‘ಭಾರತ ರತ್ನ’ ಘೋಷಣೆಯಾದ ಕೆಲ ದಿನಗಳ ಬಳಿಕ ನಿತೀಶ್ ಕುಮಾರ್ ನೇತೃತ್ವದ ಜೆಡಿಯು, ‘ಇಂಡಿಯಾ’ ಮೈತ್ರಿಕೂಟದಿಂದ ಹೊರಬಂದು, ಎನ್‌ಡಿಎ ಕೂಟ ಸೇರಿತು.

ಮೋದಿ ಅವರು ‘ಭಾರತ ರತ್ನ’ ಘೋಷಿಸಿರುವುದನ್ನು ತಮ್ಮ ‘ಎಕ್ಸ್’ ಖಾತೆಯಲ್ಲಿ ಟ್ಯಾಗ್ ಮಾಡಿರುವ ಜಯಂತ್, ‘ದಿಲ್ ಜೀತ್ ಲಿಯಾ’ (ನೀವು ನಮ್ಮ ಹೃದಯವನ್ನು ಗೆದ್ದಿದ್ದೀರಿ) ಎಂದು ಬರೆದುಕೊಂಡಿದ್ದಾರೆ. ಆರ್‌ಎಲ್‌ಡಿಯನ್ನು ಎನ್‌ಡಿಎಗೆ ಸೇರಿಸಿಕೊಳ್ಳುವ ಪ್ರಯತ್ನದ ಬೆನ್ನಲ್ಲೇ ಚರಣ್ ಸಿಂಗ್ ಅವರಿಗೆ ‘ಭಾರತ ರತ್ನ’ ನೀಡುವ ಮೂಲಕ ಬಿಜೆಪಿಯು ಜಾಟ್ ಸಮುದಾಯವನ್ನು ಓಲೈಸುವ ಪ್ರಯತ್ನ ಮಾಡಿದೆ. ಅದೇ ರೀತಿ, ರೈತ ಸಮುದಾಯವು ತನ್ನ ಮೇಲೆ ಹೊಂದಿರುವ ಆಕ್ರೋಶವನ್ನು ತಣ್ಣಗಾಗಿಸುವ ಕಸರತ್ತು ನಡೆಸಿದೆ ಎಂದು ವಿಶ್ಲೇಷಿಸಲಾಗಿದೆ.



ಪವಿತ್ರ ಸ್ನಾನ

ವಾರ್ಷಿಕ ‘ಮಾಘ ಮೇ’ ಹಬ್ಬದ ‘ಮೌನಿ ಅಮಾವಾಸ್ಯೆ’ ಪ್ರಯುಕ್ತ ಪ್ರಯಾಗ್‌ರಾಜ್‌ನ ಸಂಗಮದಲ್ಲಿ ಶುಕ್ರವಾರ ಸಾಧುವೊಬ್ಬರು ಪವಿತ್ರ ಸ್ನಾನ ಮಾಡಿದರು –ಪಿಟಿಐ ಚಿತ್ರ

# ‘ದಿನಾಂಕ ಬದಲಿಸದೇ ಸಂವಿಧಾನ ಪ್ರಸ್ತಾವನೆ ತಿದ್ದುಪಡಿ ಸಾಧ್ಯವೇ?’

## ಸಮಾಜವಾದಿ, ಜಾತ್ಯತೀತ ಪದಗಳನ್ನು ತೆಗೆದುಹಾಕಲು ಕೋರಿದ್ದ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದಿನಾಂಕವನ್ನು ಹಾಗೆ ಉಳಿಸಿಕೊಂಡು, ಸಂವಿಧಾನದ ಪ್ರಸ್ತಾವನೆಯನ್ನು ತಿದ್ದುಪಡಿ ಮಾಡಲು ಸಾಧ್ಯವೇ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಪ್ರಶ್ನಿಸಿದೆ.

ಸಂವಿಧಾನದ ಪ್ರಸ್ತಾವನೆಯಿಂದ ‘ಸಮಾಜವಾದಿ’ ಹಾಗೂ ‘ಜಾತ್ಯತೀತ’ ಪದಗಳನ್ನು ತೆಗೆದು ಹಾಕುವಂತೆ ಕೋರಿ ರಾಜ್ಯಸಭೆಯ ಮಾಜಿ ಸದಸ್ಯ ಸುಬ್ರಮಣಿಯನ್ ಸ್ವಾಮಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತಾ ಅವರಿದ್ದ ಪೀಠ ಈ ಪ್ರಶ್ನೆ ಎತ್ತಿದೆ. ‘ಪೀಠಿಕೆಯನ್ನು ತಿದ್ದುಪಡಿ ಮಾಡಲು ಸಾಧ್ಯ ಇಲ್ಲ ಎಂದೇನೂ ಅಲ್ಲ’ ಎಂದೂ ಪೀಠ ಅಭಿಪ್ರಾಯಪಟ್ಟಿದೆ.

‘1976ರಲ್ಲಿ ಸಂವಿಧಾನಕ್ಕೆ ತಂದ 42ನೇ ತಿದ್ದುಪಡಿ ಮೂಲಕ ಪೀಠಿಕೆಯನ್ನು ತಿದ್ದುಪಡಿ ಮಾಡಿ, ಸಮಾಜವಾದಿ ಮತ್ತು ಜಾತ್ಯತೀತ ಎಂಬ ಪದಗಳನ್ನು ಸೇರ್ಪಡೆ ಮಾಡಲಾಗಿದೆ.

ಆದರೆ, ಈ ತಿದ್ದುಪಡಿಯನ್ನು ಅಳವಡಿಸಿಕೊಂಡ ದಿನಾಂಕವನ್ನು 1949ರ ನವೆಂಬರ್ 29 ಎಂಬುದಾಗಿಯೇ ಉಳಿಸಿಕೊಳ್ಳಲಾಗಿದೆ. ಹೀಗಾಗಿ, ಈ ವಿಷಯವನ್ನು ತಾರ್ಕಿಕ ದೃಷ್ಟಿಕೋನದಿಂದ ಅವಲೋಕಿಸುವುದು ಅಗತ್ಯ’ ಎಂದು ಪೀಠ ಹೇಳಿದೆ. ‘ಇದೇ ನಾವು ಅವಲೋಕಿಸಬೇಕಿರುವ ನಿಜವಾದ ಅಂಶ’ ಎಂದು ಸುಬ್ರಮಣಿಯನ್ ಸ್ವಾಮಿ ಹಾಗೂ ಹಾಗೂ ಇತರ ವಕೀಲರು ನ್ಯಾಯಪೀಠಕ್ಕೆ ತಿಳಿಸಿದರು.

‘ಸಮಾಜವಾದಿ ಮತ್ತು ಜಾತ್ಯತೀತ ಪದಗಳು ಮೂಲ ಸಂವಿಧಾನದಲ್ಲಿ ಇರಲಿಲ್ಲ’ ಎಂದೂ ಪೀಠದ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, ‘ದಿನಾಂಕವನ್ನು ಹಾಗೆ ಉಳಿಸಿಕೊಂಡು ತಿದ್ದುಪಡಿ ಮಾಡಲಾಗಿರುವ ಏಕೈಕ ಪ್ರಸ್ತಾವನೆ ಇದೇ ಇರಬೇಕು’ ಎಂದು ಹೇಳಿತು.

‘ಪ್ರಸ್ತಾವನೆಯು ನಿರ್ದಿಷ್ಟ ದಿನಾಂಕವನ್ನು ಹೊಂದಿದೆ’ ಎಂದು ಅರ್ಜಿದಾರರೊಬ್ಬರ ಪರ ವಕೀಲರು ಪೀಠಕ್ಕೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸ್ವಾಮಿ, ‘ಇದಕ್ಕೆ ಸಂಬಂಧಿಸಿದ ತಿದ್ದುಪಡಿ ಕಾಯ್ದೆಯನ್ನು ತುರ್ತು ಪರಿಸ್ಥಿತಿ ವೇಳೆ (1975–77) ಅಂಗೀಕರಿಸಲಾಯಿತು’ ಎಂದು ಪ್ರತಿಕ್ರಿಯಿಸಿದರು. ವಾದ–ಪ್ರತಿವಾದಗಳನ್ನು ಆಲಿಸಿದ ಪೀಠವು, ವಿಚಾರಣೆಯನ್ನು ಏಪ್ರಿಲ್‌ಗೆ ಮುಂದೂಡಿತು.

## ಜೀವಾವಧಿ ಶಿಕ್ಷೆ ವ್ಯಾಖ್ಯಾನ: ಅರ್ಜಿ ವಿಚಾರಣೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಜೀವಾವಧಿ ಶಿಕ್ಷೆಯು ಜೀವನಪರ್ಯಂತ ಶಿಕ್ಷೆಯೋ ಅಥವಾ ಅಪರಾಧ ದಂಡ ಪ್ರಕ್ರಿಯೆ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 432ರಲ್ಲಿ ದತ್ತವಾಗಿರುವ ಅಧಿಕಾರವನ್ನು ಬಳಸಿ ಶಿಕ್ಷೆಯ ಅವಧಿಯನ್ನು ಕಡಿತ ಅಥವಾ ಅವಧಿ ಪೂರ್ವ ಬಿಡುಗಡೆ ಮಾಡಬಹುದೇ ಎಂಬ ಬಗ್ಗೆ ಸ್ಪಷ್ಟನೆ ಕೋರಿರುವ ಅರ್ಜಿ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ಒಪ್ಪಿಗೆ ನೀಡಿದೆ.



ಸೆಕ್ಷನ್ 432ರಡಿಯಲ್ಲಿ ಶಿಕ್ಷೆಯನ್ನು ರದ್ದು ಮಾಡಬಹುದು ಅಥವಾ ಅವಧಿ ಪೂರ್ವ ಬಿಡುಗಡೆ ಮಾಡಬಹುದು.

ಚಂದ್ರಕಾಂತ್ ಝಾ ಅವರು ಸಲ್ಲಿಸಿರುವ ಅರ್ಜಿಗೆ ಪ್ರತಿಕ್ರಿಯೆ ನೀಡುವಂತೆ ದೆಹಲಿ ಸರ್ಕಾರಕ್ಕೆ ಋಷಿಕೇಶ್ ರಾಯ್ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರನ್ನು ಒಳಗೊಂಡ ನ್ಯಾಯಪೀಠ ನೋಟಿಸ್ ರವಾನಿಸಿದೆ.

ಮೂರು ಕೊಲೆ ಪ್ರಕರಣದಲ್ಲಿ ಝಾ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.

‘ದೆಹಲಿ ಹೈಕೋರ್ಟ್, ವಿಚಾರಣಾ ನ್ಯಾಯಾಲಯವು ನೀಡಿದ್ದ ಮರಣ ದಂಡನೆ ಶಿಕ್ಷೆಯನ್ನು ಕಡಿತಗೊಳಿಸಿ ಜೀವಾವಧಿ ಶಿಕ್ಷೆ ವಿಧಿಸಿದೆ. ಇದರ ಅರ್ಥ ಜೀವನ ಪರ್ಯಂತ ಶಿಕ್ಷೆಯೇ’ ಎಂದು ಅರ್ಜಿಯಲ್ಲಿ ಕೇಳಿದ್ದಾರೆ.

‘ಭಾರತೀಯ ದಂಡ ಸಂಹಿತೆಯ ಸೆಕ್ಷನ್ 302ರಲ್ಲಿ ‘ಮರಣ ದಂಡನೆ ಮತ್ತು ಜೀವಾವಧಿ ಶಿಕ್ಷೆ’ ಎಂಬ ಎರಡು ರೀತಿಯ ಶಿಕ್ಷೆಗಳನ್ನು ಮಾತ್ರ ಉಲ್ಲೇಖಿಸಲಾಗಿದೆ. ಇವುಗಳ ಹೊರತಾಗಿರುವ ಶಿಕ್ಷೆಯನ್ನು ಉಲ್ಲೇಖಿಸಿಲ್ಲ’ ಎಂದು ಹೇಳಿದ್ದಾರೆ.

‘ಜೀವಾವಧಿ ಶಿಕ್ಷೆಯನ್ನು ವ್ಯಕ್ತಿಯ ಜೀವಿತಾವಧಿಯವರೆಗೆ ನೀಡುವ ಶಿಕ್ಷೆ ಎಂದು ಅರ್ಥೈಸಿದಲ್ಲಿ ಅಪರಾಧಿಯ ಮೂಲಭೂತ ಹಕ್ಕನ್ನು ಉಲ್ಲಂಘಿಸಿದಂತಾಗುತ್ತದೆ. ಕೊಲೆ ಅಪರಾಧಕ್ಕೆ ಈ ಶಿಕ್ಷೆ ನೀಡುವುದು ಅಸಾಂವಿಧಾನಿಕ ಸಹ. ಏಕೆಂದರೆ ತನ್ನನ್ನು ತಾನು ಬದಲಾವಣೆ ಮಾಡಿಕೊಳ್ಳುವ ಅವಕಾಶವನ್ನು ಅಪರಾಧಿಯಿಂದ ಕಸಿದುಕೊಂಡಂತಾಗುತ್ತದೆ ’ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

### ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಮೂರ್ತಿ ಪಿ.ಎಸ್.ನರಸಿಂಹ

ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು (ಮನರೇಗಾ) ರಾಜ್ಯಗಳು ಅನುಷ್ಠಾನಗೊಳಿಸಲು ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿದ್ದ ಅರ್ಜಿಯ ವಿಚಾರಣೆಯಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರು ಶುಕ್ರವಾರ ಹಿಂದೆ ಸರಿದಿದ್ದಾರೆ.

ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಅರವಿಂದ ಕುಮಾರ್ ಅವರಿದ್ದ ನ್ಯಾಯಪೀಠವು ಅರ್ಜಿಯ ವಿಚಾರಣೆ ನಡೆಸಬೇಕಿತ್ತು.

### ಉತ್ತರ ಪ್ರದೇಶ ಸರ್ಕಾರಕ್ಕೆ ‘ಸುಪ್ರೀಂ’ ತರಾಟೆ

ಹೋಂ ವರ್ಕ್ ಮಾಡಲಿಲ್ಲ ಎಂಬ ಕಾರಣಕ್ಕೆ ಮುಸ್ಲಿಂ ವಿದ್ಯಾರ್ಥಿಗೆ ಸಹಪಾಠಿಗಳಿಂದ ಶಿಕ್ಷಕಿಯೊಬ್ಬರು ಕಪಾಳಕ್ಕೆ ಹೊಡೆಸಿದ್ದ ಪ್ರಕರಣದಲ್ಲಿ ತನ್ನ ಆದೇಶ ಪಾಲಿಸದ ಉತ್ತರ ಪ್ರದೇಶ ಸರ್ಕಾರವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತರಾಟೆಗೆ ತೆಗೆದುಕೊಂಡಿದೆ.

ಸರ್ಕಾರವು ಘಟನೆಗೆ ಸಾಕ್ಷಿಯಾದ ವಿದ್ಯಾರ್ಥಿಗಳ ಆಪ್ತ ಸಮಾಲೋಚನೆ ನಡೆಸದೆ ತನ್ನ ನಿರ್ದೇಶನವನ್ನು ಉಲ್ಲಂಘಿಸಿದೆ ಎಂದು ನ್ಯಾಯಪೀಠವು ಕಿಡಿಕಾರಿತು.

ಘಟನೆಗೆ ಸಾಕ್ಷಿಯಾದ ವಿದ್ಯಾರ್ಥಿಗಳ ಆಪ್ತ ಸಮಾಲೋಚನೆ ನಡೆಸಬೇಕು ಮತ್ತು ಎರಡು ವಾರಗಳ ಒಳಗಾಗಿ ಪ್ರಮಾಣಪತ್ರ ಸಲ್ಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಎಸ್.ಓಕಾ ಮತ್ತು ಉಜ್ಜಲ್ ಭುಯಿಯಾಂ ಅವರನ್ನು ಒಳಗೊಂಡ ನ್ಯಾಯಪೀಠವು ಸೂಚಿಸಿತ್ತು.

‘ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್‌ನ (ಟಿಐಎಸ್‌ಎಸ್) ವರದಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ. ಸಂತ್ರಸ್ತ ಬಾಲಕ ಮತ್ತು ಇತರ ವಿದ್ಯಾರ್ಥಿಗಳಿಗೆ ಸಮಾಲೋಚನೆ ಒದಗಿಸಲೇಬೇಕು ಎಂದು ವರದಿಯಲ್ಲಿ ಸ್ಪಷ್ಟವಾಗಿ ಇದೆ. ಆದರೆ, ಈ ಕುರಿತು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ನ್ಯಾಯಪೀಠ ಹೇಳಿತು. ಬಳಿಕ ವಿಚಾರಣೆಯನ್ನು ಮಾರ್ಚ್ 1ಕ್ಕೆ ಮುಂದೂಡಿತು.

## ಶ್ವೇತಪತ್ರದ ಮೇಲಿನ ಚರ್ಚೆ ವೇಳೆ ನಿರ್ಮಲಾ ಸೀತಾರಾಮನ್ ವಾಗ್ದಾಳಿ

# ‘ದೇಶವನ್ನು ದಾರಿದ್ರ್ಯಕ್ಕೆ ತಳ್ಳಿದ್ದ ಯುಪಿಎ’



ನಿರ್ಮಲಾ ಸೀತಾರಾಮನ್

ನವದೆಹಲಿ (ಪಿಟಿಐ): ‘ಕುಟುಂಬ ಮೊದಲು’ ಎನ್ನುವ ನಿಲುವಿಗೆ ಅಂಟಿಕೊಂಡಿದ್ದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ, ಆರ್ಥಿಕತೆಯ ಕೆಟ್ಟ ನಿರ್ವಹಣೆಯಿಂದ 2014ರಲ್ಲಿ ದೇಶವನ್ನು ಭೀಕರ ದಾರಿದ್ರ್ಯಕ್ಕೆ ತಳ್ಳಿತ್ತು. ಆದರೆ, ಅದು ಈಗ ನರೇಂದ್ರ ಮೋದಿ ಸರ್ಕಾರಕ್ಕೆ ಆರ್ಥಿಕತೆ ನಿರ್ವಹಣೆಯ ಬಗ್ಗೆ ಪಾಠ ಹೇಳುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಾಗ್ದಾಳಿ ನಡೆಸಿದ್ದಾರೆ.

‘ಭಾರತದ ಆರ್ಥಿಕತೆ ಮೇಲಿನ ಶ್ವೇತಪತ್ರ ಮತ್ತು ಭಾರತೀಯರ ಜೀವನದ ಮೇಲೆ ಅದರ ಪರಿಣಾಮ’ದ ಬಗ್ಗೆ ಲೋಕಸಭೆಯಲ್ಲಿ ಶುಕ್ರವಾರ ಚರ್ಚೆ ಆರಂಭಿಸಿದ ಅವರು, ಮೋದಿ ಸರ್ಕಾರವು ‘ದೇಶ ಮೊದಲು’ ಎನ್ನುವ ನಿಲುವು ಹೊಂದಿದ್ದು, ದೇಶದ ಆರ್ಥಿಕತೆಯನ್ನು ಐದನೇ ಸ್ಥಾನಕ್ಕೆ ಕೊಂಡೊಯ್ದಿದೆ. ಅಲ್ಲದೆ ಜಗತ್ತಿನ ಮೂರನೇ ಅತಿ ದೊಡ್ಡ ಆರ್ಥಿಕತೆ ಆಗುವತ್ತ ದಾಪುಗಾಲು ಹಾಕುತ್ತಿದೆ ಎಂದು ಹೇಳಿದರು.

ಕಾಂಗ್ರೆಸ್ ಸದಸ್ಯರ ಗದ್ದಲದ ನಡುವೆ ಮಾತು ಮುಂದುವರಿಸಿದ ಅವರು, ‘ಮುಂದಿನ ಪೀಳಿಗೆಗಾಗಿ ಶ್ವೇತಪತ್ರವನ್ನು ತರಲಾಗಿದ್ದು, ಭಾರತದ ಗತವೈಭವವನ್ನು ಮರಳಿ ತರಲು ಪ್ರಧಾನಿ ಮೋದಿ ಎಷ್ಟರ ಮಟ್ಟಿಗೆ ಶ್ರಮಿಸುತ್ತಿದ್ದಾರೆ ಎಂಬುದನ್ನು ಯುವಜನರು ಅರಿಯಬೇಕಾಗಿದೆ’ ಎಂದು ಹೇಳಿದರು.

‘ಕೋವಿಡ್ ಬಿಕ್ಕಟ್ಟು 2008ರ ಜಾಗತಿಕ ಆರ್ಥಿಕ ಬಿಕ್ಕಟ್ಟಿಗಿಂತ ಹೆಚ್ಚು ವಿನಾಶಕಾರಿಯಾಗಿತ್ತು. ಆದರೆ, ಮೋದಿ ಸರ್ಕಾರವು ಅದನ್ನು ಪ್ರಾಮಾಣಿಕವಾಗಿ, ಪಾರದರ್ಶಕವಾಗಿ, ಬದ್ಧತೆಯಿಂದ ಎದುರಿಸಿ, ಜನರಿಗೆ ಉಚಿತವಾಗಿ ಲಸಿಕೆಗಳನ್ನು ಪೂರೈಸಿತು. 2008ರಲ್ಲಿ ಯುಪಿಎ ಸರ್ಕಾರವು ‘ಶುದ್ಧ’ ಮನಸ್ಸಿನಿಂದ ಬಿಕ್ಕಟ್ಟನ್ನು ಎದುರಿಸಲಿಲ್ಲ’ ಎಂದು ಅವರು ಆರೋಪಿಸಿದರು.

ಯುಪಿಎ ಅವಧಿಯ ಕಲ್ಲಿದ್ದಲು ಹಗರಣದಿಂದಾಗಿ ₹1.86 ಲಕ್ಷ ಕೋಟಿ ನಷ್ಟವಾಗಿರುವ ಬಗ್ಗೆ ಸಿಎಜಿ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ ಎಂದ ಅವರು, ಸುಪ್ರೀಂ ಕೋರ್ಟ್ 214 ಕಲ್ಲಿದ್ದಲು ನಿಕ್ಷೇಪಗಳ ಅನುಮತಿ ರದ್ದು ಮಾಡಿದ್ದನ್ನು ಸ್ಮರಿಸಿದರು.

‘ಮೋದಿ ಸರ್ಕಾರವು ಪಾರದರ್ಶಕವಾಗಿ ಕಲ್ಲಿದ್ದಲು ಹರಾಜು ನಡೆಸಿತು. ಅದರಿಂದ ಕಲ್ಲಿದ್ದಲು ಉತ್ಪಾದನೆಯು 567 ಮೆಟ್ರಿಕ್ ಟನ್‌ನಿಂದ 900 ಮೆಟ್ರಿಕ್ ಟನ್‌ಗೆ ಏರಿಕೆಯಾಯಿತು’ ಎಂದು ತಿಳಿಸಿದರು.

‘ಶ್ವೇತಪತ್ರವು ಹಿಂದಿನ ಯುಪಿಎ ಸರ್ಕಾರಕ್ಕೆ ಅಪಖ್ಯಾತಿ ತರುವ ಪ್ರಯತ್ನವಾಗಿದೆ’ ಎಂದು ಟಿಎಂಸಿ ಸದಸ್ಯ ಸೌಗತ ರಾಯ್ ಮತ್ತು ಆರ್‌ಎಸ್‌ಪಿಯ ಎನ್.ಕೆ.ಪ್ರೇಮಚಂದ್ರನ್ ಆಕ್ಷೇಪ ವ್ಯಕ್ತಪಡಿಸಿದರು.

ಪದೇ ಪದೇ ವಿರೋಧ ಪಕ್ಷಗಳು ತಮ್ಮ ಮಾತಿಗೆ ಅಡ್ಡಿಪಡಿಸಿದಾಗ, ‘ನಿಮಗೆ ಧೈರ್ಯವಿದ್ದರೆ ಅಡ್ಡಿಪಡಿಸುವ ಬದಲು ನೀವು ನನಗೆ ಉತ್ತರ ಕೊಡಿ’ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

### ‘ಕಟ್ಟುಕಥೆಗಳ ಕಣಜ, ಸುಳ್ಳುಗಳ ಶಿಖರ’

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಹೊರತಂದಿರುವ ಶ್ವೇತಪತ್ರವನ್ನು ‘ಕಟ್ಟುಕಥೆಗಳ ಕಣಜ ಮತ್ತು ಸುಳ್ಳುಗಳ ಶಿಖರ’ ಎಂದು ಕರೆದಿರುವ ಕಾಂಗ್ರೆಸ್ ಮುಖಂಡ ಅಧೀರ್ ರಂಜನ್ ಚೌಧರಿ, ಅದು ಚುನಾವಣಾ ಪ್ರಣಾಳಿಕೆಯಲ್ಲದೇ ಮತ್ತೇನಲ್ಲ ಎಂದು ಟೀಕಿಸಿದ್ದಾರೆ.

ಲೋಕಸಭೆಯಲ್ಲಿ ಶ್ವೇತಪತ್ರದ ಬಗ್ಗೆ ನಿರ್ಮಲಾ ಸೀತಾರಾಮನ್ ಅವರು ಆರಂಭಿಸಿದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅಧೀರ್ ರಂಜನ್ ಚೌಧರಿ, ಬಿಜೆಪಿಯು ಭ್ರಷ್ಟಾಚಾರದ, ಸ್ವಪ್ರತಿಷ್ಠೆಯ ರಾಜಕಾರಣದಲ್ಲಿ ತೊಡಗಿದೆ ಎಂದು ವಾಗ್ದಾಳಿ ನಡೆಸಿದರು.

‘ಕೇಂದ್ರವು ಯುಪಿಎ ಅವಧಿಯ ಸಾಧನೆಗಳನ್ನು ಸ್ಮರಿಸಬೇಕು. ನಿಮ್ಮ ಹಿಂದಿನವರನ್ನು ನಿಂದಿಸುವುದು ತರವಲ್ಲ’ ಎಂದು ಅವರು ಹೇಳಿದರು.

## ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಆಡಿಟ್ ವರದಿ

# ಕಾಂಗ್ರೆಸ್‌ಗಿಂತ ಬಿಜೆಪಿ ವೆಚ್ಚ 5 ಪಟ್ಟು ಹೆಚ್ಚು

ಪ್ರಜಾವಾಣಿ ವಾರ್ತೆ

ನವದೆಹಲಿ: ಆಡಳಿತಾರೂಢ ಬಿಜೆಪಿಯು 2022–23ರಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್‌ಗಿಂತ ಐದು ಪಟ್ಟು ಹೆಚ್ಚು ಹಣ ಖರ್ಚು ಮಾಡಿದೆ. ಅಲ್ಲದೆ ಬಾಂಡ್‌ಗಳ ಮೂಲಕ ದೇಣಿಗೆ ರೂಪದಲ್ಲಿ ಏಳು ಪಟ್ಟು ಅಧಿಕ ಹಣ ಸಂಗ್ರಹಿಸಿದೆ ಎಂಬುದು ಆಡಿಟ್ ವರದಿಯಲ್ಲಿ ಗೊತ್ತಾಗಿದೆ. ಚುನಾವಣೆಗೆ ಬಿಜೆಪಿ ₹1,092.15 ಕೋಟಿ ಖರ್ಚು ಮಾಡಿದ್ದರೆ, ಕಾಂಗ್ರೆಸ್ ₹192.55 ಕೋಟಿ ವೆಚ್ಚ ಮಾಡಿದೆ. 2021–22ರಲ್ಲಿ ಬಿಜೆಪಿ ₹645.85 ಕೋಟಿ ಖರ್ಚು ಮಾಡಿತ್ತು.

ವಿವಾದಾತ್ಮಕ ಚುನಾವಣಾ ಬಾಂಡ್‌ಗಳ ವಿಚಾರದಲ್ಲಿ, ಹಿಂದಿನ ಹಣಕಾಸು ವರ್ಷದಲ್ಲಿ ಚುನಾವಣಾ ಬಾಂಡ್‌ಗಳಿಂದ ಕಾಂಗ್ರೆಸ್ ಸಂಗ್ರಹಿಸಿದ ₹171.01 ಕೋಟಿಗೆ ಹೋಲಿಸಿದರೆ, ಬಿಜೆಪಿ ಸಂಗ್ರಹಿಸಿರುವುದು ₹1,294.14 ಕೋಟಿ. ಚುನಾವಣಾ ಬಾಂಡ್‌ಗಳು ಮುಖ್ಯವಾಗಿ ಆಡಳಿತ ಪಕ್ಷಕ್ಕೆ ಅನುಕೂಲಕರ ಎಂಬ ವಿರೋಧ ಪಕ್ಷದ ಆರೋಪಕ್ಕೆ ಈ ಅಂಕಿಅಂಶ ಹೆಚ್ಚು ಪುಷ್ಟಿ ನೀಡುತ್ತದೆ.

ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಲೆಕ್ಕಪರಿಶೋಧನಾ ವರದಿಯು, 2022–23ರಲ್ಲಿ ಬಿಜೆಪಿಯ ಒಟ್ಟು ಆದಾಯವು ₹1,917.12 ಕೋಟಿಯಿಂದ ₹2,360.84 ಕೋಟಿಗೆ ಏರಿರುವುದನ್ನು ಮತ್ತು ಕಾಂಗ್ರೆಸ್‌ನ ಆದಾಯ ಕೇವಲ ₹452.37 ಕೋಟಿ ಇರುವುದನ್ನು ತೋರಿಸಿದೆ. ಈ ಅವಧಿಯಲ್ಲಿ ಬಿಜೆಪಿ ಮಾಡಿರುವ ಒಟ್ಟು ಖರ್ಚು ₹1,361.68 ಕೋಟಿ ಮತ್ತು ಕಾಂಗ್ರೆಸ್ ಮಾಡಿರುವ ಒಟ್ಟು ಖರ್ಚು ₹467.13 ಕೋಟಿ.

ಒಟ್ಟು ಆದಾಯದಲ್ಲಿ, ಚುನಾವಣಾ ಬಾಂಡ್‌ಗಳ ಪಾಲು ಶೇ 54ರಷ್ಟಿದೆ. ₹ 2,120.06 ಕೋಟಿ ಬಿಜೆಪಿಗೆ ದೇಣಿಗೆಯಿಂದ ಬಂದಿದೆ. ಬ್ಯಾಂಕ್ ಬಡ್ಡಿಯಿಂದ ₹237.3 ಕೋಟಿ ದೊರೆತಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಬಡ್ಡಿ ಮೊತ್ತ ₹ 133.3 ಕೋಟಿ ಲಭಿಸಿತ್ತು.

ಚುನಾವಣೆಯಲ್ಲಿ ಬಿಜೆಪಿಯು ಜಾಹೀರಾತಿಗೆ ₹432.14 ಕೋಟಿ ವೆಚ್ಚ ಮಾಡಿದ್ದರೆ, ವಿಮಾನ ಮತ್ತು ಹೆಲಿಕಾಪ್ಟರ್ ಬಾಡಿಗೆಗೆ ₹78.22 ಕೋಟಿ ವಿನಿಯೋಗಿಸಿದೆ. ಹಾಗೆಯೇ ಅಭ್ಯರ್ಥಿಗಳಿಗೆ ಚುನಾವಣೆ ಎದುರಿಸಲು ₹75.05 ಕೋಟಿ ಆರ್ಥಿಕ ನೆರವು ನೀಡಲಾಗಿದೆ. ಪತ್ರಿಕಾಗೋಷ್ಠಿಗಳಿಗಾಗಿ ₹71.60 ಲಕ್ಷ ವೆಚ್ಚ ಮಾಡಿರುವುದಾಗಿ ಆಡಿಟ್ ವರದಿಯಲ್ಲಿ ತೋರಿಸಿದೆ.

2022-23ರಲ್ಲಿ ಬಿಜೆಪಿ ಹಳೆಯ ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ₹15.59 ಲಕ್ಷಕ್ಕೆ ಮಾರಾಟ ಮಾಡಿದೆ.

2021-22 ರಲ್ಲಿ ಇದರಿಂದ ಬಂದ ಮೊತ್ತ ₹1.33 ಲಕ್ಷ ಮಾತ್ರ. ಆದರೆ, ಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ಖರೀದಿಗೆ ಇದೇ ಅವಧಿಯಲ್ಲಿ ವಿನಿಯೋಗಿಸಿರುವ ಮೊತ್ತವನ್ನು ₹49.56 ಲಕ್ಷದಿಂದ ₹43.89 ಲಕ್ಷಕ್ಕೆ ತಗ್ಗಿಸಿದೆ.

ಬಿಜೆಪಿ ವೇತನಕ್ಕೆ ಮಾಡುತ್ತಿರುವ ವೆಚ್ಚವನ್ನು ₹47.96 ಕೋಟಿಯಿಂದ ₹46.54 ಕೋಟಿಗೆ ತಗ್ಗಿಸಿದೆ. ವಿದ್ಯುತ್ ಮತ್ತು ನೀರಿನ ಶುಲ್ಕ ಮಾತ್ರ ₹8 ಕೋಟಿಯಿಂದ ₹ 9.40 ಕೋಟಿಗೆ ಏರಿಕೆಯಾಗಿದೆ.

ಚುನಾವಣಾ ಫಲಿತಾಂಶ: ಇಮ್ರಾನ್ ಖಾನ್ ಬೆಂಬಲಿತ ಅಭ್ಯರ್ಥಿಗಳಿಗೆ ಮುನ್ನಡೆ

# ಪಾಕಿಸ್ತಾನ: ಅತಂತ್ರ ಜನಾದೇಶ?

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ರಾಷ್ಟ್ರೀಯ ಅಸೆಂಬ್ಲಿ ಚುನಾವಣೆಯ ಮತ ಎಣಿಕೆಯಲ್ಲಿ 224 ಸ್ಥಾನಗಳ ಫಲಿತಾಂಶ ಪ್ರಕಟವಾಗಿದ್ದು, ಯಾವುದೇ ಪಕ್ಷಗಳಿಗೆ ಸ್ಪಷ್ಟ ಬಹುಮತ ಸಿಗುವ ಸಾಧ್ಯತೆ ಇಲ್ಲ. ಹೀಗಾಗಿ ಅತಂತ್ರ ಸಂಸತ್ ಸೃಷ್ಟಿಯಾಗುವ ಸಂಭವ ಎದುರಾಗಿದೆ. ಮಾಜಿ ಪ್ರಧಾನಿ, ಸದ್ಯ ಸೆರೆವಾಸದಲ್ಲಿರುವ ಇಮ್ರಾನ್ ಖಾನ್ ಅವರ ಪಾಕಿಸ್ತಾನ್ ತೆಹ್ರೀಕ್-ಎ-ಇನ್ಸಾಫ್ (ಪಿಟಿಐ) ಬೆಂಬಲಿತ ಅಭ್ಯರ್ಥಿಗಳು ಮುನ್ನಡೆ ಸಾಧಿಸಿದ್ದಾರೆ.

ಚುನಾವಣಾ ಆಯೋಗ ಘೋಷಿಸಿರುವ ಫಲಿತಾಂಶದ ಪೈಕಿ 92 ಕ್ಷೇತ್ರಗಳಲ್ಲಿ ಪಿಟಿಐ ಬೆಂಬಲಿತ ಅಭ್ಯರ್ಥಿಗಳು ಗೆಲುವು ಕಂಡಿದ್ದಾರೆ. 63 ಕ್ಷೇತ್ರಗಳಲ್ಲಿ ಪಾಕಿಸ್ತಾನ್ ಮುಸ್ಲಿಂ ಲೀಗ್- ನವಾಜ್ (ಪಿಎಂಎಲ್-ಎನ್) ಮತ್ತು 50 ಕ್ಷೇತ್ರಗಳಲ್ಲಿ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ (ಪಿಪಿಪಿ) ಗೆದ್ದಿದೆ. 19 ಸ್ಥಾನಗಳಲ್ಲಿ ಇತರ ಪಕ್ಷಗಳು ಗೆದ್ದಿವೆ.

ಈ ನಡುವೆ ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರು, ದೇಶದಲ್ಲಿ ಒಕ್ಕೂಟ ಸರ್ಕಾರ ರಚನೆ ಮಾಡಲು ಗೆದ್ದಿರುವ ಸ್ವತಂತ್ರ ಅಭ್ಯರ್ಥಿಗಳು ಕೈಜೋಡಿಸಬೇಕು ಎಂದು ಆಹ್ವಾನಿಸಿದ್ದಾರೆ.

ಮತ ತಿರುಚುವ ಆರೋಪ, ಮೊಬೈಲ್ ಸಂಪರ್ಕ ಸ್ಥಗಿತ, ಕೆಲ ಅಹಿತಕರ ಘಟನೆಗಳ ನಡುವೆ ವಿಳಂಬ-ಗತಿಯಲ್ಲಿ ಮತ ಎಣಿಕೆ ನಡೆಯಿತು.

ಹಲವು ಪಕ್ಷಗಳು ಚುನಾವಣೆಯಲ್ಲಿ ಭಾಗಿಯಾಗಿದ್ದರೂ ಪಿಎಂಎಲ್-ಎನ್ ಮತ್ತು ಪಿಪಿಪಿ ಹಾಗೂ ಪಿಟಿಐ ನಡುವೆ ನೇರ ಹಣಾಹಣಿ ಏರ್ಪಟ್ಟಿತ್ತು.


ಖಾನ್ ನೇತೃತ್ವದ ಪಿಟಿಐ ಪಕ್ಷದ ಚಿಹ್ನೆಯಾದ 'ಕ್ರಿಕೆಟ್ ಬ್ಯಾಟ್' ಅನ್ನು ಹಿಂಪಡೆದ ಚುನಾವಣಾ ಆಯೋಗದ ನಿರ್ಧಾರವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು. ಹೀಗಾಗಿ ಪಿಟಿಐ ತನ್ನ ಅಭ್ಯರ್ಥಿಗಳನ್ನು ಪಕ್ಷೇತರರಾಗಿ ಕಣಕ್ಕೆ ಇಳಿಸಿತ್ತು.

**ನಾಟಕೀಯ ಬೆಳವಣಿಗೆ:** ಪಿಟಿಐ ಬೆಂಬಲಿತ ಅಭ್ಯರ್ಥಿಗಳು ಮುನ್ನಡೆ ಸಾಧಿಸುತ್ತಿದ್ದಂತೆಯೇ ಅಧಿಕಾರಿಗಳು ಫಲಿತಾಂಶ ಘೋಷಣೆಗೆ ವಿಳಂಬ ಮಾಡಿದರು. ಪಿಟಿಐ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳಿಂದ ತೀವ್ರ ಆಕ್ಷೇಪ ಮತ್ತು ಟೀಕೆ ವ್ಯಕ್ತವಾಗುತ್ತಿದ್ದಂತೆಯೇ ಆಯೋಗ ತನ್ನ ಕಾರ್ಯವನ್ನು ಚುರುಕುಗೊಳಿಸಿತು.

**ಸರ್ಕಾರ ರಚನೆಗೆ ಬೇಕು 133 ಸ್ಥಾನ:** ಪಾಕಿಸ್ತಾನ ಸಂಸತ್‌ನ ಒಟ್ಟು ಸಂಖ್ಯಾಬಲ 336. ಈ ಪೈಕಿ 60 ಸ್ಥಾನಗಳು ಮಹಿಳೆಯರಿಗೆ ಹಾಗೂ 10 ಸ್ಥಾನಗಳು ಮುಸ್ಲಿಮೇತರರಿಗೆ ಮೀಸಲಾಗಿವೆ. ಸರಳ ಬಹುಮತಕ್ಕೆ 169 ಸ್ಥಾನಗಳಲ್ಲಿ ಗೆಲ್ಲಬೇಕು.

ಈ ಪೈಕಿ ನ್ಯಾಷನಲ್ ಅಸೆಂಬ್ಲಿಯ ಸಂಖ್ಯಾ ಬಲ 266 ಇದ್ದು, ಸರ್ಕಾರ ರಚನೆಗೆ 133 ಸ್ಥಾನಗಳಲ್ಲಿ ಗೆಲುವು ಅಗತ್ಯ. ಆದರೆ, ಒಂದು ಕ್ಷೇತ್ರದ ಅಭ್ಯರ್ಥಿ ಕೊಲೆಯಾದ ಹಿನ್ನೆಲೆಯಲ್ಲಿ, 265 ಸ್ಥಾನಗಳಿಗೆ ಚುನಾವಣೆ ನಡೆದಿದೆ.

**ಫಲಿತಾಂಶ ತಿರುಚಲಾಗುತ್ತಿದೆ- ಪಿಟಿಐ ಆರೋಪ:** ಚುನಾವಣೆಯಲ್ಲಿ ಪಿಟಿಐ ಪಕ್ಷ ಜನಾದೇಶ ಪಡೆದಿದೆ. ಫಲಿತಾಂಶ ತಿರುಚುವುದಕ್ಕಾಗಿ ಮತ ಎಣಿಕೆಗೆ ವಿಳಂಬ ಧೋರಣೆ ತೋರಲಾಗುತ್ತಿದೆ ಎಂದು ಪಿಟಿಐ ಆರೋಪಿಸಿದೆ.



ಪಾಕಿಸ್ತಾನದ ನ್ಯಾಷನಲ್ ಅಸೆಂಬ್ಲಿಗೆ ನಡೆದ ಚುನಾವಣೆಯ ಫಲಿತಾಂಶ ಪ್ರಕಟಗೊಂಡ ಬೆನ್ನಲ್ಲೇ ಪಿಎಂಎಲ್(ನವಾಜ್) ಪಕ್ಷದ ವರಿಷ್ಠ, ಮಾಜಿ ಪ್ರಧಾನಿ ನವಾಜ್ ಷರೀಫ್ ಅವರು ಲಾಹೋರ್‌ನಲ್ಲಿ ಶುಕ್ರವಾರ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದರು – ಪಿಟಿಐ ಚಿತ್ರ

## ಷರೀಫ್ ಕುಟುಂಬಸ್ಥರಿಗೆ ಗೆಲುವು

ಲಾಹೋರ್ (ಪಿಟಿಐ): ಪಿಎಂಎಲ್-ಎನ್ ಪಕ್ಷದಿಂದ ಸ್ಪರ್ಧಿಸಿದ್ದ ಷರೀಫ್ ಕುಟುಂಬದ ನಾಲ್ವರು ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ್ದಾರೆ.

ಪಕ್ಷದ ಸರ್ವೋಚ್ಚ ನಾಯಕ, ಮಾಜಿ ಪ್ರಧಾನಿ ನವಾಜ್ ಷರೀಫ್, ಪುತ್ರಿ ಮರಿಯಂ ನವಾಜ್, ಸೋದರ ಸಂಬಂಧಿ ಹಮ್ಜಾ ಶಹಬಾಜ್ ಮತ್ತು ನವಾಜ್ ಅವರ ಕಿರಿಯ ಸಹೋದರ, ಮಾಜಿ ಪ್ರಧಾನಿ ಶಹಬಾಜ್ ಷರೀಫ್ ಅವರು ತಮ್ಮ ಕುಟುಂಬದ 'ಭದ್ರಕೋಟೆ' ಲಾಹೋರ್ ಕ್ಷೇತ್ರಗಳಿಂದ ವಿಜಯ ಸಾಧಿಸಿದ್ದಾರೆ.

**ಪ್ರಮುಖರ ಸೋಲು:** ಪಿಪಿಪಿ ಮುಖ್ಯಸ್ಥ ಬಿಲಾವಲ್ ಭುಟ್ಟೊ ಜರ್ದಾರಿ ಹಾಗೂ ಮಾಜಿ ರಕ್ಷಣಾ ಸಚಿವ ಪರ್ವೇಜ್ ಖಟ್ಟಕ್ ಅವರು ಪರಾಭವಗೊಂಡಿದ್ದಾರೆ.

## ಮೈತ್ರಿ: ವಿಪಕ್ಷಗಳಿಗೆ ನವಾಜ್ ಷರೀಫ್ ಮನವಿ, ಪಿಟಿಐ ತಿರಸ್ಕಾರ

ಲಾಹೋರ್/ಇಸ್ಲಾಮಾಬಾದ್(ಪಿಟಿಐ): 'ದೇಶದಲ್ಲಿ ಸ್ಥಿರ ಸರ್ಕಾರ ರಚನೆಗಾಗಿ ಮೈತ್ರಿ ಸರ್ಕಾರ ರಚಿಸಬೇಕು. ಆರ್ಥಿಕ ಸಂಕಷ್ಟದಿಂದ ದೇಶವನ್ನು ಪಾರು ಮಾಡಲು ಇದು ಅಗತ್ಯ. ಹೀಗಾಗಿ, ಸರ್ಕಾರ ರಚನೆಗಾಗಿ ವಿರೋಧ ಪಕ್ಷಗಳು ಕೈಜೋಡಿಸಬೇಕು' ಎಂದು ಪಾಕಿಸ್ತಾನ್ ಮುಸ್ಲಿಂ ಲೀಗ್ (ನವಾಜ್) ಪಕ್ಷದ ವರಿಷ್ಠ ಹಾಗೂ ಮಾಜಿ ಪ್ರಧಾನಿ ನವಾಜ್ ಷರೀಫ್ ಶುಕ್ರವಾರ ಮನವಿ ಮಾಡಿದ್ದಾರೆ.

ಪಕ್ಷದ ಕೇಂದ್ರ ಕಚೇರಿಯಲ್ಲಿ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಜೈಲು ಸೇರಿರುವ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಪಕ್ಷ ಬೆಂಬಲಿತ ಪಕ್ಷೇತರರು ಸೇರಿದಂತೆ ಎಲ್ಲ ಪಕ್ಷಗಳಿಗೆ ದೊರೆತಿರುವ ಜನಾದೇಶವನ್ನು ನನ್ನ ಪಕ್ಷ ಗೌರವಿಸುತ್ತದೆ' ಎಂದರು.

ಆದರೆ, ಪಿಟಿಐ ಪಕ್ಷವು ನವಾಜ್ ಷರೀಫ್ ಅವರ ಪ್ರಸ್ತಾವವನ್ನು ತಿರಸ್ಕರಿಸಿದೆ.

ಇಸ್ಲಾಮಾಬಾದ್‌ನಲ್ಲಿ ಮಾತನಾಡಿದ ಪಿಟಿಐ ಅಧ್ಯಕ್ಷ ಗೋಹರ್ ಖಾನ್, 'ನಾವು ಪಿಪಿಪಿ ಅಥವಾ ಪಿಎಂಎಲ್-ಎನ್ ಜೊತೆ ಸಂಪರ್ಕದಲ್ಲಿ ಇಲ್ಲ ಎಂಬುದಾಗಿ ಹೇಳಿದ್ದಾರೆ' ಎಂದು 'ಜಿಯೊ ನ್ಯೂಸ್' ವರದಿ ಮಾಡಿದೆ.

'ನ್ಯಾಷನಲ್ ಅಸೆಂಬ್ಲಿಯ 150 ಸ್ಥಾನಗಳಲ್ಲಿ ಪಕ್ಷ ಗೆಲುವು ಸಾಧಿಸಲಿದ್ದು, ಸರ್ಕಾರ ರಚನೆಗೆ ಅಗತ್ಯವಿರುವ ಬಹುಮತ ಪಡೆಯುವುದಾಗಿ ತಿಳಿಸಿದ್ದಾರೆ' ಎಂದು ವರದಿ ಮಾಡಿದೆ.

# 'ಅಮೆರಿಕ ಅಧ್ಯಕ್ಷರಾಗಿ ಮಹಿಳೆ'

## ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಆಕಾಂಕ್ಷಿ ನಿಕ್ಕಿ ಹ್ಯಾಲೆ ವಿಶ್ವಾಸ



ನಿಕ್ಕಿ ಹ್ಯಾಲೆ

ವಾಷಿಂಗ್ಟನ್ (ಪಿಟಿಐ): 'ಅಮೆರಿಕವು 2024ರಲ್ಲಿ ಮಹಿಳಾ ಅಧ್ಯಕ್ಷರನ್ನು ಹೊಂದಲಿದೆ. ಅದು ನಾನಾಗಿರಬಹುದು ಅಥವಾ ಕಮಲಾ ಹ್ಯಾರಿಸ್ ಆಗಿರಬಹುದು. ನಾವಿಬ್ಬರೂ ಭಾರತ ಮೂಲದವರು' ಎಂದು ರಿಪಬ್ಲಿಕನ್ ಪಕ್ಷದ ನಾಯಕಿ ನಿಕ್ಕಿ ಹ್ಯಾಲೆ ಹೇಳಿದ್ದಾರೆ.

ಅಮೆರಿಕದ ಅಧ್ಯಕ್ಷೀಯ ಅಭ್ಯರ್ಥಿ ಆಯ್ಕೆಗೆ ನಡೆಯುವ ಚುನಾವಣೆಯಲ್ಲಿ ತನ್ನದೇ ಪಕ್ಷದ ನಾಯಕ ಡೊನಾಲ್ಡ್ ಟ್ರಂಪ್ ವಿರುದ್ಧ ಸ್ಪರ್ಧೆಯಲ್ಲಿ ಉಳಿದಿರುವ ಏಕೈಕ ಅಭ್ಯರ್ಥಿಯಾಗಿದ್ದಾರೆ.

ಅಧ್ಯಕ್ಷೀಯ ಅಭ್ಯರ್ಥಿ ಆಯ್ಕೆ ಸಂಬಂಧ, ನೆವಡಾ ಮತ್ತು ಯುಎಸ್ ವರ್ಜಿನ್ ದ್ವೀಪಗಳಲ್ಲಿ ಗುರುವಾರ ನಡೆದ ಪಕ್ಷದ ಚುನಾವಣೆಗಳಲ್ಲಿ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗೆಲುವು ಸಾಧಿಸಿದ ನಂತರವೂ, 'ಶ್ವೇತಭವನ ಪ್ರವೇಶಿಸುವ ಸ್ಪರ್ಧೆಯಲ್ಲಿ ನಾನು ಉಳಿಯುವೆ' ಎಂಬ ವಿಶ್ವಾಸವನ್ನು ಹ್ಯಾಲೆ ವ್ಯಕ್ತಪಡಿಸಿದ್ದಾರೆ.

'ಸಾರ್ವತ್ರಿಕ ಚುನಾವಣೆಯಲ್ಲಿ ಟ್ರಂಪ್ ಗೆಲ್ಲಲು ಸಾಧ್ಯವಿಲ್ಲ. ಅದು ಸತ್ಯ. 2018, 2020, 2022ರಲ್ಲೂ ನಾವು ಸೋತಿದ್ದೇವೆ. ಆದರೆ ಅವರಿನ್ನೂ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಅವರು ಮುಟ್ಟಿದ್ದೆಲ್ಲವೂ ಅವ್ಯವಸ್ಥೆ. ಅವರೇ ಮತ್ತೆ ಮುಂದುವರಿದರೆ ನಾವು ಎಲ್ಲವನ್ನೂ ಕಳೆದುಕೊಳ್ಳುತ್ತೇವೆ' ಎಂದು ನಿಕ್ಕಿ ಹ್ಯಾಲೆ ಫಾಕ್ಸ್ ನ್ಯೂಸ್‌ಗೆ ಹೇಳಿದ್ದಾರೆ.

## ನೆವಡಾದಲ್ಲಿ ಟ್ರಂಪ್ ಗೆಲುವು



ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಪಿ): ಅಮೆರಿಕದ ಅಧ್ಯಕ್ಷೀಯ ಅಭ್ಯರ್ಥಿಯ ಆಯ್ಕೆಗಾಗಿ ನೆವಡಾ ರಾಜ್ಯದಲ್ಲಿ ಗುರುವಾರ ನಡೆದ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಪ್ರಮುಖ ಅಭ್ಯರ್ಥಿ, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗೆಲುವು ಸಾಧಿಸಿದರು.

ಇಲ್ಲಿನ ಚುನಾವಣೆಯಿಂದ ದೂರ ಉಳಿದಿದ್ದ ವಿಶ್ವಸಂಸ್ಥೆಯ ಮಾಜಿ ರಾಯಭಾರಿ ಹಾಗೂ ಭಾರತೀಯ ಮೂಲದ ರಾಜಕಾರಣಿ ನಿಕ್ಕಿ ಹ್ಯಾಲೆ, 'ಚುನಾವಣೆಯು ನ್ಯಾಯಯುತವಾಗಿ ನಡೆದಿಲ್ಲ. ಇದು, ಟ್ರಂಪ್‌ಗೆ ಅನುಕೂಲಕರವಾಗುವಂತೆ ಇತ್ತು' ಎಂದು ದೂರಿದ್ದರು.

ನೆವಡಾದಲ್ಲಿ ಗೆದ್ದ ಟ್ರಂಪ್, ರಾಜ್ಯದ ಎಲ್ಲ 26 ಪ್ರತಿನಿಧಿಗಳ ಬೆಂಬಲ ಪಡೆಯಲಿದ್ದಾರೆ. ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ನಾಮನಿರ್ದೇಶನಗೊಳ್ಳುವುದಕ್ಕೆ ಅವರು 1,215 ಪ್ರತಿನಿಧಿಗಳ ಬೆಂಬಲ ಪಡೆಯಬೇಕಿದೆ. ಮಾರ್ಚ್ ವೇಳೆಗೆ ಟ್ರಂಪ್ ಅವರು ಈ ಸಂಖ್ಯೆಯಷ್ಟು ಪ್ರತಿನಿಧಿಗಳ ಬೆಂಬಲ ಗಿಟ್ಟಿಸಬಹುದು ಎಂದು ಮೂಲಗಳು ಹೇಳಿವೆ.

# ಪತ್ರಕರ್ತ ವಾಗ್ಳೆ ಕಾರಿನ ಮೇಲೆ ದಾಳಿ



ಪುಣೆ (ಪಿಟಿಐ): ಪತ್ರಕರ್ತ ನಿಖಿಲ್ ವಾಗ್ಳೆ ಅವರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ತೆರಳುತ್ತಿದ್ದಾಗ ಪುಣೆಯಲ್ಲಿ ಬಿಜೆಪಿ ಕಾರ್ಯಕರ್ತರು ಅವರ ಕಾರಿನ ಮೇಲೆ ಶುಕ್ರವಾರ ದಾಳಿ ನಡೆಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಜೆಪಿ ನಾಯಕ ಎಲ್.ಕೆ. ಅಡ್ವಾಣಿ ಅವರಿಗೆ ಭಾರತ ರತ್ನ ಪ್ರಶಸ್ತಿ ಘೋಷಿಸಿದ ನಂತರ ನಿಖಿಲ್ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಅಡ್ವಾಣಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರ ಗುಂಪು, ಖಂಡೋಜಿ ಬಾಬಾ ಚೌಕ್‌ನಲ್ಲಿ ನಿಖಿಲ್ ಅವರ ಕಾರನ್ನು ಅಡ್ಡಗಟ್ಟಿ ದಾಳಿ ಮಾಡಿದೆ. ಇದರಿಂದ ಕಾರಿನ ವಿಂಡ್ ಸ್ಕ್ರೀನ್ ಮತ್ತು ಕಿಟಕಿ ಗಾಜು ಹಾನಿಗೀಡಾಗಿವೆ.

ಇಲ್ಲಿನ ಸಿಂಘಾಡ್ ರಸ್ತೆ ಪ್ರದೇಶದಲ್ಲಿ ರಾಷ್ಟ್ರ ಸೇವಾದಳ ಆಯೋಜಿಸಿದ್ದ 'ನಿರ್ಭಯ್ ಬಾನೊ' ಕಾರ್ಯಕ್ರಮಕ್ಕೆ ಪೊಲೀಸ್ ರಕ್ಷಣೆಯಲ್ಲಿ ವಾಗ್ಳೆ ಅವರು ಅಸೀಮ್ ಸರೋದೆ ಮತ್ತು ವಿಶ್ವಂಭರ ಚೌಧರಿ ಅವರ ಜತೆಗೆ ಕಾರಿನಲ್ಲಿ ತೆರಳುತ್ತಿದ್ದಾಗ ಬಿಜೆಪಿ ಕಾರ್ಯಕರ್ತರು ಕಾರಿನ ಮೇಲೆ ಪೆನ್ನಿನ ಶಾಯಿ ಎರಚಿದ್ದಾರೆ ಎಂದು ಡೆಕ್ಕನ್ ಠಾಣೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೊಲೀಸ್ ರಕ್ಷಣೆಯಲ್ಲಿ ನಿಖಿಲ್ ಅವರನ್ನು ಕಾರ್ಯಕ್ರಮದ ಸ್ಥಳಕ್ಕೆ ತಲುಪಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

**ವಾಗ್ಳೆ ವಿರುದ್ಧ ದೂರು:** ಬಿಜೆಪಿಯ ಹಿರಿಯ ನಾಯಕ ಎಲ್.ಕೆ ಅಡ್ವಾಣಿ ಅವರಿಗೆ ಭಾರತರತ್ನ ಘೋಷಣೆ ಮಾಡಿದ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಮತ್ತು ಅಡ್ವಾಣಿ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಆರೋಪದಡಿ ಪತ್ರಕರ್ತ ನಿಖಿಲ್ ವಾಗ್ಳೆ ವಿರುದ್ಧ ದೂರು ದಾಖಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

'ಪುಣೆಯ ಸ್ಥಳೀಯ ಬಿಜೆಪಿ ನಾಯಕ ಸುನಿಲ್ ದೇವಧರ್ ನೀಡಿದ ದೂರಿನ ಮೇರೆಗೆ ನಿಖಿಲ್ ವಾಗ್ಳೆ ವಿರುದ್ಧ ವಿಶ್ರಮ್‌ಭಾಗ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಈ ಬಗ್ಗೆ ತನಿಖೆ ನಡೆಯುತ್ತಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

# ಶಿವಸೇನಾ ಮುಖಂಡನ ಹತ್ಯೆ

ಮುಂಬೈ (ಪಿಟಿಐ): ಶಿವಸೇನಾದ (ಉದ್ಧವ್ ಬಣದ) ಮುಖಂಡ ಅಭಿಷೇಕ್ ಘೋಸಾಲಕರ್ ಅವರು ಗುರುವಾರ ಸಂಜೆ ಫೇಸ್‌ಬುಕ್ ಲೈವ್ ನಡೆಸುತ್ತಿದ್ದಾಗಲೇ ಗುಂಡು ಹಾರಿಸಿ ಹತ್ಯೆ ಮಾಡಿದ್ದ ಆರೋಪಿ, ಸಾಮಾಜಿಕ ಕಾರ್ಯಕರ್ತ ಮಾರಿಸ್ ನೊರೊನ್ಹಾ ಸಹ ಅದೇ ಕಚೇರಿಯಲ್ಲೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣ ಸಂಬಂಧ ನೊರೊನ್ಹಾ ಅವರ ಅಂಗರಕ್ಷಕ ಅಮರೇಂದ್ರ ಮಿಶ್ರಾನನ್ನು ಬಂಧಿಸಿರುವ ಮುಂಬೈ ಪೊಲೀಸ್ ಅಪರಾಧ ವಿಭಾಗವು, ಆತನನ್ನು ವಿಚಾರಣೆಗೊಳಪಡಿಸಿದೆ ಎಂದು ಪೊಲೀಸರು ಶುಕ್ರವಾರ ಹೇಳಿದ್ದಾರೆ.

ಪಾಲಿಕೆಯ ಮಾಜಿ ಕಾರ್ಪೊರೇಟರ್ ಆಗಿದ್ದ ಅಭಿಷೇಕ್, ಮಾಜಿ ಶಾಸಕ ವಿನೋದ್ ಘೋಸಾಲಕರ್ ಅವರ ಪುತ್ರ.

ನೊರೊನ್ಹಾ ಪತ್ನಿ ಹಾಗೂ ಕುಟುಂಬದವರಿಂದ ಪೊಲೀಸರು ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಅತ್ಯಾಚಾರ ಪ್ರಕರಣದಲ್ಲಿ ಬಂಧನವಾಗಿದ್ದ ನೊರೊನ್ಹಾ, ಐದು ತಿಂಗಳ ಹಿಂದಷ್ಟೇ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದ. ಈತನ ವಿರುದ್ಧ ಹಲವು ಪ್ರಕರಣಗಳಿವೆ.

**ತನಿಖೆಗೆ 2 ತಂಡ:** ಪ್ರಕರಣದ ತನಿಖೆ ನಡೆಸಲು ಮುಂಬೈ ಪೊಲೀಸ್‌ನ ಅಪರಾಧ ವಿಭಾಗವು ಎರಡು ತಂಡಗಳನ್ನು ರಚಿಸಿದೆ. ಒಂದು ತಂಡ ಘೋಸಾಲಕರ್ ಹತ್ಯೆ ಕುರಿತು ತನಿಖೆ ನಡೆಸಿದರೆ, ಇನ್ನೊಂದು ತಂಡ ನೊರೊನ್ಹಾ ಆತ್ಮಹತ್ಯೆಯ ಬಗ್ಗೆ ತನಿಖೆ ನಡೆಸಲಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ಹೇಳಿದ್ದಾರೆ.

# ಎನ್‌ಡಿಎ ಸೇರಲು ಆರ್‌ಎಲ್‌ಡಿ ಸಜ್ಜು

ಲಖನೌ: ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ ತೊರೆಯಲು ಮುಂದಾಗಿರುವ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಮುಖ್ಯಸ್ಥ ಜಯಂತ ಚೌಧರಿ ಅವರು ಬಿಜೆಪಿ ನೇತೃತ್ವದ ಎನ್‌ಡಿಎ ಕೂಟ ಸೇರಲು ಬಹುತೇಕ ನಿರ್ಧರಿಸಿದ್ದಾರೆ.

ಜಯಂತ ಚೌಧರಿ ಅವರ ತಾತ ಹಾಗೂ ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್ ಅವರಿಗೆ 'ಭಾರತ ರತ್ನ' ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಬಿಜೆಪಿ ಜೊತೆ ಕೈ ಜೋಡಿಸುವಿರಾ ಎಂಬ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಇಲ್ಲ ಎಂದು ಹೇಳಲಿಲ್ಲ. ಅಲ್ಲದೆ, 'ಈ ವಿಚಾರದಲ್ಲಿ ಇನ್ನೂ ಅನುಮಾನವಿದೆಯೇ? ನಿಮ್ಮ ಪ್ರಶ್ನೆಗೆ ಹೇಗೆ ಇಲ್ಲ ಎಂದು ಹೇಳಲಿ' ಎಂದು ಮರು ಪ್ರಶ್ನೆ ಮಾಡಿದ್ದಾರೆ.

ಜೊತೆಗೆ, ಚರಣ್ ಸಿಂಗ್ ಅವರಿಗೆ ಭಾರತ ರತ್ನ ಘೋಷಿಸಿರುವ ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಮೆಚ್ಚುಗೆಯ ಸುರಿಮಳೆಗೆರೆದಿರುವ ಅವರು, ಈ ಹಿಂದಿನ ಸರ್ಕಾರ ಮಾಡಲಾಗದ್ದನ್ನು ಮೋದಿ ಮಾಡಿದ್ದಾರೆ ಎಂದು 'ಎಕ್ಸ್' ವೇದಿಕೆಯಲ್ಲಿ ಕೊಂಡಾಡಿದ್ದಾರೆ.

ರಾಜ್ಯದ ಸಂಪುಟದಲ್ಲಿ ಸಚಿವ ಸ್ಥಾನಗಳನ್ನು ನೀಡಬೇಕು ಎಂಬ ಬೇಡಿಕೆ ಮತ್ತು ಸೀಟು ಹಂಚಿಕೆ ಕುರಿತ ಮಾತುಕತೆ ಮುಗಿದ ಬಳಿಕ ಜಯಂತ ಚೌಧರಿ ಅವರು, ಎನ್‌ಡಿಎ ಸೇರುವ ನಿರ್ಧಾರವನ್ನು ಘೋಷಣೆ ಮಾಡಲಿದ್ದಾರೆ ಎಂದು ಆರ್‌ಎಲ್‌ಡಿ ಪಕ್ಷದ ಮೂಲಗಳು ತಿಳಿಸಿವೆ.

# '97 ಕೋಟಿಗೆ ತಲುಪಿದ ಭಾರತದ ಮತದಾರರ ಸಂಖ್ಯೆ'

ನವದೆಹಲಿ (ಪಿಟಿಐ): 'ಲೋಕಸಭಾ ಚುನಾವಣೆಯಲ್ಲಿ ಸುಮಾರು 97 ಕೋಟಿ ಭಾರತೀಯರು ಮತ ಚಲಾಯಿಸಲು ಅರ್ಹರಾಗಿದ್ದಾರೆ' ಎಂದು ಚುನಾವಣಾ ಆಯೋಗ ಶುಕ್ರವಾರ ಹೇಳಿದೆ.

'18ರಿಂದ 29 ವರ್ಷ ವಯೋಮಾನದ 2 ಕೋಟಿಗೂ ಹೆಚ್ಚು ಯುವ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸಲಾಗಿದೆ. 2019ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಈ ಬಾರಿಯ ನೋಂದಾಯಿತ ಮತದಾರರ ಪ್ರಮಾಣ ಶೇ 6ರಷ್ಟು ಏರಿಕೆಯಾಗಿದೆ. ಸಾರ್ವತ್ರಿಕ ಚುನಾವಣೆಯಲ್ಲಿ ಮತ ಚಲಾಯಿಸಲು 96.88 ಕೋಟಿ ಮತದಾದರರು ನೋಂದಾಯಿಸಿಕೊಂಡಿದ್ದಾರೆ' ಎಂದು ಹೇಳಿದೆ.


'ಈ ವರ್ಷದ ಮತದಾರರ ಪಟ್ಟಿಯ ಲಿಂಗಾನುಪಾತವು 948ಕ್ಕೆ ಏರಿಕೆ ಆಗಿದೆ. 2023ರಲ್ಲಿ ಈ ಅನುಪಾತ 940 ಇತ್ತು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

**ಅಡಿಕೆ**

| | |
|---|---|
| **ಬಂಟ್ವಾಳ** | |
| ಕೋಕ | 18000-28500 |
| ಹೊಸತು | 28500-35000 |
| ಹಳತು | 42000-44000 |
| **ಕುಮಟ** | |
| ಚಿಪ್ಪು | 25699-32509 |
| ಕೋಕ | 16089-28099 |
| ಫ್ಯಾಕ್ಟರಿ | 11509-19429 |
| ಹಳೆಚಾಲಿ | 35899-37199 |
| ಹೊಸಚಾಲಿ | 32699-34509 |
| **ಪುತ್ತೂರು** | |
| ಹೊಸತು | 26500-35000 |
| **ಕಾರ್ಕಳ** | |
| ಹೊಸತು | 25000-35000 |
| ಹಳತು | 30000-44500 |
| **ಶಿವಮೊಗ್ಗ** | |
| ಬೆಟ್ಟೆ | 39555-54419 |
| ಗೊರಬಲು | 16099-34118 |
| ರಾಶಿ | 32010-48098 |
| ಸರಕು | 45155-80986 |
| **ಸಿದ್ದಾಪುರ** | |
| ಬಿಳಿಗೋಟು | 29319-31319 |
| ಚಾಲಿ | 35349-37299 |
| ಕೋಕ | 26599-29269 |
| ಹೊಸಚಾಲಿ | 31699-36209 |
| ಕೆಂಪುಗೋಟು | 32889-35899 |
| ರಾಶಿ | 43809-47309 |
| ತಟ್ಟಿಬೆಟ್ಟೆ | 39099-46799 |
| **ಶಿರಸಿ** | |
| ಬೆಟ್ಟೆ | 38499-44909 |
| ಬಿಳಿಗೋಟು | 25165-32933 |
| ಚಾಲಿ | 35736-39212 |
| ಕೆಂಪುಗೋಟು | 31099-36099 |
| ರಾಶಿ | 43599-47609 |
| **ಯಲ್ಲಾಪುರ** | |
| ಅಪಿ | 56399-65399 |
| ಬಿಳಿಗೋಟು | 22899-33491 |
| ಚಾಲಿ | 33501-38969 |
| ಕೋಕ | 16501-28899 |
| ಕೆಂಪುಗೋಟು | 27189-37499 |
| ರಾಶಿ | 46099-53689 |
| ತಟ್ಟಿಬೆಟ್ಟೆ | 37020-45730 |

### ಷೇರುಪೇಟೆ ವಹಿವಾಟು




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 21,717 |
| ಇಂದಿನ ಅಂತ್ಯ | 21,782 |
| ▲ | 64 |
| ದಿನದ ಗರಿಷ್ಠ | 21,804 |

### ವಿನಿಮಯ ದರ

| | |
|---|---|
| $ ಡಾಲರ್ | 83.07 |
| £ ಪೌಂಡ್ | 104.68 |
| € ಯುರೊ | 89.40 |
| ¥ ಯೆನ್ (100ಕ್ಕೆ) | 56 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| **ಬೆಂಗಳೂರು** | |
| 100ಕ್ಕೆ | ₹585 |
| 12 ಕ್ಕೆ | ₹78 |
| **ಮೈಸೂರು** | |
| 100ಕ್ಕೆ | ₹587 |

### ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

| | |
|---|---|
| ಶೇಂಗಾ (ರಿಫೈನ್ಡ್) | ₹1470 (1480) |
| ಸೋಯಾ (ರಿಫೈನ್ಡ್) | ₹895 (897) |
| ಸೂರ್ಯಕಾಂತಿ (ರಿಫೈನ್ಡ್) | ₹915 (910) |
| ಪಾಮೋಲಿನ್ | ₹860 (858) |

### ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹156-445

ದ್ವಿತಳಿ (ಬಿ.ವಿ) ₹285-556

## ಸಕ್ಕರೆ ಕಾರ್ಖಾನೆಗಳಿಗೆ ₹15,948 ಕೋಟಿ ನೆರವು: ಕೇಂದ್ರ

ನವದೆಹಲಿ (ಪಿಟಿಐ): ರೈತರ ಕಬ್ಬಿನ ಬಾಕಿ ಹಣ ಪಾವತಿಗೆ ಅನುಕೂಲವಾಗುವಂತೆ ದೇಶದ ಸಕ್ಕರೆ ಕಾರ್ಖಾನೆಗಳಿಗೆ ಕಳೆದ ಐದು ವರ್ಷಗಳಲ್ಲಿ ವಿವಿಧ ಯೋಜನೆಯಡಿ ₹15,948 ಕೋಟಿಯನ್ನು ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಖಾತೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಅವರು, ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಈ ಮಾಹಿತಿ ನೀಡಿದ್ದಾರೆ. 'ಸಕಾಲದಲ್ಲಿ ರೈತರಿಗೆ ಬಾಕಿ ಮೊತ್ತ ಪಾವತಿಸಲು ನೆರವಾಗುವಂತೆ ಕಾರ್ಖಾನೆಗಳು ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಈ ನೆರವು ಕಲ್ಪಿಸಲಾಗಿದೆ'.

ಸಕ್ಕರೆ ದಾಸ್ತಾನು, ಕಾರ್ಖಾನೆಗಳ ಮಾರುಕಟ್ಟೆ ವಿಸ್ತರಣೆ, ಸಂಸ್ಕರಣಾ ಶುಲ್ಕ, ಆಂತರಿಕ ಸಾರಿಗೆ, ಸರಕು ಸಾಗಣೆ ಸೇರಿದಂತೆ ರಫ್ತು ವೆಚ್ಚದ ನಿರ್ವಹಣೆಗಾಗಿ ಈ ನೆರವು ನೀಡಲಾಗಿದೆ ಎಂದು ತಿಳಿಸಿದ್ದಾರೆ.

## 7.33 ಕೋಟಿ ಬಾಟಲಿ ದ್ರವರೂಪದ ನ್ಯಾನೊ ಯೂರಿಯಾ ಮಾರಾಟ

ನವದೆಹಲಿ (ಪಿಟಿಐ): ದೇಶೀಯ ಮಾರುಕಟ್ಟೆಯಲ್ಲಿ 2021ರ ಆಗಸ್ಟ್‌ನಿಂದ ಪ್ರಸಕ್ತ ವರ್ಷದ ಜನವರಿ ಅಂತ್ಯದವರೆಗೆ ಸುಮಾರು 7.33 ಕೋಟಿ ಬಾಟಲಿ (ಪ್ರತಿ 500 ಎಂ.ಎಲ್) ದ್ರವರೂಪದ ನ್ಯಾನೊ ಯೂರಿಯಾ ಮಾರಾಟವಾಗಿದೆ. ಈ ಪೈಕಿ 4.84 ಲಕ್ಷ ಬಾಟಲಿಗಳನ್ನು ರಫ್ತು ಮಾಡಲಾಗಿದೆ ಎಂದು ಕೇಂದ್ರ ಸರ್ಕಾರವು, ಶುಕ್ರವಾರ ಲೋಕಸಭೆಗೆ ತಿಳಿಸಿದೆ.

'ರಸಗೊಬ್ಬರ ನಿಯಂತ್ರಣ ಆದೇಶದ (ಎಫ್‌ಸಿಒ) ಅನ್ವಯ 2021ರ ಫೆಬ್ರುವರಿ 24ರಿಂದ ದೇಶದಲ್ಲಿ ಈ ಮಾದರಿಯ ಯೂರಿಯಾ ತಯಾರಿಕೆಗೆ ಕೃಷಿ ಸಚಿವಾಲಯವು, ಇಫ್ಕೊಗೆ ಅನುಮತಿ ನೀಡಿದೆ' ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ರಾಜ್ಯ ಸಚಿವ ಭಗವಂತ ಖೂಬಾ ಅವರು, ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಅಲ್ಲದೇ, 2023ರ ಮಾರ್ಚ್ 6ರಂದು ರಾಯ್ ನ್ಯಾನೊ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರಕ್ಕೂ ಮೂರು ವರ್ಷಗಳವರೆಗೆ ಈ ಯೂರಿಯಾ ತಯಾರಿಕೆಗೆ ಸಚಿವಾಲಯವು ಅನುಮತಿ ನೀಡಿದೆ ಎಂದು ಹೇಳಿದ್ದಾರೆ.

ಸರ್ಕಾರವು ನ್ಯಾನೊ ಯೂರಿಯಾ ತಯಾರಿಕಾ ಘಟಕಗಳ ಸ್ಥಾಪನೆಯಲ್ಲಿ ನೇರವಾಗಿ ಪಾಲ್ಗೊಳ್ಳುವುದಿಲ್ಲ. ಆದರೆ, ದೇಶದಲ್ಲಿ ಹೊಸದಾಗಿ ಆರು ತಯಾರಿಕಾ ಘಟಕಗಳ ಸ್ಥಾಪನೆಗೆ ರಸಗೊಬ್ಬರ ಕಂಪನಿಗಳು ನಿರ್ಧರಿಸಿವೆ ಎಂದು ಮಾಹಿತಿ ನೀಡಿದ್ದಾರೆ.

## ವಿಮಾನ ದರ ನಿಯಂತ್ರಣ: ಪ್ರತ್ಯೇಕ ಘಟಕ ಸ್ಥಾಪಿಸಲು ಶಿಫಾರಸು

ನವದೆಹಲಿ (ಪಿಟಿಐ): ನಿರ್ದಿಷ್ಟ ಮಾರ್ಗಕ್ಕೆ ಅನುಗುಣವಾಗಿ ವಿಮಾನ ಪ್ರಯಾಣ ದರವನ್ನು ನಿಗದಿಪಡಿಸುವ ಜೊತೆಗೆ ಎಗ್ಗಿಲ್ಲದೆ ಏರಿಸುವ ಟಿಕೆಟ್ ದರಕ್ಕೆ ಕಡಿವಾಣ ಹಾಕಲು ಪ್ರತ್ಯೇಕ ಘಟಕ ರಚಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ, ಸಂಸದೀಯ ಸಮಿತಿ ಶಿಫಾರಸು ಮಾಡಿದೆ.

ಹಬ್ಬದ ಋತು ಹಾಗೂ ರಜಾ ದಿನಗಳಲ್ಲಿ ವಿಮಾನದ ಟಿಕೆಟ್ ದರ ದುಪ್ಪಟ್ಟಾಗುತ್ತದೆ. ಇದರಿಂದ ಪ್ರಯಾಣಿಕರು ತೀವ್ರ ಸಂಕಷ್ಟ ಅನುಭವಿಸುತ್ತಾರೆ. ಹಾಗಾಗಿ, ವಿಮಾನಯಾನ ಕಂಪನಿಗಳು ಮತ್ತು ಗ್ರಾಹಕರ ಹಿತದೃಷ್ಟಿಯಿಂದ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಿದೆ ಎಂದು ನಾಗರಿಕ ವಿಮಾನ ಸಚಿವಾಲಯದ ವಿಷಯಗಳಿಗೆ ಸಂಬಂಧಿಸಿದಂತೆ ರಚಿಸಿರುವ ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಂಸದೀಯ ಸಮಿತಿಯು ಈ ಶಿಫಾರಸು ಮಾಡಿದೆ.

ಪ್ರಸ್ತುತ ಟಿಕೆಟ್ ದರಕ್ಕೆ ಸಂಬಂಧಿಸಿದಂತೆ ಕಂಪನಿಗಳು ಅಳವಡಿಸಿಕೊಂಡಿರುವ ಸ್ವಯಂ ನಿಯಂತ್ರಣ ವ್ಯವಸ್ಥೆಯು ಪರಿಣಾಮಕಾರಿಯಾಗಿಲ್ಲ. ದರ ನಿಯಂತ್ರಣಕ್ಕಾಗಿ ರಚಿಸುವ ಘಟಕಕ್ಕೆ ಅರೆ ನ್ಯಾಯಿಕ ಅಧಿಕಾರ ನೀಡಬೇಕು ಎಂದು ಹೇಳಿದೆ.

'ಕೆಲವು ಸಂದರ್ಭಗಳಲ್ಲಿ ದರವನ್ನು ವಿಪರೀತವಾಗಿ ಏರಿಸಲಾಗುತ್ತದೆ. ಇಂತಹ ಸಂದರ್ಭದಲ್ಲಿ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದ (ಡಿಜಿಸಿಎ) ಮೂಲಕವೂ ದರ ನಿಯಂತ್ರಣ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕಿದೆ ಎಂದು ಹೇಳಿದೆ.

ಸದ್ಯ ವಿಮಾನದ ಟಿಕೆಟ್ ದರ ನಿಗದಿಪಡಿಸುವುದು ಅಥವಾ ನಿಯಂತ್ರಿಸುವುದು ಕೇಂದ್ರ ಸರ್ಕಾರದ ಸುಪರ್ದಿಗೆ ಒಳಪಟ್ಟಿಲ್ಲ.

### ದುರ್ವಾಸನೆ: ನವದೆಹಲಿಗೆ ಹಿಂದಿರುಗಿದ ಇಂಡಿಗೊ ವಿಮಾನ

ನವದೆಹಲಿ (ಪಿಟಿಐ): ಮುಂಬೈಗೆ ಹೊರಟಿದ್ದ ಇಂಡಿಗೊ ವಿಮಾನದಲ್ಲಿ ದುರ್ವಾಸನೆ ಬಂದಿದ್ದರಿಂದ ಮುಂಜಾಗ್ರತೆಯಾಗಿ ವಿಮಾನವು, ನವದೆಹಲಿಗೆ ಹಿಂದಿರುಗಿದ ಘಟನೆ ನಡೆದಿದೆ.

ವಿಮಾನವು (6ಇ 449) ಹಾರಾಟ ನಡೆಸಿದ ಕೆಲ ಹೊತ್ತಿನಲ್ಲಿಯೇ ಕೆಟ್ಟ ವಾಸನೆ ಬಂದಿದೆ. ಕೂಡಲೇ, ಎಚ್ಚೆತ್ತುಕೊಂಡ ಪೈಲಟ್, ನವದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಿಮಾನವನ್ನು ಸುರಕ್ಷಿತವಾಗಿ ಹಿಂದಿರುಗಿಸಿದ್ದಾರೆ. ಆದರೆ, ಈ ವಾಸನೆಗೆ ಕಾರಣ ಏನೆಂಬುದು ತಿಳಿದುಬಂದಿಲ್ಲ. 'ಪ್ರಯಾಣಿಕರು ಮುಂಬೈಗೆ ತೆರಳಲು ಪರ್ಯಾಯ ವಿಮಾನದ ವ್ಯವಸ್ಥೆ ಮಾಡಲಾಗಿದೆ. ಈ ತೊಂದರೆಗೆ ವಿಷಾದ ವ್ಯಕ್ತಪಡಿಸುತ್ತೇವೆ' ಎಂದು ಇಂಡಿಗೊ ಕಂಪನಿ ತಿಳಿಸಿದೆ.

### ಹಿರೀಸಾವೆ ಖರೀದಿ ಕೇಂದ್ರದ ಅಧಿಕಾರಿಗಳಿಗೆ ದಿಗ್ಬಂಧನ • ಕೊಬ್ಬರಿ ಖರೀದಿ ಮಿತಿ ಹೆಚ್ಚಳಕ್ಕೆ ಆಗ್ರಹ

# ನೋಂದಣಿ ಸ್ಥಗಿತ: ರೈತರ ಆಕ್ರೋಶ

ಪ್ರಜಾವಾಣಿ ವಾರ್ತೆ

ಮೈಸೂರು/ ಹಾಸನ: ಮೈಸೂರು ಭಾಗದ ಹಾಸನ, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಕೊಬ್ಬರಿ ಖರೀದಿಗೆ ನೋಂದಣಿ ಪ್ರಕ್ರಿಯೆಯು ಶುಕ್ರವಾರ ಮಧ್ಯಾಹ್ನ ಸ್ಥಗಿತಗೊಂಡಿದ್ದರಿಂದ ಆಕ್ರೋಶಗೊಂಡ ರೈತರು, ನೋಂದಣಿ ಕೇಂದ್ರಗಳ ಎದುರು ಪ್ರತಿಭಟನೆ ನಡೆಸಿದರು.

'ನೋಂದಣಿಯಲ್ಲಿ ಅಕ್ರಮ ನಡೆದಿದೆ' ಎಂದು ಆರೋಪಿಸಿ ಹಾಸನ ಜಿಲ್ಲೆಯ ಹಿರೀಸಾವೆ ಠಾಣೆಯಲ್ಲಿ ರೈತರು ದೂರು ಕೂಡ ದಾಖಲಿಸಿದ್ದಾರೆ.

ಜಿಲ್ಲೆಯ ಅರಸೀಕೆರೆ, ಚನ್ನರಾಯಪಟ್ಟಣ, ನುಗ್ಗೇಹಳ್ಳಿಯಲ್ಲಿ ಬೆಳಿಗ್ಗೆಯಿಂದಲೇ ರೈತರು ಸಾಲುಗಟ್ಟಿ ನಿಂತಿದ್ದರು. ಮಧ್ಯಾಹ್ನ 1.30ರ ನಂತರ ಸರ್ವರ್‌ನಲ್ಲಿ ನೋಂದಣಿ ಸ್ಥಗಿತಗೊಂಡಿತು. ಹಿರೀಸಾವೆಯ ಕೇಂದ್ರದ ಎದುರು ಆಕ್ರೋಶ ವ್ಯಕ್ತಪಡಿಸಿದ ರೈತರು, ನೋಂದಣಿ ಮಾಡುತ್ತಿದ್ದವರನ್ನು ಕೇಂದ್ರದಲ್ಲಿಯೇ ಕೂಡಿ ಹಾಕಿ, ಮೇಲಧಿಕಾರಿಗಳು ಬಂದು ಸ್ಪಷ್ಟನೆ ನೀಡಬೇಕೆಂದು ಪಟ್ಟು ಹಿಡಿದರು. ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ನಂತರ ಠಾಣೆಗೆ ತೆರಳಿದ ರೈತರು, '600 ಜನರಿಗೆ ಟೋಕನ್ ನೀಡಿದ್ದು, 300ಕ್ಕೂ ಹೆಚ್ಚು ಜನರ ನೋಂದಣಿಯೇ ಆಗಿಲ್ಲ. ನೋಂದಣಿಯಲ್ಲಿ ಅಕ್ರಮ ನಡೆದಿದೆ' ಎಂದು ದೂರು ನೀಡಿದ್ದಾರೆ.

'ಸರದಿ ಸಾಲಿನಲ್ಲಿ ನಿಂತಿದ್ದವರ ಹೆಸರು ನೋಂದಾಯಿಸದೇ, ತಮಗೆ ಬೇಕಾದವರು, ರಾಜಕೀಯ ನಾಯಕರ ಶಿಫಾರಸು ತಂದವರ ಹೆಸರನ್ನು ನೋಂದಾಯಿಸಿದ್ದಾರೆ' ಎಂದು ಜಿಲ್ಲೆಯ ಕೊತ್ತನಹಳ್ಳಿ ರೈತ ಮನೋಹರ್ ಆಕ್ರೋಶ ವ್ಯಕ್ತಪಡಿಸಿದರು.

ಚನ್ನರಾಯಪಟ್ಟಣದಲ್ಲೂ ಕಾಂಗ್ರೆಸ್ ಮುಖಂಡರ ನೇತೃತ್ವದಲ್ಲಿ ರೈತರು ಪ್ರತಿಭಟಿಸಿದರು. ಅರಸೀಕೆರೆ ಎಪಿಎಂಸಿಯಲ್ಲೂ ರೈತರು ಪ್ರತಿಭಟನೆಗಿಳಿದರು.

ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಕೆ.ಎಂ. ಶಿವಲಿಂಗೇಗೌಡ, 'ಕೇಂದ್ರ ಸರ್ಕಾರ ನಾಫೆಡ್ ಮೂಲಕ ಈ ಬಾರಿ ರಾಜ್ಯದಿಂದ 62,500 ಟನ್ ಕೊಬ್ಬರಿ ಖರೀದಿಗೆ ಅವಕಾಶ ನೀಡಿದ್ದರಿಂದ ಶೇ 25-30ರಷ್ಟು ರೈತರು ಮಾತ್ರ ನೋಂದಾಯಿಸಿಕೊಂಡಿದ್ದಾರೆ. ನೋಂದಣಿ ಮಾಡುವ ಅಧಿಕಾರಿಗಳು ಕೆಲ ವರ್ತಕರೊಂದಿಗೆ ಶಾಮೀಲಾಗಿರುವುದರಿಂದ ರೈತರಿಗೆ ಅನ್ಯಾಯವಾಗಿದೆ' ಎಂದು ದೂರಿದರು.

**ಮೂರೇ ದಿನಕ್ಕೆ ಬಂದ್:** ಚಾಮರಾಜನಗರ, ಮಂಡ್ಯ ಜಿಲ್ಲೆಯಲ್ಲಿ ಆರಂಭವಾದ ಮೂರನೇ ದಿನಕ್ಕೆ ನೋಂದಣಿ ಸ್ಥಗಿತಗೊಂಡಿದೆ. ಚಾಮರಾಜನಗರ ಜಿಲ್ಲೆಯ 2 ಕೇಂದ್ರದಲ್ಲಿ 8 ರೈತರು ಹೆಸರು ನೋಂದಾಯಿಸಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ 6 ಕೇಂದ್ರಗಳನ್ನು ತೆರೆಯಲಾಗಿತ್ತು.

**ಬೆಳೆಗಾರರಿಗೆ ನಿರಾಸೆ:** ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಎಪಿಎಂಸಿ ಮತ್ತು ಪಂಚನಹಳ್ಳಿ ಹೋಬಳಿ ಕೇಂದ್ರದಲ್ಲಿ ನೋಂದಣಿ ಕೇಂದ್ರ ತೆರೆಯಲಾಗಿತ್ತು. ಸರ್ವರ್ ಸ್ಥಗಿತಗೊಂಡಿದ್ದರಿಂದ ಕೇಂದ್ರದ ಮುಂದೆ ನಿಂತಿದ್ದ ರೈತರು ನಿರಾಸೆಯಿಂದ ಮನೆಯತ್ತ ಹೆಜ್ಜೆ ಹಾಕಿದರು.

### ಮುಖ್ಯಾಂಶಗಳು

- ನೋಂದಣಿ ಕೇಂದ್ರಗಳ ಎದುರು ಪ್ರತಿಭಟನೆ
- ಅಕ್ರಮ ನೋಂದಣಿ: ಹಿರೀಸಾವೆ ಠಾಣೆಗೆ ದೂರು
- ಖರೀದಿ ಅವಧಿ ವಿಸ್ತರಣೆಗೆ ಒತ್ತಾಯ

> ರೈತರ ಬಳಿ ದಾಸ್ತಾನಿರುವ ಎಲ್ಲ ಕೊಬ್ಬರಿ ಖರೀದಿಸುವಂತೆ ಕೇಂದ್ರಕ್ಕೆ ಒತ್ತಾಯಿಸಲಾಗುವುದು. ಸ್ಪಂದಿಸದಿದ್ದರೆ ಪ್ರತಿಭಟನೆ ನಡೆಸಲಾಗುವುದು
> **ಕೆ.ಎಂ. ಶಿವಲಿಂಗೇಗೌಡ,** ಶಾಸಕ



ಹಾಸನ ಜಿಲ್ಲೆಯ ಹಿರೀಸಾವೆ ನೋಂದಣಿ ಕೇಂದ್ರಕ್ಕೆ ಶುಕ್ರವಾರ ಮಧ್ಯಾಹ್ನ ರೈತರು ಮುತ್ತಿಗೆ ಹಾಕಿದರು

### ಕೊಬ್ಬರಿ ನೋಂದಣಿ ವಿವರ

| ಜಿಲ್ಲೆ | ಕ್ವಿಂಟಲ್ | ರೈತರು |
|---|---|---|
| ತುಮಕೂರು | 2,10,659 | 15,199 |
| ಹಾಸನ | 2,08,416 | 15,728 |
| ಮಂಡ್ಯ | 87,654 | 6,879 |
| ಚಿಕ್ಕಮಗಳೂರು | 60,855 | 4,223 |
| ಚಿತ್ರದುರ್ಗ | 50,987 | 3,471 |
| ಮೈಸೂರು | 5,012 | 399 |
| ರಾಮನಗರ | 1,593 | 129 |
| ಚಾಮರಾಜನಗರ | 129 | 8 |

### ಮನೆಗೆ ಮರಳಿದ ಬೆಳೆಗಾರರು

ಚಿತ್ರದುರ್ಗ: ಜಿಲ್ಲೆಯ ಹೊಸದುರ್ಗದ ಎಪಿಎಂಸಿಯಲ್ಲಿ 2, ಹಿರಿಯೂರು ಮತ್ತು ಚಿತ್ರದುರ್ಗದಲ್ಲಿ ತಲಾ 1 ಖರೀದಿ ಕೇಂದ್ರ ತೆರೆಯಲಾಗಿತ್ತು.

ಹೊಸದುರ್ಗ ಎಪಿಎಂಸಿಯಲ್ಲಿ ತೆರೆದಿದ್ದ ಕೇಂದ್ರದ ಮುಂದೆ ಸರದಿ ಸಾಲಿನಲ್ಲಿ 50ಕ್ಕೂ ಹೆಚ್ಚು ರೈತರು ನಿಂತಿದ್ದರು. ನೋಂದಣಿ ಪ್ರಕ್ರಿಯೆ ಸ್ಥಗಿತಗೊಳ್ಳುತ್ತಿದ್ದಂತೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಚಿತ್ರದುರ್ಗ ನೋಂದಣಿ ಕೇಂದ್ರದಲ್ಲಿ 15ಕ್ಕೂ ಹೆಚ್ಚು ರೈತರು ಕಿಡಿಕಾರಿದರು.

ಸ್ಥಳಕ್ಕೆ ಭೇಟಿ ನೀಡಿದ ಮಾರಾಟ ಮಹಾಮಂಡಳದ ಅಧಿಕಾರಿಗಳು ರೈತರ ಮನವೊಲಿಸುವ ಪ್ರಯತ್ನ ಮಾಡಿದರು. 'ಸರ್ಕಾರ ಅವಧಿಯನ್ನು ವಿಸ್ತರಣೆ ಮಾಡಿದರೆ ಮತ್ತೆ ಖರೀದಿ ಆರಂಭಿಸಲಾಗುವುದು' ಎಂದು ಭರವಸೆ ನೀಡಿದರು. ಬಳಿಕ ರೈತರು ಮನೆಯತ್ತ ಸಾಗಿದರು.

### ಖರೀದಿ ಕೇಂದ್ರಕ್ಕೆ ಮುತ್ತಿಗೆ ಯತ್ನ

ತುಮಕೂರು: ಜಿಲ್ಲೆಯ ಚಿಕ್ಕನಾಯಕನಹಳ್ಳಿ ಹಾಗೂ ಹುಳಿಯಾರಿನಲ್ಲಿ ತೆರೆದಿದ್ದ ಕೇಂದ್ರದ ಮುಂದೆ ಸರದಿಯಲ್ಲಿ ನಿಂತಿದ್ದ ನೂರಾರು ರೈತರಿಗೆ ನೋಂದಣಿ ಮಾಡಿಸಲು ಅವಕಾಶ ಸಿಗಲಿಲ್ಲ. ಇದರಿಂದ ಅಸಮಾಧಾನಗೊಂಡ ರೈತರು ಕೇಂದ್ರಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು.

ತಿಪಟೂರು ಹಾಗೂ ತುರುವೇಕೆರೆ ತಾಲ್ಲೂಕಿನಲ್ಲೂ ಹಲವು ರೈತರಿಗೆ ನೋಂದಣಿ ಸಾಧ್ಯವಾಗಲಿಲ್ಲ.

'ಬೆಲೆ ಕುಸಿತದಿಂದ ರೈತರು ಕಂಗಾಲಾಗಿದ್ದಾರೆ. ಹೆಚ್ಚಿನ ಪ್ರಮಾಣದಲ್ಲಿ ದಾಸ್ತಾನು ಇಟ್ಟಿದ್ದಾರೆ. ಹಾಗಾಗಿ, ಸರ್ಕಾರವು ಖರೀದಿಗೆ ನಿಗದಿಪಡಿಸಿರುವ ಮಿತಿಯನ್ನು ತೆಗೆದುಹಾಕಿ ಎಲ್ಲ ರೈತರಿಂದ ಖರೀದಿಸಬೇಕು' ಎಂದು ರೈತ ಸಂಘದ ಮುಖಂಡ ತಿಪಟೂರಿನ ಯೋಗೇಶ್ವರಸ್ವಾಮಿ ಒತ್ತಾಯಿಸಿದರು.

### 46,036 ಮಂದಿ ನೋಂದಣಿ

ಬೆಂಗಳೂರು: ಕೇಂದ್ರ ಸರ್ಕಾರವು ಈ ಬಾರಿ ರಾಜ್ಯದಿಂದ ಉಂಡೆ ಕೊಬ್ಬರಿ ಖರೀದಿ ಮಿತಿಯನ್ನು 6.25 ಲಕ್ಷ ಕ್ವಿಂಟಲ್‌ಗೆ ನಿಗದಿಪಡಿಸಿದೆ.

ಅಷ್ಟು ಪ್ರಮಾಣದ ಕೊಬ್ಬರಿ ಮಾರಾಟಕ್ಕೆ 46,036 ರೈತರು ಹೆಸರು ನೋಂದಣಿ ಮಾಡಿದ್ದಾರೆ. ಹಾಗಾಗಿ, ನಿಗದಿಪಡಿಸಿದ ಪ್ರಮಾಣ ಪೂರ್ಣಗೊಂಡಿದ್ದರಿಂದ ಸರ್ವರ್ ಸ್ವಯಂ ಚಾಲಿತವಾಗಿ ಸ್ಥಗಿತಗೊಂಡಿದೆ.

'ದಾಸ್ತಾನು ಇರುವ ಎಲ್ಲಾ ಕೊಬ್ಬರಿ ಖರೀದಿಸಬೇಕು ಎಂದು ರೈತರು ಮನವಿ ಮಾಡುತ್ತಿದ್ದಾರೆ. ಬೆಳೆಗಾರರ ಸಮಸ್ಯೆಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದೆ' ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಆರ್. ಶ್ರೀಧರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

### ಎನ್.ಆರ್.ಪುರ ರಬ್ಬರ್

| | |
|---|---|
| ಆರ್‌ಎಸ್‌ಎಸ್-4 | ₹161 |
| ಆರ್‌ಎಸ್‌ಎಸ್-5 | ₹156 |
| ಗುಡ್ ಲಾಟ್ | ₹139 |

(ಪ್ರತಿ ಕೆ.ಜಿಗೆ)

## ಜೊಮಾಟೊ ಷೇರು ಶೇ 4ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಆನ್‌ಲೈನ್ ಆಹಾರ ವಿತರಣಾ ಸಂಸ್ಥೆಯಾದ ಜೊಮಾಟೊ ಲಿಮಿಟೆಡ್‌ನ ಷೇರಿನ ಮೌಲ್ಯ ಶುಕ್ರವಾರ ಶೇ 4ರಷ್ಟು ಏರಿಕೆಯಾಗಿದೆ.

2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹138 ಕೋಟಿ ನಿವ್ವಳ ಲಾಭ ಗಳಿಸಿದ ನಂತರ ಈ ಹೆಚ್ಚಳವಾಗಿದೆ ಎಂದು ಕಂಪನಿಯು ತಿಳಿಸಿದೆ.

ಹಿಂದಿನ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಕಂಪನಿಯು ₹347 ಕೋಟಿ ನಿವ್ವಳ ನಷ್ಟ ಕಂಡಿತ್ತು. ಈ ತ್ರೈಮಾಸಿಕದಲ್ಲಿ ಕಾರ್ಯಾಚರಣೆ ವರಮಾನವು ₹1,948 ಕೋಟಿಯಿಂದ ₹3,288 ಕೋಟಿಗೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

**ಷೇರು ಸೂಚ್ಯಂಕ ಏರಿಕೆ:** ಐಸಿಐಸಿಐ ಬ್ಯಾಂಕ್, ಎಸ್‌ಬಿಐ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಖರೀದಿ ಹೆಚ್ಚಳದಿಂದಾಗಿ ಷೇರು ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 167 ಅಂಶ ಏರಿಕೆಯಾಗಿ 71,595ಕ್ಕೆ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 64 ಅಂಶ ಹೆಚ್ಚಳವಾಗಿ 21,782ರಲ್ಲಿ ಅಂತ್ಯಗೊಂಡಿತು.

**ಪೇಟಿಎಂ ಷೇರು ಮತ್ತೆ ಕುಸಿತ:** ಪೇಟಿಎಂನ ಮಾತೃಸಂಸ್ಥೆಯಾದ ಒನ್97 ಕಮ್ಯುನಿಕೇಷನ್ ಲಿಮಿಟೆಡ್‌ನ ಷೇರು ಮೌಲ್ಯ ಸತತ ಎರಡು ದಿನಗಳಿಂದ ಶೇ 15.48ರಷ್ಟು ಕುಸಿತ ಕಂಡಿದೆ.

ಬಿಎಸ್‌ಇಯಲ್ಲಿ ಶೇ 6.09 ಮತ್ತು ಎನ್‌ಎಸ್‌ಇಯಲ್ಲಿ ಶೇ 6.15ರಷ್ಟು ಇಳಿಕೆಯಾಗಿದೆ. ಎರಡು ದಿನಗಳಲ್ಲಿ ಕಂಪನಿಯ ಮಾರುಕಟ್ಟೆ ಮೌಲ್ಯದಲ್ಲಿ ₹4,870 ಕೋಟಿ ಕರಗಿದೆ.

**ಕರಾಚಿ ಸೂಚ್ಯಂಕ ಕುಸಿತ:** ಪಾಕಿಸ್ತಾನದ ಚುನಾವಣಾ ಫಲಿತಾಂಶದ ಅನಿಶ್ಚಿತತೆಯಿಂದಾಗಿ ಕರಾಚಿ ಷೇರು ಸೂಚ್ಯಂಕ (ಕೆಎಸ್‌ಇ-100) ಶುಕ್ರವಾರ ಕುಸಿದಿದೆ. 1,720 ಅಂಶ ಇಳಿಕೆಯಾಗಿ 62,423ರಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು. ಗುರುವಾರದ ವಹಿವಾಟಿನಲ್ಲಿ 64,143 ಅಂಶಗಳಿಗೆ ಕೊನೆಗೊಂಡಿತ್ತು.

### ಮುಂಬೈ ಧಾರಣೆ

**ಶೇಂಗಾ** 09-02-2024

| | |
|---|---|
| ಜಾವಾ 70/80(ಹೊಸ) | 11000-11100 |
| ಜಾವಾ 80/90(ಹೊಸ) | 10700-10800 |
| ದಪ್ಪ ಮಧ್ಯಪ್ರದೇಶ(ಹೊಸ) | 9800-9900 |
| ದಪ್ಪ ಗುಜರಾತ್(ಹೊಸ) | 10700-10800 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1480 (1490) |
| ಒಂದು ವಾರದ ಡೆಲಿವರಿ | 1475 (1485) |
| ಸೋಯಾ ಕಚ್ಚಾ | 860 (855) |
| ಪಾಮ್ ವಾರದ ಡೆಲಿವರಿ | 858 (856) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 860 (855) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ ₹62,300 (62,300)

ಬೆಳ್ಳಿ ಕೆ.ಜಿ ₹70,600 (69,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ವ್ಯವಹಾರದಲ್ಲಿ ಮಾರ್ಗಸೂಚಿ ಪಾಲನೆಗೆ ಆರ್‌ಬಿಐ ತಾಕೀತು

ನವದೆಹಲಿ (ಪಿಟಿಐ): 'ಕೆಲವು ಬ್ಯಾಂಕೇತರ ಹಣಕಾಸು ಕಂಪನಿಗಳ (ಎನ್‌ಬಿಎಫ್‌ಸಿ) ವ್ಯವಹಾರವು ಆರ್‌ಬಿಐ ರೂಪಿಸಿರುವ ಮಾರ್ಗಸೂಚಿಗಳ ಅನುಸಾರ ನಡೆಯುತ್ತಿಲ್ಲ' ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಡೆಪ್ಯುಟಿ ಗವರ್ನರ್ ಎಂ. ರಾಜೇಶ್ವರ ರಾವ್ ಹೇಳಿದರು.

ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಶುಕ್ರವಾರ ಆಯೋಜಿಸಿದ್ದ ಬ್ಯಾಂಕೇತರ ಹಣಕಾಸು ಕಂಪನಿಗಳ ಸಮಾವೇಶದಲ್ಲಿ ಮಾತನಾಡಿದ ಅವರು, ಸಾಲ ಪಡೆಯಲು ಇಚ್ಛಿಸುವ ವ್ಯಕ್ತಿ ಹಾಗೂ ಸಾಲ ನೀಡಲು ತಯಾರಿರುವ ಕಂಪನಿಗಳ ನಡುವಿನ ಹಣದ ವ್ಯವಹಾರದ ವೇಳೆ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಆದರೆ, ಅದನ್ನು ಉಲ್ಲಂಘಿಸಲಾಗುತ್ತಿದೆ ಎಂದು ಎಚ್ಚರಿಕೆ ನೀಡಿದರು.

'ಬಡ್ಡಿದರ ನಿಗದಿ ಸಂಬಂಧ ಕೆಲವು ನಿಯಮಾವಳಿಗಳನ್ನು ರೂಪಿಸಲಾಗಿದೆ. ಆದರೆ, ಗ್ರಾಹಕರಿಗೆ ಅತಿಹೆಚ್ಚು ಬಡ್ಡಿ ವಿಧಿಸುವ ಮೂಲಕ ಆರ್‌ಬಿಐ ನೀಡಿರುವ ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ' ಎಂದು ಹೇಳಿದರು.

## 'ಹೊಸ ಪೀಳಿಗೆಯ ಸಾಧಕರಿಗೂ ಪ್ರಶಸ್ತಿ'

ನವದೆಹಲಿ: ಸಮಾಜದ ಮೇಲೆ ಪ್ರಭಾವವನ್ನು ಬೀರುವ ಹೊಸ ಪೀಳಿಗೆಯ ಸಾಧಕರು, ಅನ್ವೇಷಕರನ್ನು ಗುರುತಿಸಿ ಗೌರವಿಸುವ ಪ್ರಶಸ್ತಿಗಳನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಇಂಟರ್‌ನೆಟ್, ಸಾಮಾಜಿಕ ಮಾಧ್ಯಮ ಕ್ಷೇತ್ರಗಳಲ್ಲಿನ ನವಪೀಳಿಗೆ ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದ ಈ ಪ್ರಶಸ್ತಿಗಳನ್ನು ಇದೇ ಮೊದಲ ಬಾರಿಗೆ ನೀಡಲಾಗುತ್ತಿದೆ. 20 ವರ್ಗಗಳಲ್ಲಿ ಪ್ರಶಸ್ತಿ ಘೋಷಿಸುವ ಸಂಭವವಿದೆ ಎಂದೂ ತಿಳಿಸಿವೆ.

ಯೂಟ್ಯೂಬ್, ಇನ್‌ಸ್ಟಾಗ್ರಾಂನಲ್ಲಿ ಸಮಾಜದ ಮೇಲೆ ಪ್ರಭಾವ ಬೀರುತ್ತಿರುವವರನ್ನು ಗುರುತಿಸಲಾಗುತ್ತದೆ. ಹಾಗೆಯೇ ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಶಕ್ತಿ ಮತ್ತು ಸಂಸ್ಕೃತಿಯನ್ನು ಪರಿಚಯಿಸಿದ ಸಾಧಕರ ವರ್ಗ ಹಾಗೂ ಗ್ರೀನ್ ಚಾಂಪಿಯನ್ಸ್, ಸ್ವಚ್ಛತಾ ರಾಯಭಾರಿಗಳು, ಟೆಕ್ ಕ್ರಿಯೇಟರ್ಸ್ ಸೇರಿದಂತೆ ವಿವಿಧ ವರ್ಗಗಳಲ್ಲಿ ಪ್ರಶಸ್ತಿ ನೀಡಲಾಗುತ್ತದೆ.

## 'ಅವಹೇಳನಕಾರಿ ಪೋಸ್ಟ್ ತಡೆಗೆ ಕಾನೂನು'

ನವದೆಹಲಿ (ಪಿಟಿಐ): 'ಯಾವುದೇ ರೀತಿಯ ಅವಹೇಳನಕಾರಿ ಪೋಸ್ಟ್‌ಗಳನ್ನು ಯಾವ ಸಾಮಾಜಿಕ ಜಾಲತಾಣದಲ್ಲಿ ಹಾಕಲಾಗಿರುತ್ತದೆಯೋ ಅದೇ ಸಾಮಾಜಿಕ ಜಾಲತಾಣ ಸಂಸ್ಥೆಗಳನ್ನು ಹೊಣೆಗಾರರನ್ನಾಗಿ ಮಾಡಲು ಕಾನೂನುಗಳನ್ನು ತರಲಾಗುತ್ತಿದೆ' ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ರಾಜ್ಯಸಭೆಯ ಪ್ರಶ್ನೋತ್ತರ ವೇಳೆಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, 'ತಪ್ಪು ಮಾಹಿತಿ ಹರಡುವಿಕೆ ಮತ್ತು ಡೀಪ್‌ಫೇಕ್‌ಗೆ ಸಂಬಂಧಿಸಿದ ಬೆದರಿಕೆಗಳನ್ನು ಎದುರಿಸಲು ಸಾಮಾಜಿಕ ಜಾಲತಾಣಗಳ ಮಧ್ಯವರ್ತಿ ಸಂಸ್ಥೆಗಳಿಗೆ ಸಂಬಂಧಿಸಿದ ನಿಯಮಗಳಿಗೆ ತಿದ್ದುಪಡಿ ತರಲಾಗುವುದು' ಎಂದೂ ಅವರು ತಿಳಿಸಿದರು.

## ಮರುಪರಿಶೀಲನೆಗೆ ಶಿಫಾರಸು

### ವೈದ್ಯಕೀಯ ಸೀಟು ಮಿತಿ: ಎನ್‌ಎಂಸಿ ವಿವಾದಾತ್ಮಕ ಆದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ದಕ್ಷಿಣ ರಾಜ್ಯಗಳ ವೈದ್ಯಕೀಯ ಕಾಲೇಜುಗಳಲ್ಲಿ ಹೊಸ ವೈದ್ಯಕೀಯ ಸೀಟುಗಳ ಸಂಖ್ಯೆ ಮೇಲೆ ಮಿತಿ ಹೇರುವ ಕುರಿತ ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ವಿವಾದಾತ್ಮಕ ಆದೇಶವನ್ನು ಮರುಪರಿಶೀಲಿಸುವಂತೆ ಆರೋಗ್ಯ ಕುರಿತ ಸಂಸದೀಯ ಸ್ಥಾಯಿ ಸಮಿತಿ ಶಿಫಾರಸು ಮಾಡಿದೆ.

ಅಲ್ಲದೆ 'ಪ್ರದೇಶ ಆಧರಿಸಿ ನಿರ್ದಿಷ್ಟ ಮಾನದಂಡಗಳನ್ನು' ರಚಿಸುವಂತೆ ಸಮಿತಿ ಸಚಿವಾಲಯಕ್ಕೆ ತಿಳಿಸಿದೆ. ಸಮಿತಿಯು ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದ ವರದಿಯಲ್ಲಿ ಈ ಕುರಿತು ಪ್ರಸ್ತಾಪಿಸಿದೆ.

ಹೊಸ ವೈದ್ಯಕೀಯ ಕಾಲೇಜುಗಳನ್ನು ತೆರೆಯುವುದಕ್ಕೆ ಸಂಬಂಧಿಸಿದಂತೆ ಎಂಎನ್‌ಸಿ ಮಾನದಂಡಗಳನ್ನು ಪ್ರಕಟಿಸಿದ ಆರು ತಿಂಗಳ ನಂತರ ಸ್ಥಾಯಿ ಸಮಿತಿ ಈ ಕುರಿತು ಶಿಫಾರಸು ಮಾಡಿದೆ.

'ಪ್ರತಿ 10 ಲಕ್ಷ ಜನಸಂಖ್ಯೆಗೆ 100 ಎಂಬಿಬಿಎಸ್ ಸೀಟುಗಳು ಇರಬೇಕು ಎಂಬ ಮಾನದಂಡ ಇದ್ದರೆ ದಕ್ಷಿಣದ ಯಾವುದೇ ರಾಜ್ಯಗಳು ಹೊಸ ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಸಾಧ್ಯವಿಲ್ಲ. ಏಕೆಂದರೆ ಪ್ರಸ್ತುತ ಈ ರಾಜ್ಯಗಳಲ್ಲಿನ ಎಂಬಿಬಿಎಸ್ ಸೀಟುಗಳ ಸಂಖ್ಯೆಯು ಜನಸಂಖ್ಯೆ ಆಧಾರಿತ ಮಿತಿಯನ್ನು ಮೀರಿದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

2021ರ ವೇಳೆಗೆ ತಮಿಳುನಾಡಿನ ಅಂದಾಜು ಜನಸಂಖ್ಯೆ 7.64 ಕೋಟಿ ಆಗಿದ್ದು 11,600 ಎಂಬಿಬಿಎಸ್ ಸೀಟುಗಳನ್ನು ಹೊಂದಿದೆ. ಕರ್ನಾಟಕವು 11,695 (6.68 ಕೋಟಿ ಜನಸಂಖ್ಯೆ), ಆಂಧ್ರ ಪ್ರದೇಶದಲ್ಲಿ 6,435 (5.27 ಕೋಟಿ), ಕೇರಳ 4,655 (3.54 ಕೋಟಿ), ತೆಲಂಗಾಣದಲ್ಲಿ 8,540 ಸೀಟುಗಳು (3.77 ಕೋಟಿ) ಇವೆ.

ಆದರೆ, ಎನ್‌ಎಂಸಿ ಮಾನದಂಡದ ಪ್ರಕಾರ ತಮಿಳುನಾಡಿನಲ್ಲಿ 7,600 ಸೀಟುಗಳು, ಕರ್ನಾಟಕದಲ್ಲಿ 6,700, ಆಂಧ್ರ ಪ್ರದೇಶದಲ್ಲಿ 5,300, ಕೇರಳದಲ್ಲಿ 3,500 ಹಾಗೂ ತೆಲಂಗಾಣದಲ್ಲಿ 3,700 ಸೀಟುಗಳು ಮಾತ್ರ ಇರಬೇಕಾಗುತ್ತವೆ ಎಂಬುದನ್ನು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ಈ ಕುರಿತು ಎನ್‌ಎಂಸಿ ಹೊರಡಿಸಿರುವ ಅಧಿಸೂಚನೆ ನ್ಯಾಯೋಚಿತವಾಗಿಲ್ಲ. ಜತೆಗೆ ದಕ್ಷಿಣ ರಾಜ್ಯಗಳು ಕೇಂದ್ರದ ವಿರುದ್ಧ ರಾಜಕೀಯ ತಿಕ್ಕಾಟ ನಡೆಸುವುದಕ್ಕೆ ಇದು ದಾರಿ ಮಾಡಿಕೊಡುತ್ತದೆ ಎಂದು ಸಮಿತಿ ತಿಳಿಸಿದೆ.

### ಒಳ ಮೀಸಲಾತಿ: ಸಮಿತಿಯ ಎರಡನೇ ಸಭೆ

## ಉನ್ನತ ಮಟ್ಟದ ಸಮಿತಿಗೆ ಮಾದಿಗರ ಅಹವಾಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾದಿಗ ಸಮುದಾಯ ಸೇರಿದಂತೆ ಇತರ ಪರಿಶಿಷ್ಟ ಜಾತಿಗಳ ಹಿತಾಸಕ್ತಿಗಳನ್ನು ಕಾಪಾಡಲು ತೆಗೆದುಕೊಳ್ಳಬಹುದಾದ ಆಡಳಿತಾತ್ಮಕ ಕ್ರಮಗಳನ್ನು ಪರಿಶೀಲಿಸಲು ರಚನೆಯಾಗಿರುವ ಉನ್ನತ ಮಟ್ಟದ ಸಮಿತಿಯು ಶುಕ್ರವಾರ ಎರಡನೇ ಸಭೆ ನಡೆಸಿತು. ಕರ್ನಾಟಕ, ತೆಲಂಗಾಣ ಹಾಗೂ ಆಂಧ್ರ ಪ್ರದೇಶ ರಾಜ್ಯಗಳ ಮಾದಿಗ ಸಮುದಾಯದ ನಿಯೋಗವು ಸಮಿತಿಗೆ ಅಹವಾಲು ಸಲ್ಲಿಸಿತು.

ತೆಲಂಗಾಣ ವಿಧಾನಸಭೆ ಚುನಾವಣೆಯ ಪ್ರಚಾರದ ವೇಳೆ ಪ್ರಧಾನಿ ನರೇಂದ್ರ ಮೋದಿ, 'ಪರಿಶಿಷ್ಟ ಜಾತಿಗಳ ವರ್ಗೀಕರಣದ ಬೇಡಿಕೆಗೆ ಸಂಬಂಧಿಸಿದಂತೆ ಮಾದಿಗರ ಸಬಲೀಕರಣಕ್ಕಾಗಿ ಸಾಧ್ಯವಿರುವ ಎಲ್ಲ ಮಾರ್ಗಗಳನ್ನು ಅಳವಡಿಸಿಕೊಳ್ಳಲು ಕೇಂದ್ರವು ಶೀಘ್ರದಲ್ಲೇ ಸಮಿತಿ ರಚಿಸಲಿದೆ' ಎಂದು ಹೇಳಿದ್ದರು. ಪ್ರಧಾನಿ ನಿರ್ದೇಶನದ ಮೇರೆಗೆ ಸಂಪುಟ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ.

